ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 39


ಸೆಪ್ಟೆಂಬರ್ 28, 2008

ಕನ್ನಡ ವಾರಪತ್ರಿಕೆ

www.janashakthi.org

ರೂ. 5/-





ಇದು ಕ್ರೈಸ್ತರ ಮೇಲಿನ ದಾಳಿಯಲ್ಲ ಪ್ರಜಾಪ್ರಭುತ್ವದ ಮೇಲಿನ ದಾಳಿ



ಅಮೇರಿಕಾದ ಹಣಕಾಸು ಮಾರುಕಟ್ಟೆ ದಿವಾಳಿ!!

ಶಿಕ್ಷಣದ ಹಕ್ಕಿಗಾಗಿ ಸಂಘರ್ಷದ ಸಂಕಲ್ಪ





ತಿಪಟೂರು : ಸೌಹಾರ್ದತೆಯ 'ವಿಸರ್ಜನೆ!'

ಸೆಪ್ಟೆಂಬರ್ 25 ಅಣು ಒಪ್ಪಂದದ ಕರಾಳ ದಿನವೇ ?

ಸಾಮ್ರಾಜ್ಯಶಾಹಿ ಮತ್ತು ಅಂತರರಾಷ್ಟ್ರೀಯ ಭಯೋತ್ಪಾದನೆ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಅಂತರರಾಷ್ಟ್ರೀಯ ಭಯೋತ್ಪಾದನೆಯ ವಿರಾಟ್‌ಸ್ವರೂಪವನ್ನು ಸ್ಥೂಲವಾಗಿ ಗಮನಿಸುವುದು ಈ ಲೇಖನದ ವಸ್ತು.

ನಮ್ಮ ಭೂಲೋಕದ ಪ್ರಭಾವೀ ಮಾಧ್ಯಮಗಳಿಂದ ಬಹುತೇಕ ಪ್ರಕಟಕ್ಕೆ ಬಾರದ ಸಾಮ್ರಾಜ್ಯಶಾಹಿಗಳ ಸ್ವರೂಪವು ಛದ್ಮವೇಶದ್ದಾಗಿದ್ದು, ಅದರ ಅಸಲೀ ಮುಖವು ಭಯಾನಕವೂ ಕರಾಳವೂ ಆಗಿದೆ. ನಮ್ಮ ದೇಶದ ಸ್ವಾಯತ್ತತೆ ಮತ್ತು ಸಾರ್ವಭೌಮತೆಯನ್ನು ಬಯಸುವ ಪ್ರತಿಯೊಬ್ಬನೂ ಈ ಛದ್ಮವೇಶದ ಮರೆಯಲ್ಲಿ ಅಡಗಿರುವ ನಿಜರೂಪವನ್ನು ಮನಗಾಣುವುದು ಮತ್ತು ನಮ್ಮ ಪ್ರಜಾಪ್ರಭುತ್ವವನ್ನು ರಕ್ಷಿಸಿ ಬೆಳೆಸುವುದು ತುರ್ತಿನ ಅಗತ್ಯವಾಗಿದೆ.

ಈ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಭಯೋತ್ಪಾದನೆಯ ವಿರಾಟ್‌ಸ್ವರೂಪವನ್ನು ಸ್ಥೂಲವಾಗಿ ಗಮನಿಸುವುದು ಈ ಲೇಖನದ ವಸ್ತು.

ಇಂದು ಭಯೋತ್ಪಾದನೆ ಜಾಗತಿಕಮಟ್ಟದಲ್ಲಿ ವ್ಯಾಪಕವಾಗಿ ಹರಡಿದೆ. ಅದರ ರೂಪಗಳೂ ವಿಭಿನ್ನವಾಗಿವೆ. ಕೆಲವೊಂದು ಬಗೆಗಳು ದೇಶೀಯವಾಗಿ ಗಂಡಾಂತರಕಾರಿಯಾದರೆ ಕೆಲವೊಂದು ವಿಶ್ವಶಾಂತಿಗೇ ಅಪಾಯವನ್ನು ತಂದೊಡ್ಡುವಂಥವು. ಆದರೆ ಇವೆಲ್ಲವುಗಳ ಹಿಂದೆ ಇರುವ ಸಾಮ್ರಾಜ್ಯಶಾಹಿಯ ಕೈವಾಡ ಮತ್ತು ಕುತಂತ್ರ ಗಮನಾರ್ಹವಾದುದು.

ಈ ದಿಸೆಯಲ್ಲಿ ಭಯೋತ್ಪಾದನೆ (ಟೆರರಿಸಂ: ಹಿಂದಿಯಲ್ಲಿ 'ಆತಂಕವಾದ') ಯನ್ನು ಎರಡು ಬಗೆಯಲ್ಲಿ ವಿಂಗಡಿಸಬಹುದು. ಒಂದು: ಯಾವುದೇ ದೇಶದ ಸರಕಾರ ಹಾಗೂ ಅದರ ಅಧಿಕಾರಿಗಳಿಂದ ನಡೆಸಲ್ಪಡುವಂಥದು. ಎರಡನೆಯದು ಯಾವುದೇ ದೇಶದ ಒಳಗಣ ಸಂಘಟನೆ ಹಾಗೂ ಖಾಸಗಿ ವ್ಯಕ್ತಿಗಳ ಕೂಟಗಳಿಂದ ನಡೆಸಲ್ಪಡುವಂಥದು. ಇವೆರಡರಲ್ಲಿ ಮೊದಲನೆಯದ್ದು ಅತೀ ಹೆಚ್ಚು ಕರಾಳವಾದುದು.

ಈ ಬಗೆಯ ಭಯೋತ್ಪಾದನೆಯು ಶೀತಲ ಯುದ್ಧದ ಆರಂಭದ ಕಾಲದಿಂದಲೇ ಸಾಮ್ರಾಜ್ಯವಾದಿ ದೇಶಗಳ, ಅದರಲ್ಲೂ ಮುಖ್ಯವಾಗಿ ಅಮೇರಿಕಾದ ವಿದೇಶ ನೀತಿಯ ಅಭಿನ್ನ



ಅಂಗವಾಗಿತ್ತು. ರಾಜಕೀಯ, ನೈತಿಕ ಮೌಲ್ಯಗಳು ಶೂನ್ಯವಾದಾಗ ಹಿಂಸೆಯೊಂದೇ ಭಯೋತ್ಪಾದನೆಯ ಪ್ರಮುಖ ಸಾಧನವಾಗುತ್ತದೆ. ಮೂರನೆಯ ವಿಶ್ವದ ದೇಶಗಳು ತಮ್ಮ ಸಾಮ್ರಾಜ್ಯಶಾಹಿತ್ವದ ಹಿತ ಸಾಧನೆಗೆ ಕಂಟಕವಾಗಿದ್ದರೆ, ತನ್ನದೇ ಸ್ವಂತದ ಹಾದಿ ಹಿಡಿದಿದ್ದರೆ ಅಂಥ ದೇಶಗಳಿಗೆ ಆರ್ಥಿಕ ದಿಗ್ಬಂಧನವನ್ನು ಉಂಟುಮಾಡುವುದು, ಚುನಾಯಿತ ಸರಕಾರಗಳನ್ನು ಉರುಳಿಸುವುದು, ತಮ್ಮ ಕೈಗೊಂಬೆ ಸರಕಾರವನ್ನು ಅಥವಾ ಮಿಲಿಟರಿ ಸರ್ವಾಧಿಕಾರಿ ಸರಕಾರಗಳನ್ನು ಸ್ಥಾಪಿಸುವುದು ಆ ಮೂಲಕ ಸಾಮ್ರಾಜ್ಯಶಾಹಿಯ ನಿರಂತರ ಲಾಭ ಹಾಗೂ ಹಿತ ಸಾಧಿಸುವುದೇ ಗುಪ್ತ ಹಾಗೂ ಪ್ರತ್ಯಕ್ಷ ಎಜೆಂಡವಾಗಿರುತ್ತದೆ. ಹೀಗೆ ಇದೊಂದು ಜಾಗತಿಕ ಮಟ್ಟದ ನವ ವಸಾಹತುಶಾಹಿ.

ಅಮೇರಿಕಾ ತನ್ನನ್ನು ವಿಶ್ವದ 'ಮಹಾನ್ ಪ್ರಜಾಪ್ರಭುತ್ವ ದೇಶ' - ಮಾನವ ಹಕ್ಕುಗಳ ಏಕೈಕ ಸಂರಕ್ಷಕ' ಎಂದು ಕೊಚ್ಚಿಕೊಳ್ಳುತ್ತದೆ ಅಥವಾ ಅದರ ಎಂಜಲಿಗೆ ಜೊಲ್ಲು ಸುರಿಸುವವರು ಹೀಗೆಂದು ಡೋಲು ಬಾರಿಸುತ್ತಿರುತ್ತಾರೆ (ಸೋವಿಯತ್ ಪತನದ ನಂತರದ ಜಾಗತಿಕ ವಿದ್ಯಮಾನಗಳು ಇಂತಹ ಬುದ್ಧಿಜೀವಿಗಳ ಬಾಯಿ ಕಟ್ಟಿಸುತ್ತಿರುವುದಂತೂ ಸತ್ಯ). ಅಲ್ಲದೇ ಪ್ರಕಟವಾಗಿ ಅಮೇರಿಕ ಹೇಳುತ್ತಿರುವುದೇನು? 'ನಾವು ಅಂತರರಾಷ್ಟ್ರೀಯ ಭಯೋತ್ಪಾದನೆಯ ವಿರುದ್ಧ ನಿರಂತರ ಹೋರಾಟದಲ್ಲಿ ಬಹುಶ್ರುತರು' ಆದರೆ ವಾಸ್ತವ ಸ್ಥಿತಿ ಬೇರೆಯೇ ಇದೆ. ಕಪಟ, ಮೋಸ, ಠಕ್ಕು, ಸುಳ್ಳು ಮತ್ತು 'ಭೂಮ' ನಿರ್ಲಜ್ಜತೆ ಅಮೇರಿಕಾದ ಅವಿಭಾಜ್ಯ ಗುಣಧರ್ಮವಾಗಿದೆ. ಆದರಿಂದಲೇ ಈ ಧೂರ್ತರ ದೃಷ್ಟಿಯಲ್ಲಿ ಪ್ಯಾಲಿಸ್ತಾನಿಯರ ವಿಮೋಚನಾ ಸಂಘಟನೆ, ನಿಕರಾಗುವದ ಸ್ಯಾಂಡಿನಿಸ್ಟರ ಹೋರಾಟ, ಲಿಬಿಯಾ ಅಥವಾ ದಕ್ಷಿಣ ಆಫ್ರಿಕಾದ ಸ್ವಾಪೊ ಜನಸಂಘಟನೆ - ಇವುಗಳೆಲ್ಲಾ ಭಯೋತ್ಪಾದನೆಯ ಕೇಂದ್ರಗಳು! (ಅಂದರೆ, ದೋಷ ತೋಳದ್ದಲ್ಲ, ಬದಲಿಗೆ ತನ್ನನ್ನು ರಕ್ಷಿಸಿಕೊಳ್ಳಲು ಒದ್ದಾಡುತ್ತಿರುವ ಕುರಿಮರಿಗಳದ್ದು) ಆದ್ದರಿಂದ ಯಾವುದೇ ದೇಶದ ಜನತೆಯ ಸ್ವಾತಂತ್ರ್ಯ ಹೋರಾಟ ಇವರಿಗೆ ಭಯೋತ್ಪಾದನೆಯಾಗಿ ಕೇಂದ್ರವಾಗಿ ಕಾಣಿಸುತ್ತದೆ. ವಾಸ್ತವದಲ್ಲಿ ಅಮೇರಿಕಾ ಯಾವ ಪ್ರಜಾಪ್ರಭುತ್ವವಾದಿ ದೇಶದ ಅಸ್ತಿತ್ವವನ್ನೂ ಸಹಿಸುವುದಿಲ್ಲ.

ಇದನ್ನು ಕೆಲವೊಂದು ಉದಾಹರಣೆಗಳ ಮೂಲಕ ಗಮನಿಸಬಹುದು -

1945 – ಮೆನುಜುವೆಲಾ:

ಜನರಲ್ ಮೆಡಿನಾರವರ ಸರಕಾರವು ತನ್ನ ರಾಷ್ಟ್ರೀಯ ತೈಲಉದ್ಯಮವನ್ನು ಅಮೇರಿಕಾದ ಬಹುರಾಷ್ಟ್ರೀಯ ಕಂಪೆನಿಗಳ ಹಸ್ತಕ್ಷೇಪದಿಂದ ರಕ್ಷಿಸಲು ಕ್ರಮ ಕೈಗೊಂಡಿತು. ಆದರೆ ಅಮೇರಿಕಾದ ಗುಪ್ತಚರ ಇಲಾಖೆ ಸರಕಾರವನ್ನು ಪದಚ್ಯುತಗೊಳಿಸುವಲ್ಲಿ ಸಫಲವಾಯಿತು.

ಇದೇ ಕಾಲಘಟ್ಟದಲ್ಲಿ (1954 - 56) ಕ್ರಾಂತಿಯಿಂದ ನವೋದಯಕ್ಕೆ ದಾಪುಗಾಲು ಹಾಕುತ್ತಿದ್ದ ಚೈನಾವನ್ನು ನುಚ್ಚುನೂರು ಮಾಡಲು ಅಮೇರಿಕಾ ಆಕ್ರಮಣ ಮಾಡಿತು. ಈ ಆಕ್ರಮಣದಲ್ಲಿ 1,13,000 ಅಮೇರಿಕಾದ ಸೈನಿಕರು, 600ಕ್ಕೂ ಹೆಚ್ಚು ಯುದ್ಧವಿಮಾನಗಳು ಮತ್ತು ನೂರ ಐವತ್ತು ಯುದ್ಧದ ಹಡಗುಗಳು ಉಪಯೋಗಿಸಲ್ಪಟ್ಟಿದ್ದವು. ಗ್ರೀಸ್‌ನಲ್ಲಿ ನಡೆಯುತ್ತಿದ್ದ ಪ್ರಜಾಪ್ರಭುತ್ವ ಕ್ರಾಂತಿಯನ್ನು ಅಮೇರಿಕಾ ಮತ್ತು ಬ್ರಿಟನ್ ಜಂಟಿಯಾಗಿ 5,000 ಸೈನಿಕರು, 200 ಯುದ್ಧ ವಿಮಾನಗಳು ಮತ್ತು ಯುದ್ಧ ಹಡಗುಗಳ ಮೂಲಕ ಮಧ್ಯ ಪ್ರವೇಶ ಮಾಡಿ ವಿಫಲಗೊಳಿಸಿತು.

1947 – ಪೆರಾಗ್ವೆ:

ಸರ್ವಾಧಿಕಾರಿ ಮೊರಿನಿಗೊ ವಿರುದ್ಧ ಜನಪ್ರಿಯವಾದ ಜನತಾಕ್ರಾಂತಿಯು ನಿರ್ಣಾಯಕ ಹಂತವನ್ನು ತಲುಪುತ್ತಿರುವಂತೆಯೇ ಅಮೇರಿಕಾ ನೇರವಾಗಿ ಸೈನ್ಯವನ್ನು ಉಪಯೋಗಿಸಿ ಆ ಜನಕ್ರಾಂತಿಯನ್ನು ವಿಫಲಗೊಳಿಸಿ ತನ್ನ ಕೈಗೊಂಬೆ ಮೊರಿನಿಗೊ ಸರ್ವಾಧಿಕಾರವನ್ನು ಭದ್ರಗೊಳಿಸಿತು.

1948:

ಫಿಲಿಫೈನ್ಸ್‌ನಲ್ಲಿ ಕಾರ್ಮಿಕವರ್ಗವು ಕ್ರಾಂತಿಗೆ ನೆಲ ಸಜ್ಜುಗೊಳಿಸಿತು. ಅಲ್ಲಿಯ ಕೈಗೊಂಬೆ ಸರ್ವಾಧಿಕಾರಿ ಸರಕಾರಕ್ಕೆ ಅಮೇರಿಕಾ 90,000 ಸೈನಿಕರ ತನ್ನ ಅತೀ ಶಕ್ತವಾದ ಸೈನ್ಯವನ್ನು ಕಳುಹಿಸಿ ಕ್ರಾಂತಿಯನ್ನು ನುಚ್ಚುನೂರು ಮಾಡಿತು.

1950 – 53:

ಅಮೇರಿಕಾದ ಏಳನೆಯ ಯುದ್ಧ ನೌಕೆಯು (ಸೆವೆನ್ತ್ ಫ್ಲೀಟ್) ತೈವಾನ್ ಅನ್ನು ವಶಪಡಿಸಿಕೊಂಡಿತು. ಇದೇ ವರ್ಷ ಜೂನ್ ತಿಂಗಳಿನಲ್ಲಿ ಅದು ಕೋರಿಯಾವನ್ನು ಆಕ್ರಮಿಸಿತು. ಇದರಲ್ಲಿ 3,50,000 ಸೈನಿಕರು, 1,000 ಟ್ಯಾಂಕರುಗಳು, 1,600 ಯುದ್ಧ ವಿಮಾನಗಳು ಮತ್ತು 300 ನೌಕಾಪಡೆಯ ಹಡಗುಗಳು ಭಾಗವಹಿಸಿದ್ದವು. ಈ ಯುದ್ಧದಲ್ಲಿ ಅಮೇರಿಕವು ರಾಸಾಯನಿಕ ಮತ್ತು ಬೆಕ್ಟೀರಿಯಾಗಳನ್ನೊಳಗೊಂಡ ಶಸ್ತ್ರಗಳ ಪ್ರಯೋಗವೇ ಮೊದಲಾದ ಅತೀ ಕ್ರೂರವಾದ ಮಾರ್ಗಗಳನ್ನು ಅನುಸರಿಸಿತು. ಪೋರ್ಟರಿಕೊ ಕಳೆದ ಶತಮಾನದಲ್ಲಿ ಅಮೇರಿಕಾದಿಂದ ನುಂಗಿ ಹಾಕಲ್ಪಟ್ಟ



ವಿಯಟ್ನಾಂ ಬೀದಿಗಳಲ್ಲಿ ಘೋರ ಹತ್ಯಾಕಾಂಡ

ಒಂದು ವಸಾಹತು. ಅಲ್ಲಿ ನಡೆದ ರಾಷ್ಟ್ರೀಯ ವಿಮೋಚನಾ ಹೋರಾಟವನ್ನು ಹತ್ತಿಕ್ಕಿ 1952ರ ಹೊತ್ತಿಗೆ ಅಮೆರಿಕಾದ ಸಿ.ಐ.ಎ. ಅಲ್ಲಿನ ಜನರಲ್ ಬ್ಯಾಟಿಸ್ಟನನ್ನು ಅಧಿಕಾರಕ್ಕೇರಿಸಿತು. ಬ್ಯಾಟಿಸ್ಟನು ಕ್ಯೂಬಾವನ್ನು ಅಮೇರಿಕಾದ ಅರೆವಸಾಹತಾಗಿ ಮಾರ್ಪಡಿಸಿದ. 1953ರ ಜೂನ್‌ನಲ್ಲಿ ಅಮೇರಿಕಾ ಬರ್ಲಿನ್‌ನಲ್ಲಿ ಪ್ರಚೋದನಾತ್ಮಕ ಕಾರ್ಯಾಚರಣೆ ನಡೆಸಿತು. ಅದೇ ವರ್ಷ ಅಗಸ್ಟ್‌ನಲ್ಲಿ ಸಿ.ಐ.ಎ. ನೆರವಿನಿಂದ ಅಮೇರಿಕಾ ಇರಾನಿನ ಮುಸಾದೆಕ್ ಸರಕಾರವನ್ನು ಪದಚ್ಯುತಗೊಳಿಸಿತು.

ಮುಂದಿನವಾರಕ್ಕೆ

'ಗಂಭೀರ ವಿಚಾರಕ್ಕೆ ಪ್ರೇರಣೆ'

ಒಂದು ಪತ್ರ

ಪ್ರಿಯರೆ,

ಸೆಪ್ಟೆಂಬರ್ 7ರ 'ಜನಶಕ್ತಿ'ಯ ಇಡೀ ಸಂಚಿಕೆ ಸಂಗ್ರಹ ಯೋಗ್ಯ ಸಂಚಿಕೆಯಾಗಿದೆ. ದೋಹ ಸಭೆಯ ಡಬ್ಲ್ಯುಟಿಒ ತಿರುಚುವ ಅಮೇರಿಕದ ದುಷ್ಟ ಪ್ರಯತ್ನ ಭಾರತದ ಪಾಲಿಗೆ ಅಪಾಯದ ಮುನ್ಸೂಚನೆಗಳಲ್ಲಿ ಒಂದು. 'ರಾಷ್ಟ್ರೀಯ ಜ್ಞಾನ ಆಯೋಗ' (ಎನ್‌ಕೆಸಿ)ದ ರಚನೆ - ಅದರ ಶಿಫಾರಸ್ಸುಗಳು ಶಿಕ್ಷಣವನ್ನು ಮಾರಾಟ ಸರಕಾಗಿ ಪರಿಗಣಿಸುವ ದುಷ್ಟ ಹಾದಿಯಲ್ಲಿರುವುದು ಗಂಭೀರ ವಿಚಾರಕ್ಕೆ ಪ್ರೇರಣೆ.

1976ರ ಮೇ 14 ಡಾ|| ಅಬ್ರಹಾಂ ಟಿ.ಕೋವೂರರು ಧಾರವಾಡಕ್ಕೆ ಬಂದು ಟಾಗೋರ್ ಹಾಲ್‌ನಲ್ಲಿ 4 ತಾಸು ಪವಾಡಗಳ ಹುಳುಕನ್ನು ಪ್ರಯೋಗಗಳಿಂದ ಹೊರಹಾಕಿದ ದಿನ. ಅವರನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದಕ್ಕೆ ಡಾ|| ಭಾಸ್ಕರ ಮಯ್ಯರ ಲೇಖನ ಪೂರಕ. ಕೋವೂರರ ಬಗ್ಗೆ ಇನ್ನಷ್ಟು ಸಂಗತಿಗಳನ್ನು ಮಯ್ಯ ಪ್ರಕಟಿಸಬೇಕು. ಅದು ಹೊಸ ಪೀಳಿಗೆಯವರಿಗೆ ಮನದಟ್ಟು ಆಗಲಿಕ್ಕೆ ಸಹಾಯಕಾರಿ.

ಸೂರ್ಯನಾರಾಯಣರಾವ್ : 'ಕೆಂಪು ಸೂರಿ'ಯ ಅವರನ್ನು ಅವರ ಕುಟುಂಬದವರು ನೆನೆಸಿಕೊಂಡ ರೀತಿ ಹೃದಯಸ್ಪರ್ಶಿ. ಸೂರಿಯವರ ಕೆಚ್ಚೆದೆ ಬದುಕಿನ ವಿವರಗಳು ಬಲ್ಲಿದರಿಂದ ಕೂಡಲೇ ದಾಖಲಾದಷ್ಟೂ ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆ ಸಿಕ್ಕಂತೆ. 'ಮೌಢ್ಯದ ಈ ಪರಿ' ಲೇಖನ ರಾಜ್ಯದ ಶೋಚನೀಯ ರಾಜ್ಯಾಡಳಿತಕ್ಕೆ ಹಿಡಿದ ಕನ್ನಡಿ. ಒಲಂಪಿಕ್ಸ್- ಕುರಿತ ಲೇಖನ ಕೂಡ ಆತ್ಮವಿಮರ್ಶೆಯ ನಿಷ್ಠುರ ದಾಖಲೆ.

– ಪ್ರೊ. ಶಾಮಸುಂದರ ಬಿದರಕುಂದಿ

ಸಂಪಾದಕೀಯ

ಸರ್ಕಾರದ ಶಾಮೀಲು

ಕ್ರೈಸ್ತ ಸಮುದಾಯದ ಚರ್ಚ್, ಪ್ರಾರ್ಥನಾ ಸ್ಥಳಗಳ ಮೇಲೆ ರಾಜ್ಯದಲ್ಲಿ ಸತತವಾಗಿ ನಡೆಯುತ್ತಿರುವ ಧಾಳಿಗಳನ್ನು ತಡೆಗಟ್ಟುವಲ್ಲಿ ಬಿಜೆಪಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕಳೆದ ರವಿವಾರ ಒಂದೇ ದಿನ ಕರಾವಳಿ ಜಿಲ್ಲೆ ಹಾಗೂ ಮಲೆನಾಡು ಪ್ರದೇಶಗಳ 17 ಕಡೆಗಳಲ್ಲಿ ಭಜರಂಗದಳ ವಿಶ್ವ ಹಿಂದೂ ಪರಿಷತ್‌ನಿಂದ ನಡೆದ ಆಕ್ರಮಣಗಳ ಬಳಿಕವೂ ಹಲವಾರು ಕಡೆ ಅಂತಹುದೇ ಧಾಳಿಗಳು ನಡೆದವು. ಇವು ಅತ್ಯಂತ ಯೋಜನಾಬದ್ಧ, ಸಮನ್ವಯದಿಂದ ಕೂಡಿದ ಧಾಳಿಗಳು ಎಂಬುದಕ್ಕೆ ಯಾವ ತನಿಖೆಯ ಅವಶ್ಯಕತೆ ಇರಲಿಲ್ಲ. ಅದೇ ಹೊತ್ತಿನಲ್ಲಿ ಈ ದಾಳಿಗಳ ಹೊಣೆಯನ್ನು ಭಜರಂಗದಳದ ಮುಖಂಡರು ಸ್ವಯಂ ಆಗಿ ಒಪ್ಪಿಕೊಂಡು, ಅದನ್ನು ಇನ್ನೂ ಮುಂದೆಯೂ ನಡೆಸುವುದಾಗಿ ಬಹಿರಂಗವಾಗಿ ಹೇಳಿದರೂ, ಮುಖ್ಯಮಂತ್ರಿ ಯಡಿಯೂರಪ್ಪ, ಗೃಹಸಚಿವ ಆಚಾರ್ಯರವರು ಭಜರಂಗದಳ ಇದರಲ್ಲಿ ಭಾಗಿಯಾಗಿಲ್ಲವೆಂದೇ ವಾದಿಸುತ್ತಾ, ವಿರೋಧ ಪಕ್ಷಗಳ ಮೇಲೆ ಆರೋಪದ ಗೂಬೆ ಕೂರಿಸುತ್ತಿದ್ದದ್ದು, ಮತ್ತು ಕ್ರಿಶ್ಚಿಯನ್ನರ ಮೇಲೆ ಆರೋಪ ಹೊರಿಸುತ್ತಿರುವುದು ಸರ್ಕಾರವೇ ಈ ದಾಳಿಗಳನ್ನು ಬೆಂಬಲಿಸಿದ್ದು, ಸ್ಪಷ್ಟ ಗೋಚರ. ಸಂವಿಧಾನದ ಕಾನೂನು ಆಳ್ವಿಕೆಯನ್ನು ಎತ್ತಿ ಹಿಡಿಯುವುದಾಗಿ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ, ಮತ ನಿರಪೇಕ್ಷಣೆ, ಕಾನೂನು ಬದ್ಧತೆಗಿಂತ ಆರ್.ಎಸ್‌ಎಸ್‌ನ ನಿರ್ದೇಶನ ಪಾಲನೆಯೇ ಪ್ರಥಮ ಆದ್ಯತೆಯಾಗಿದೆ. ಈ ಮೂಲಕವಾಗಿ ರಾಜ್ಯದ ಅಭಿವೃದ್ಧಿ, ಸಮಗ್ರತೆ, ಜನತೆಯ ಹಿತ ಕಾಯುವ ಬದಲು ಸಂಘ ಪರಿವಾರದ ಗುಪ್ತ ಅಜೆಂಡಾ ಬಾರಿಗೆ ಬದ್ಧವಾಗಿರುವುದಾಗಿ ಅವರು ಸಾರಿದ್ದಾರೆ. ಈಗಲೂ ಯಡಿಯೂರಪ್ಪನವರು ಸಿಓಡಿ ತನಿಖೆಗೆ, ನಂತರ ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದಾರೆ. ಆದರೆ ಆರಾಮವಾಗಿ ಓಡಾಡಿ ಕೊಂಡಿದ್ದು ಪ್ರಚೋದನಾಕಾರಿ ಹೇಳಿಕೆ ನೀಡುತ್ತಲೇ ಇದ್ದ ಭಜರಂಗದಳದ ಸಂಚಾಲಕ ಮಹೇಂದ್ರ ಕುಮಾರ್‌ನ ಔಪಚಾರಿಕ ಬಂಧನದ ಕಣ್ಣೊರೆಸುವ ಕ್ರಮಗಳು ಬಂದಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಒತ್ತಡ ಹೆಚ್ಚಿದ ಬಳಿಕವೇ. ಕೊನೆಗೆ ಮೌನ ಮುರಿದು ಸಂವಿಧಾನದ 355 ಕಲಂನ ಪ್ರಕಾರ ವಿವರಣೆ ಕೇಳಿ ಕೇಂದ್ರ ಸರ್ಕಾರ ಪತ್ರ ಬರೆದ ನಂತರವೇ. ರಾಜ್ಯ ಸರ್ಕಾರದ ಕ್ರಮ ಹಾಗೂ ಅನ್ಯಧರ್ಮಿಯರ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆದುದ್ದನ್ನು ಖಂಡಿಸದೇ, ಪ್ರಧಾನಿ ಪಟ್ಟದ ಚಿಂತೆಯ ಎಲ್.ಕೆ.ಅಡ್ವಾಣಿ ಕೇಂದ್ರದ ಕ್ರಮದ ವಿರುದ್ಧವೇ ನ್ಯಾಯಾಲಯಕ್ಕೆ ಹೋಗಲು ಸೂಚಿಸಿರುವುದು ಇಂತಹ ದಾಳಿಗಳ ಕೈ ಎಲ್ಲಿಯವರೆಗೆ ಚಾಚಿವೆ ಎಂಬುದನ್ನು ತೋರಿಸುತ್ತದೆ. ಒರಿಸ್ಸಾದ ನಂತರ ಕರ್ನಾಟಕ, ಮಧ್ಯಪ್ರವೇಶ ಹಾಗೂ ಬಿಜೆಪಿ ಆಡಳಿತ ಇತರೆ ರಾಜ್ಯಗಳಲ್ಲಿಯೂ ಇವು ಅವ್ಯಾಹತ ನಡೆದಿರುವುದು ಸನ್ನಿವೇಶದ ಗಂಭೀರತೆಯನ್ನು ಹೆಚ್ಚಿಸಿದೆ.

ಈಗಲೂ ಸರ್ಕಾರ ಧಾಳಿಗೊಳಗಾದವರಿಗೆ ನ್ಯಾಯ ದೊರಕಿಸಿಲ್ಲ. ಬದಲಾಗಿ, ಭಜರಂಗದಳದವರಿಂದ ಏಟು ತಿಂದ ಕ್ರಿಶ್ಚಿಯನ್ನರ ಮೇಲೆಯೇ ಪೋಲಿಸರು ಲಾಠಿ, ಅಶ್ರುವಾಯುವಿನಿಂದ ಹಲ್ಲೆ ನಡೆಸಿ, ಅವರನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಬಂಧಿಸಿ ಮೊಕದ್ದಮೆ ಹೂಡಿ ಜೈಲಿಗಟ್ಟಿರುವುದು ಸರ್ಕಾರದ ಡೋಂಗಿತನವನ್ನು, ಸೇಡಿನ ಮನೋಭಾವವನ್ನು ಬಯಲುಗೊಳಿಸಿದೆ.


ಈ ಹಿಂದೆಯೇ ಇಂತಹ ಘಟನೆಗಳು ಜರುಗಿದಾಗ ಸರ್ಕಾರ ಕಠಿಣ ಕ್ರಮ ವಹಿಸಿದ್ದರೆ ಒಂದು ಎಚ್ಚರಿಕೆಯ ಸೂಚನೆಯಾಗುತ್ತಿತ್ತು. ಆದರೆ ಹಾಗೇ ಮಾಡದೇ ಧಾಳಿಕಾರರಿಗೆ ಕುಮ್ಮಕ್ಕು ನೀಡಿದ್ದು, ಒರಿಸ್ಸಾದಲ್ಲಿನ ಕ್ರಿಶ್ಚಿಯನ್ನರ ಮೇಲೆ ಹಲ್ಲೆ, ಕೊಲೆಗಳನ್ನು ವಿರೋಧಿಸಿ ಪ್ರತಿಕ್ರಯಿಸಿದ ಕ್ರೈಸ್ತ ಶಿಕ್ಷಣ ಸಂಸ್ಥೆಗಳ ಮೇಲೆ ಪ್ರತಿಕಾರದ ಕ್ರಮ ವಹಿಸಿದ್ದು, ಸರ್ಕಾರದ ಕುಮ್ಮಕ್ಕಿಗೆ ಸಾಕ್ಷಿ. ಶಾಂತಿ ಸೌಹಾರ್ದತೆಯನ್ನು ಹಾಳುಗೆಡವಿ ಕೋಮುದ್ವೇಷದ ಕಿಚ್ಚು ಹಚ್ಚಿ ವಿಭಜನೆಯ ರಾಜಕಾರಣ ಮಾಡಿದ ಇಂತಹ ಶಕ್ತಿಗಳನ್ನು ಖಂಡಿಸಬೇಕು.

ಈಗ ದಾಳಿಗಳು 'ಹಿಂದುತ್ವ' ದ ಫ್ಯಾಶಿಸ್ಟ್ ಅಜೆಂಡಾವನ್ನು ಮುಂದೊತ್ತುತ್ತಿರುವಾಗಲೇ ಹಿಂದುತ್ವವೇ ತಮ್ಮ ಚುನಾವಣಾ ಹೋರಾಟಕ್ಕೆ ಮುಖ್ಯವಿಷಯವೆಂದು ಘೋಷಿಸಿರುವ ಬಿಜೆಪಿಯ ಚುನಾವಣಾ ರಾಜಕೀಯದ ದುರುದ್ದೇಶವುಳ್ಳದ್ದಾಗಿದೆ. ಇಂತಹ ಶಕ್ತಿಗಳು ಕೇಂದ್ರದಲ್ಲಿ ಮತ್ತೇ ಅಧಿಕಾರ ಹಿಡಿದರೆ ಪರಿಸ್ಥಿತಿ ಏನಾದೀತೆಂದು ಗಂಭೀರವಾಗಿ ಯೋಚಿಸಬೇಕು.

ಇಂತಹ ದಾಳಿಗಳನ್ನು ನಡೆಸುತ್ತಿರುವ ಭಜರಂಗದಳವನ್ನು ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿ ಅಗತ್ಯ ಕಠಿಣ ಕ್ರಮಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳಬೇಕು. ಈಗಾಗಲೇ ಶಸ್ತ್ರ ತರಬೇತಿ, ಬಾಂಬ್ ದಾಳಿಗಳಂತಹ ಕೃತ್ಯಗಳಲ್ಲಿ ತೊಡಗಿರುವ ಪ್ರಕರಣಗಳಲ್ಲಿ ಭಜರಂಗದಳ ಭಾಗಿಯಾಗಿದೆ, ಆತ್ಮಹತ್ಯಾ ಪಡೆಗಳನ್ನು ರಚಿಸಿದೆ. ಮತ್ತು ಇನ್ನೂ ಹೆಚ್ಚಿನ ಸಿದ್ದತೆ ನಡೆಸಿದೆ. ಕೇಂದ್ರ ಕ್ರಮ ವಹಿಸಲು ಇನ್ನೂ ವಿಳಂಬಿಸ ಕೂಡದು.

ಆದರೆ ಒರಿಸ್ಸಾ, ಕರ್ನಾಟಕಗಳಲ್ಲಿ ಇಷ್ಟೆಲ್ಲಾ ಧಾಳಿ ನಡೆದಾಗಲೂ ಕೇಂದ್ರ ಸರ್ಕಾರ ದೀರ್ಘ ಮೌನ ವಹಿಸಿದ್ದು, ಸರಿಯಲ್ಲ; ರಾಜ್ಯದಲ್ಲಿಯೂ ಈಗಲೂ ಒಬ್ಬೊಬ್ಬರದು ಒಂದೊಂದು ನಿಯೋಗಗಳಲ್ಲಿ ಹೋಗಿ ಮಾಧ್ಯಮಗಳಲ್ಲಿ ಖಂಡಿಸಿ ಮಾತನಾಡುವ ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ಬಹುಸಂಖ್ಯಾತರಿಗೂ, ಮಾರಕವಾಗಿರುವ ಸಂಘ ಪರಿವಾರದ, ಕೋಮುವಾದದ ವಿರುದ್ಧ ಹೋರಾಡಲು ಎಷ್ಟು ಪ್ರಾಮಾಣಿಕತೆ ತೋರಿಸುವುದು ಎಂಬುದು: ಇಂತಹ ಹೋರಾಟ ಬದ್ಧತೆಯಿಂದ ಮೂಡಿಬರಬೇಕಿದೆ. ಆದ್ದರಿಂದ ಜನರ ಬದುಕಿನ ಸಮಸ್ಯೆಗಳನ್ನು ಮೂಲೆಗೊತ್ತಿ, ಗಮನ ಬೇರೆ ಕಡೆಗೆ ಸೆಳೆಯುವ, ಕೋಮುವಾದದ ವಿರುದ್ಧ ಒಂದು ಪ್ರಬಲ ವಿಶ್ವಾಸ, ಚಳುವಳಿಯು ಇಂದಿನ ಅಗತ್ಯ.

ಅಸಹನೆಯ ಎರಡು ಪ್ರಸಂಗಗಳು



ಹೋರಾಟವೇ ಮೈವೆತ್ತಿದೆ ಎಂದೆಲ್ಲಾ ಹೇಳಿಕೊಳ್ಳುವ ಈ ನಾಯಕನಿಗೆ ಹೋರಾಟಗಾರರನ್ನು ಕಂಡರೆ ಮೈ ಉರಿಯುತ್ತದೆ. ಏಕೆ?

ಮೊನ್ನೆ ಒಂದು ಪ್ರಸಂಗ: ವಯೋಮಿತಿ ಮೀರುತ್ತಿರುವ ದೈಹಿಕ, ಹಾಗೂ ಚಿತ್ರಕಲೆ, ಸಂಗೀತ ಪದವಿ ಪಡೆದ ಯುವಜನರು ಡಿವೈಎಫ್‌ಐ ನೇತೃತ್ವದಲ್ಲಿ ಬನ್ನಪ್ಪ ಪಾರ್ಕಿನಲ್ಲಿ ಟೆಂಟ್ ಹಾಕಿ ಕುಲಿತಿದ್ದರು. ಅವರ ಬೇಡಿಕೆ ಒಂದೇ ?ಸರ್ಕಾರವೇ ಪ್ರಕಟಿಸಿದಂತೆ 1700 ಸ್ಥಾನಗಳಿಗೆ ತಮ್ಮನ್ನು ನೇಮಕಾತಿಗೆ ಪರಿಗಣಿಸಬೇಕೆಂದು. ಇದನ್ನು ಸರ್ಕಾರವೇ ನೇಮಿಸುವುದಾಗಿ ಹೇಳಿತ್ತು. ಆದರೆ ಪ್ರಕಟಣೆ ಹೊರಡಿಸುವಾಗ ಮರೆತ್ತಿತ್ತು. ಆದ್ದರಿಂದ ಆತಂಕಗೊಂಡ ಅವರು ವಿಧಾನಸೌದದ ಹತ್ತಿರ ಕಾಲಿಡಲು ಪರವಾನಿಗೆ ಸಿಗದಿದ್ದರಿಂದ ಬನ್ನಪ್ಪ ಪಾರ್ಕಿನಲ್ಲಿ ಧರಣಿ ಕುಳಿತರು. ಹೀಗೆಕೂಡ್ರಲು ಪೋಲಿಸರು ಬಿಡಲೊಲ್ಲರು. ಸದಾ ತಕರಾರು. ಟೆಂಟ್ ಕಿತ್ತೆಸೆವ ಬೆದರಿಕೆ. ಹೀಗೆ ನಾಲ್ಕು ದಿನಗಳಾದರೂ ಧರಣಿ ಕುಳಿತವರನ್ನು ಯಾರೂ ಕ್ಯಾರೇ ಅನ್ನಲಿಲ್ಲ. ಅಂದದ್ದೆಲ್ಲ ಪೊಲೀಸರೇ ಅಂತೂ ಇಂತೂ ರಂಪಾಟ ಮಾಡಿದ ಮೇಲೆ ಪೊಲೀಸರು ಮುಖ್ಯ ಮಂತ್ರಿಗಳ ಜನತಾ ದರುಶನಕ್ಕೆ ಕರೆದೊಯ್ದರು. ಇದಕ್ಕೆ ಹೋರಾಟಗಾರರೆಂದು ತಕರಾರು. ಕೊನೆಗೆ ಬೇರೆ ತಂಡವಾಗಿ ನಿಲ್ಲಲ್ಲು ಅವಕಾಶ. ಅಲ್ಲಿಗೆ ಬಂದ ಮುಖ್ಯಮಂತ್ರಿ ಮನವಿ ಪಡೆದು 'ನೋಡುತ್ತೇನೆ' ಎಂದರು. 'ಸಾರ್ ಪರಿಗಣಿಸಿ, ಧರಣಿ ಮಾಡುತ್ತಿದ್ದೇವೆ' ಎಂದರು ಯುವ ಜನನಾಯಕರು. 'ಧರಣಿ' ಎಂಬ ಶಬ್ದ ಕೇಳಿದ ಯಡಿಯೂರಪ್ಪ ಒಡನೆಯೇ ಸರಕ್ಕನೇ ತಿರುಗಿದವರೇ 'ಅದೆಲ್ಲ ಆಗೊಲ್ಲ ಆಯ್ತು ಹೋಗಿ' ಎಂದು ಬುಸುಗುಡುತ್ತಾ ಹೋಗಬೇಕೆ?



ಸ್ವತಃ ಹೋರಾಟಗಾರನೆಂದು, ಹೋರಾಟವೇ ಮೈವೆತ್ತಿರುವುದಾಗಿಯೂ ಸಾರಿಕೊಳ್ಳುವ ಮುಖ್ಯ ಮಂತ್ರಿ ಯಡಿಯೂರಪ್ಪನವರು ಯುವಜನರ ಧರಣಿ ಶಬ್ದ ಕೇಳಿದ ಕೂಡಲೇ ಸಿಡಿದು ಬಿದ್ದರೇಕೆ? ಅಂದರೆ ಜನರ ಹೋರಾಟಗಳು ಎಂದರೆ ಅಸಹನೆ, ಕಡು ತಿರಸ್ಕಾರ, ಆದರೆ ತಾವು 'ಹೋರಾಟಗಾರರು' ಎಂಬುದು ಹೆಗ್ಗಳಿಕೆಯ ಶಬ್ದ ಮಾತ್ರವೇ? ಈ 'ಅಭಿವೃದ್ಧಿಶೀಲ ಸರ್ಕಾರ' ಬಂದ ಲಾಗಾಯ್ತು ಹೋರಾಟಗಳು ಇಲ್ಲದ ದಿನಗಳಿಲ್ಲ. ರಾಜಧಾನಿಯ ಬೀದಿಗಳಲ್ಲಿ ಹೋರಾಟದ ಜನರ ಹೆಜ್ಜೆಗಳೇ ಆದರೆ ಅಲ್ಲೆಲ್ಲಾ ಲಾಠಿ ಏಟು, ಬೂಟುಗಳ ಸಪ್ಪಳವೇ, ಗುಂಡಿನ ಸದ್ದೇ... ಏಟುಕೊಟ್ಟು ಆರಿಸಿದ ಜನರ ಬೆನ್ನಮೇಲೆ ಏಟುಗಳು ಬಾಸುಂಡೆಗಳೇ 'ಹೋರಾಟಗಾರ'ನ ಆಡಳಿತದಲ್ಲಿ ಹೋರಾಟ ದಮನ!

ಸ್ಪಂದನವೆಲ್ಲಿ....?

ಹೀಗೆ ಸಂವೇದನೆ ಕಳೆದುಕೊಂಡು, ದಬ್ಬಾಳಿಕೆಯ ಭಾಷೆಯನ್ನು ಬಳಸುತ್ತಿರುವ ಸರ್ಕಾರ ಜನರ ಕೇಳಿಕೆಗಳಿಗೆ ಅದೆಷ್ಟು ಕಿವುಡಾಗಿದೆ ಎಂಬುದಕ್ಕೆ ನೂರಾರು ನಿದರ್ಶನಗಳನ್ನು ಕೊಡಬಹುದು. ಬೆಂಗಳೂರಿನಲ್ಲಿ ನಿರಂತರವಾಗಿ ನಡೆಯುತ್ತಿರುವ ಒಂದು ಮಹತ್ವದ ಚಳವಳಿಯನ್ನು ನೋಡಿ. ಕರ್ನಾಟಕ ಸರ್ಕಾರದ ಸಾರ್ವಜನಿಕ ಆಸ್ತಿಯಾಗಿರುವ ಸುಮಾರು 1ಲಕ್ಷ 80ಸಾವಿರ ಏಕರೆಗೂ ಅಧಿಕ ಇದ್ದ ಭೂಮಿಯನ್ನು ಸುಮಾರು 46.000 ಏಕರೆ ಭೂಮಿಯನ್ನು ಪಟ್ಟಭದ್ರರ ಹಿತಾಸಕ್ತಿಗಳು ಕಬಳಿಸಿರುವುದನ್ನುಎ.ಟಿ.ರಾಮಸ್ವಾಮಿಯವರ ಸದನ ಸಮಿತಿಯು ಪತ್ತೆಹಚ್ಚಿದೆ.

ಅದನ್ನು ಮರು ವಶಪಡಿಸಿಕೊಂಡು ಸಾರ್ವಜನಿಕ ಉದ್ದೇಶಗಳಿಗೆ ಬಳಸುವಂತೆ ಸೂಚಿಸಿದೆ. ಬೆಳೆಯುತ್ತಿರುವ ಬೃಹತ್ ಬೆಂಗಳೂರು ನಾಗರಿಕರ / ಸಾರ್ವಜನಿಕರ ಉದ್ದೇಶಗಳಿಗೆ ಅದನ್ನು ಬಳಸಬೇಕೆಂದೂ, ಹರಾಜುಹಾಕಿ ಮಾರಬಾರದೆಂದೂ ವಿವಿಧ ಸಂಘಟನೆಗಳು ತಾಕೀತು ಮಾಡಿದೆ. ಆದರೇನು? ಯಡಿಯೂರಪ್ಪ ಸರ್ಕಾರ ಅದನ್ನು ಹರಾಜು ಹಾಕಿಯೇ ತೀರುವುದು ನಿರ್ಧರಿಸಿ ಈಗಾಗಲೇ 5 ಹರಾಜುಗಳನ್ನು ನಡೆಸಿವೆ. ಪ್ರತಿಬಾರಿಗೂ ಸಿಪಿಐ(ಎಂ) ಸೇರಿ ಎಡ ಹಾಗೂ ದಲಿತ ಪ್ರಗತಿ ಪರ, ಸಂಘಟನೆಗಳು ಅದರ ವಿರುದ್ಧ ಹೋರಾಡುತ್ತಾ ಬಂದಿವೆ. ಆದರೇನು? ಜನರ ಈ ಕೇಳಿಕೆ ಸರ್ಕಾರದ ಕಿವಿಗೆ ಹೋಗುತ್ತಿಲ್ಲ.

ಹರಾಜು ತೀವ್ರ ವಿರೋಧದ ನಡುವೆಯೆ ನಡೆಯುತ್ತಿದೆ. ಜನರ ಹಿತಗಳಿಗಿಂತ ಭೂದಂಧೆಗಾರರ ಹಿತಗಳೇ ಪರಮೋಚ್ಚ ಅಲ್ಲವೇ? ಆದ್ದರಿಂದಲೇ ಇಂತಹ ನಿಜ ಪ್ರಶ್ನೆಗಳಿಂದ ಗಮನ ಬೇರೆಡೆ ಸೆಳೆಯುವ ಕೋಮು ವಿಭಜನೆಯ ದಾಳಿಗಳಿಂದ ದಳ್ಳುರಿಯನ್ನು ಬಳಸುತ್ತಿರುವುದು!

ಒಂದು ನಾಚಿಕೆಗೇಡಿನ, ಅಸಹಕಾರದ ಪ್ರಸಂಗವೊಂದನ್ನು ಇಲ್ಲಿ ಖಂಡಿಸಲೇಬೇಕು. ಇತ್ತೀಚೆಗೆ ?ಕ್ರೈಸ್ತರ ಹಿತಚಿಂತನೆಗಳ ಬಗ್ಗೆ ಸಮಾಲೋಚಿಸಲು ಕರೆದ ಸಭೆಯು ರದ್ದಾಗಬೇಕಾದ ರಾದ್ಧಾಂತವೊಂದು

ಪುಟ 5ಕ್ಕೆ

ಮಾರಾಟಕ್ಕಿದೆ ದೇಹ !

ಎಫ್ ಎಂ ರೇಡಿಯೋದಲ್ಲಿ ಒಂದು ಜಾಹೀರಾತು : 'ನನ್ನ ಹೆಸರು ಬ್ರುನೆಟ್. 22 ವರ್ಷ ವಯಸ್ಸಿನ ಅಮೇರಿಕಾದ ಮಗಳು, ನನ್ನ ಕನ್ಯತ್ವ ಹರಾಜಿಗೆ ಇದೆ. ನನ್ನ ಕನ್ಯತ್ವ ಪರಿಶುದ್ಧವಾದದ್ದು ಎಂಬುದಕ್ಕೆ ಪರಿಣಿತ ವೈದ್ಯರಿಂದ ಪ್ರಮಾಣ ಪತ್ರ ಹೊಂದಿರುವ ಕನ್ಯತ್ವ ಮಾರಾಟಕ್ಕೆ ಇದೆ. ಅತಿ ಹೆಚ್ಚು ಹಣ ನೀಡುವವರ ಜೊತೆ ಮಲಗಲು ನಾನು ಸಿದ್ಧಳಿದ್ದೇನೆ.'

ಕನ್ಯತ್ವದ ಮಾರಾಟ ಏಕೆ? ಎಂಬ ಜನರ ಪ್ರಶ್ನೆಗೆ ಬ್ರೂನೆಟ್‌ಳ ಮಾತಿನಲ್ಲಿ "ನಾನು ಸ್ನಾತಕೋತ್ತರ ಪದವಿ ಮಾಡಬೇಕಾಗಿದೆ. ಅದಕ್ಕಾಗಿ ಅಪಾರ ಹಣ ಬೇಕಾಗಿದೆ. ಈ ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ಪ್ರತಿಯೊಂದು ಸರಕು ಆಗಿರುವಾಗ, ನನ್ನ ಕನ್ಯತ್ವವೂ ಒಂದು ಸರಕು. ಅದನ್ನು ಮಾರಿ ನಾನು ಓದುತ್ತೇನೆ. ಈ ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯಕ್ಕಾಗಿ ನಾನು ಕೆಲಸ ಮಾಡುತ್ತೇನೆ. ಏಕೆಂದರೆ ನಾನು ಕಳಂಕಿತೆಯಾಗಿದ್ದು ಈ ಬಂಡವಾಳಶಾಹಿ ಪ್ರೇರಿತ ಶಿಕ್ಷಣದ ವ್ಯಾಪಾರೀಕರಣದಿಂದಾಗಿ."

ಇದು ಕತೆಯಲ್ಲ, ನಿಜವಾಗಿ ನಡೆಯುತ್ತಿರುವುದು. ಕರ್ನಾಟಕ ಮುಖ್ಯಮಂತ್ರಿ ಯಡಿಯೂರಪ್ಪ ಬೆಂಗಳೂರನ್ನು ವಿಶ್ವದರ್ಜೆ ನಗರವನ್ನಾಗಿ ರೂಪಿಸುತ್ತೇನೆ ಎಂದು ಹೇಳುವ ಜಾಹೀರಾತನ್ನು ನೋಡಿದಾಗ ಈ ಸಂಗತಿಯನ್ನು ಹೇಳಲೇಬೇಕಾಗಿದೆ. ಏಕೆಂದರೆ ಕಾಣದವರ ಕಣ್ಣಿಗೆ ಅಮೇರಿಕಾ ಸ್ವರ್ಗ, ಡಾಲರ್ ಹೆಸರಿನ ಬೆಡಗಿಗೆ ಮರುಳಾದ ಜನರ ಪಾಲಿನ ಅಮೇರಿಕಾದ ನಿಜರೂಪ ಈ ಬ್ರುನೆಟ್.

ಮೋದಿ, ಯಡಿಯೂರಪ್ಪ, ಎಸ್.ಎಂ.ಕೃಷ್ಣ ಇವರೆಲ್ಲರೂ ಹೇಳುವ ವಿಶ್ವದರ್ಜೆಯ ನಿಜರೂಪ ಈ ಬ್ರೂನೆಟ್. ಮೋದಿ, ಯಡಿಯೂರಪ್ಪನವರ ನೀತಿಗಳು ಸಮಾಜದಲ್ಲಿ ಹಲವು ಮಂದಿ ಬ್ರೂನೆಟ್‌ರವರನ್ನು ತಯಾರಿಸುವುದಾಗಿದೆ.

ಬಂಡವಾಳಶಾಹಿ ದೇಶಗಳು ರಕ್ತ ಕುಡಿದು ಕೊಬ್ಬಿದವುಗಳಾಗಿವೆ. ಬಂಡವಾಳಶಾಹಿ ಸಮಾಜದ ನಾಚಿಕೆಗೇಡಿನ ಸ್ಥಿತಿಯ ನಿರ್ಮಾಣವಾಗಿದೆ. ಹಣದ ಮುಂದೆ ಎಲ್ಲವೂ ನಿಕೃಷ್ಟ. ಅಮೇರಿಕಾದ ಆರಾಧಕರಾದ ಬಿಜೆಪಿ ಹೇಳುವ ಅಮೂಲ್ಯವಾದದ್ದು ಎನ್ನುವ ಹಾಗೂ ಸತಿ ಸಹಗಮನಕ್ಕೆ ಕಾರಣವಾದ 'ಶೀಲ' ಅನ್ನುವ ಭಾವನೆಯು ಹರಾಜಿಗಿದೆ. ಅಮೇರಿಕಾದಲ್ಲಿ ಬಿಜೆಪಿಯು ಅಮೇರಿಕಾದ ಆರಾಧಕರಾಗಿರುವ ಕಾರಣದಿಂದಲಾದರೂ ಇಲ್ಲಿ ಹಲವಾರು ಬ್ರೂನೆಟ್‌ರನ್ನು ತಯಾರು ಮಾಡುತ್ತಿದೆ ಬಿಜೆಪಿ, ಕಾಂಗ್ರೆಸ್ ಮುಂತಾದ ಬಂಡವಾಳಶಾಹಿ ಪಕ್ಷಗಳ ಅಭಿವೃದ್ಧಿಯ ವ್ಯಾಖ್ಯಾನ.

ಈ ಬ್ರೂನೆಟ್‌ರವರಂತಹ ಹಲವಾರು ಮುಗ್ಧರು ತಯಾರಾಗುವುದು ಬೇಕೆ? ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದು ಸಾಮಾನ್ಯವಾದರೆ?

ಬ್ರೂನೆಟ್ ತಯಾರಾಗಿರುವುದು ಶಿಕ್ಷಣದ ಖಾಸಗೀಕರಣ ಹಾಗೂ ವ್ಯಾಪಾರೀಕರಣದಿಂದಾಗಿ. ಕೇಂದ್ರದ ಶಿಕ್ಷಣ ನೀತಿಗಳು ಹಾಗೂ ರಾಜ್ಯ ಸರ್ಕಾರದ ನೀತಿಗಳು ಹಾಗೇ ಇವೆ. ಡೊನೇಷನ್, ಖಾಸಗಿ ವಿಶ್ವವಿದ್ಯಾಲಯಗಳು, ನಿರಂತರ ಶುಲ್ಕ ಏರಿಕೆ ಇವುಗಳೆಲ್ಲಾ ಬ್ರೂನೆಟ್‌ರನ್ನು ತಯಾರಿಸುವುದೇ ಆಗಿದೆ. ಇಡೀ ಮಹಿಳೆಯು ವ್ಯಾಪಾರದ ಸರಕಾಗಿರುವಾಗ ಬ್ರೂನೆಟ್ ತಯಾರಾಗುವುದು ಕಷ್ಟವಲ್ಲ.

ಬ್ರೂನೆಟ್ ಹೇಳಿದ ಹಾಗೆ ಈ ಪಾಪಿ ಬಂಡವಾಳಶಾಹಿ ಪದ್ಧತಿಯಿಂದ ನಾನು ಹೀಗಾಗಿರುವಾಗ ಈ ಪದ್ಧತಿ ಮುಂದುವರೆದರೆ ಹಲವಾರು ನನ್ನಂಥವರು ತಯಾರಾಗುವುದಾದರೆ ಈ ಬಂಡವಾಳ ಶಾಹಿ ವ್ಯವಸ್ಥೆಯ ನಾಶವಾಗಲೇ ಬೇಕು. ಅದಕ್ಕೆ ಪರ್ಯಾಯವಾಗಿ ಸಮಾಜವಾದ ಬರಲೇಬೇಕು. ಏಕೆಂದರೆ ಹಿಂದೆ ಸಮಾಜವಾದಿ ರಾಷ್ಟ್ರಗಳಲ್ಲಾಗಲೀ, ಈಗಿರುವ ಸಮಾಜವಾದಿ ರಾಷ್ಟ್ರ ಗಳಲ್ಲಾಗಲೀ ಇಂತಹ ಪ್ರಕರಣಗಳನ್ನು ಕಲ್ಪಿಸಿಕೊಳ್ಳಲೂ ಅಸಾಧ್ಯ.

– ಶಶಿರೇಖಾ ಕೆ.ಎಂ
ಪತ್ರಿಕೋದ್ಯಮ (ವಿಭಾಗ)
ಮಹಾರಾಜ ಕಾಲೇಜು, ಮೈಸೂರು.


ಅಣು ಒಪ್ಪಂದ : ಬೆಂಗಳೂರಿನಲ್ಲಿ ಸೆ. 25 ಪ್ರತಿಭಟನೆ

ಭಾರತದ ಹಿತಾಸಕ್ತಿಗೆ ಮಾರಕವಾದ ಅಮೇರಿಕಾದೊಂದಗಿನ ಅಣುಒಪ್ಪಂದದ ಅಂತಿಮ ಅಂಗೀಕಾರದ ಸಂದರ್ಭಕ್ಕೆ ಇದೇ ಸೆಪ್ಟೆಂಬರ್ 25ರಂದು ಅಮೇರಿಕಾಕ್ಕೆ ಪ್ರಧಾನಿ ತೆರಳುತ್ತಿದ್ದು ಇಡೀ ಒಪ್ಪಂದದ ಯತ್ನವನ್ನು ಪ್ರತಿಭಟಿಸಿ ಅಂದು ದೇಶದಾದ್ಯಂತ ಪ್ರತಿಭಟನೆ ನಡೆಸಲು ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ, ಜೆಡಿ(ಎಸ್), ತೇಲುಗುದೇಶಂ ಪಕ್ಷಗಳು ನಿರ್ಧರಿಸಿವೆ. ಈ ಹಿನ್ನೆಲೆಯಲ್ಲಿ 20ರಂದು ಸಭೆಯೊಂದು ಜರುಗಿ ಅಂದು ರಾಜಧಾನಿ ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ, ಬಹಿರಂಗ ಸಭೆಯನ್ನು ಬಸವೇಶ್ವರ ವೃತ್ತದಲ್ಲಿ ನಡೆಸಲು ನಿರ್ಧರಿಸಲಾಯಿತು.

ಸಭೆಯಲ್ಲಿ ಮಾಜಿಪ್ರಧಾನಿ ದೇವೇಗೌಡ, ಜೆಡಿ(ಎಸ್) ಮಹಾಪ್ರಧಾನ ಕಾರ್ಯದರ್ಶಿ ಸಿ. ನಾರಾಯಣಸ್ವಾಮಿ, ಪಕ್ಷದ ರಾಜ್ಯ ಅಧ್ಯಕ್ಷರಾದ ಮೀರಾಜುದ್ದೀನ್ ಪಟೇಲ್, ಚಲುವರಾಯಸ್ವಾಮಿ, ರಮೇಶ್‌ಬಾಬು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್, ನಿತ್ಯಾನಂದಸ್ವಾಮಿ, ಜಿ.ವಿ.ಶ್ರೀರಾಮರೆಡ್ಡಿ, ಎಸ್.ವೈ.ಗುರುಶಾಂತ್, ಸಿಪಿಐನ ನಾಯಕರಾದ ಎಂ.ಸಿ. ವೆಂಕಟರಾಮು, ಹರಿಗೋವಿಂದ್, ಫಾರ್ವರ್ಡ್ ಬ್ಲಾಕ್‌ನ ಅಧ್ಯಕ್ಷ ಜಿ.ಆರ್. ಶಿವಶಂಕರ್ ಭಾಗವಹಿಸಿದ್ದರು.

'ಏ ಅಂದರ್ ಕೀ ಬಾತ್ ಹೈ'

ಸನ್ಮಾನ್ಯ ಶ್ರೀ ಶ್ರೀ ಮುಖ್ಯಮಂತ್ರಿಯವರ ಮನೆಯಲ್ಲಿ ಹಾವು ಕಾಣಿಸಿಕೊಂಡು ಆತಂಕದ ವಾತಾವರಣ ಉಂಟಾಗಿತ್ತು ಎಂದು ಎಲ್ಲ ಪತ್ರಿಕೆಗಳಲ್ಲಿ ಪ್ರಮುಖವಾಗಿ ವರದಿಯಾಗಿದೆ. ಇತ್ತೀಚೆಗೆ ಎಲ್ಲ ಪತ್ರಿಕೆಗಳೂ ಸುದ್ದಿಯನ್ನು ಪ್ರಕಟಿಸಿ ಕೈ ತೊಳೆದುಕೊಳ್ಳುತ್ತಿವೆ. ಯಾವುದನ್ನೂ ತನಿಖೆ ಮಾಡುವ ಗೋಜಿಗೇ ಹೋಗುತ್ತಿಲ್ಲ. ಹಾವು ಮುಖ್ಯ ಮಂತ್ರಿಯವರ ಮನೆಯಲ್ಲಿ ಯಾಕೆ ಕಾಣಿಸಿಕೊಂಡಿತು? ಕುಕ್ಕೆ ಸುಬ್ರಮಣ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಪೂಜೆಯಿಂದ ಸಂಪ್ರೀತವಾಗಿ ಆಶೀರ್ವಾದ ಮಾಡಲು ಬಂದಿತ್ತೇ? ಅಥವಾ ಪೂಜೆಯಲ್ಲಿ ಲೋಪವಾಗಿ ಅದನ್ನು ಎಚ್ಚರಿಸಲು ಕಾಣಿಸಿಕೊಂಡಿತ್ತೇ? ಅದು ಎಂಥ ಹಾವು? ನಾಗರ ಹಾವೇ? ಕೆರೆ ಹಾವೇ? ಮುಖ್ಯ ಮಂತ್ರಿಯವರ ಮನೆಗೆ ಹೀಗೆ ಹಾವು ನುಗ್ಗಿದೆ ಎಂದರೆ ಅದು ಭದ್ರತೆಯಲ್ಲಿ ಲೋಪವೇ? ಅಥವಾ ಮನೆಯ ವಾಸ್ತು ದೋಷವೇ ? ಹಾವು ಬಿಟ್ಟಿದ್ದಾರೆ ಎಂದರೆ ಅದು ವಿರೋಧ ಪಕ್ಷದ ಕೈವಾಡವೇ? ಅಥವಾ ಪಕ್ಷದಲ್ಲಿನ ಭಿನ್ನಮತೀಯ ಮೂಲ ನಿವಾಸಿಗಳ ಕೃತ್ಯವೇ? ಅಥವಾ ಸನ್ಮಾನ್ಯರು ಮುಖ್ಯ ಮಂತ್ರಿಯಾಗಿರುವುದು 'ಹಾವಿಗೆ ಹಾಲೆರದಂತಾಯಿತು' ಎಂಬುದನ್ನು ತಿಳಿಸಲು ಸಾಂಕೇತಿಕವಾಗಿ ಮುಖ್ಯ ಮಂತ್ರಿಯವರ ಮನೆಯಲ್ಲಿ ಕಾಣಿಸಿಕೊಂಡಿತೇ? ಇನ್ನೂ ಹೀಗೆ ಎಷ್ಟೆಲ್ಲ ದೃಷ್ಟಿಕೋನಗಳಿಂದ ತನಿಖೆ ನಡೆಸಬಹುದಾಗಿತ್ತು ! ಆದರೆ ಪತ್ರಿಕೆಗಳು ಬರೀ ಜಾಹೀರಾತು ಪ್ರಕಟಣೆಗಾಗಿ ಮಾತ್ರ ಇರುವಂತಿವೆ. ಸುದ್ದಿಗಳನ್ನೂ ಮಂತ್ರಿಗಳು ಹೇಳಿದ್ದನ್ನು ಯಥಾವತ್ ಜಾಹೀರಾತಿನಂತೆ ಪ್ರಕಟಿಸುತ್ತಿವೆ. ಸ್ವಲ್ಪ ತನಿಖೆ ಮಾಡಿದ್ದರೆ ಏನೆಲ್ಲ ಸ್ವಾರಸ್ಯ ಸಂಗತಿಗಳು ಹೊರಬರುತ್ತಿದ್ದವೋ?. ಆದರೆ ಅವರೂ 'ಯಾವ ಹುತ್ತದಲ್ಲಿ ಯಾವ ಹಾವೋ?' ನಮಗ್ಯಾಗೆ ಬೇಕು? ಸರ್ಕಾರದ ಜಾಹೀರಾತನ್ನು ಉಂಡು ಎರಡು ಬಗೆಯಲುಂಟೇ? ಎಂದು ನಿಯತ್ತಿನಿಂದ ಸುಮ್ಮನಾಗಿರಬಹುದು.



ಸರ್ಕಾರಕ್ಕೆ ಕೆಟ್ಟ ಹೆಸರು ತರಲು ವಿರೋಧ ಪಕ್ಷದವರು ಕೋಮು ಗಲಭೆಆಗಲಿ ಎಂದು ಹೋಮ ಹವನ ಮಾಡಿಸಿರಬಹುದು ಎಂದು ಸನ್ಮಾನ್ಯ ಸಚಿವರ ಅಂಬೋಣ. ಅವರು ಯಾವ ದೇವರ ಹೆಸರಿನಲ್ಲಿ ಹೋಮ ಮಾಡಿಸಿದ್ದರು ಎಂದು ತನಿಖೆಯನ್ನು ಸನ್ಮಾನ್ಯ ಸಚಿವರು ಮಾಡಿಸಿದ್ದರೆ ಒಳ್ಳೆಯದಿತ್ತು. ಹೋಮ ಹವನಗಳನ್ನು ಮಾಡುವುದು ಹಿಂದೂ ದೇವರ ಹೆಸರಿನಲ್ಲಿ. ಅಂಥದ್ದರಲ್ಲಿ ಅದ್ಯಾವ ದೇವರು ನಮ್ಮ ಹಿಂದೂ ಸರ್ಕಾರಕ್ಕೆ (?) ಕೆಟ್ಟ ಹೆಸರನ್ನು ತರಲು ಮಾಡಿದ ಹೋಮಕ್ಕೆ ಫಲ ನೀಡಿದ ಎಂಬುದನ್ನು ತನಿಖೆ ಮಾಡಿಸಬಹುದಾಗಿತ್ತು. ಸಾಮಾನ್ಯವಾಗಿ ಶತೃಗಳಿಗೆ ಕೆಟ್ಟ ಫಲಗಳನ್ನು ಬಯಸುವವರು ಮಾಟ ಮಂತ್ರಗಳನ್ನು ಮಾಡಿಸುತ್ತಾರೆ ಎಂದು ಕೇಳಿದ್ದೇವೆ ಹಾಗಿರುವಾಗ ಮಾಟ ಮಂತ್ರಮಾಡಿಸಲು ಸಚಿವರ ಒಳ ಉಡುಪು ಈ ವಿರೋಧಿಗಳಿಗೆ ಸಿಗದ ಹಾಗೆ ಹಿಂದಿನ ಅನುಭವ ದಿಂದ ಎಚ್ಚರದಿಂದಿದ್ದಾರೆಯೇ? ಹೊಗಲಿ ಬಿಡಿ 'ಏ ಅಂದರ್ ಕಿ ಬಾತ್ ಹೈ.'

ರಾಮಚಂದ್ರಾಪುರ ಸಾಮ್ರಾಜ್ಯದ ಚಕ್ರವರ್ತಿ ಶ್ರೀ ಶ್ರೀ ರಾಘವ ಮಹಾರಾಜರು ರಥಾರೂಢರಾಗಿ ತಮ್ಮ ಸಕಲ ಸೈನ್ಯದೊಡನೆ ಗೋಕರ್ಣಾಪುರ ಪ್ರವೇಶ ಮಾಡಿ "ಮಹಾ ಸಂಕಲ್ಪ" ಮಾಡಿದ್ದಾರೆ. ಯಥಾಪ್ರಕಾರ ನಮ್ಮ ಮಾಧ್ಯಮಗಳು ಸುದ್ದಿಯನ್ನು ವರದಿಮಾಡಿವೆ. ಆದರೆ ಏನೆಂದು "ಮಹಾ ಸಂಕಲ್ಪ" ಮಾಡಿದರು? ಇನ್ನು ಅವರ ಮುಂದಿನ ವಿಜಯ ಯಾತ್ರೆ ಯಾವ ಕ್ಷೇತ್ರಕ್ಕೆ? ಕೈಗೆ ಬಂದ ಅಜ್ಜಂಪುರದ ಅಮೃತ ಮಹಲ್ ಬಾಯಿಗೆ ಬರದಂತಾಯಿತಲ್ಲ ಅದನ್ನು ಹಾಗೇ ಬಿಟ್ಟಾರೆಯೇ ಮುಂತಾದ ಕುತೂಹಲಕರ ವಿಚಾರಗಳನ್ನು ತನಿಖೆ ಮಾಡುವ ಗೋಜಿಗೆ ಯಾವ ಮಾಧ್ಯಮಗಳೂ ಹೋಗಿಲ್ಲ.

ಚರ್ಚ್‌ಗಳು ಕ್ರೈಸ್ತ ಸಂಸ್ಥೆಗಳ ಮೇಲಿನ ಧಾಳಿಗಳ ಬಗೆಗೆ ಅದಕ್ಕಿಂತ ಮುಖ್ಯವಾಗಿ ಮತಾಂತರಗಳ ಬಗ್ಗೆ ಸರ್ಕಾರ ಸಿ ಓ ಡಿ ತನಿಖೆಗೆ ಆದೇಶ ನೀಡಿದೆ. ಎರಡು ತಿಂಗಳ ಒಳಗೆ ವರದಿ ನೀಡಲು ಸೂಚಿಸಿದೆ.

-'ಅಯ್ಯೋ, ಅದಕ್ಕೆ ಎರಡು ತಿಂಗಳು ಯಾಕೆ ಕಾಯಬೇಕು? ಸರ್ಕಾರದ ಸಚಿವರ ಹೇಳಿಕೆಗಳನ್ನು ನೋಡಿದರೆ ವರದಿ ಏನಿರಬಹುದೆಂಬುದು ತಿಳಿಯುವುದಿಲ್ಲವೇ? ಸಿ ಓ ಡಿ ವರದಿ ಅದಕ್ಕಿಂತ ಭಿನ್ನವಾಗಿರಲು ಹೇಗೆ ಸಾಧ್ಯ? ಅಂತಿಮ ಪರಿಣಾಮ - "ಗಲಭೆಕೋರ ಭಯೋತ್ಪಾದಕರಿಗೆ ಸೂಕ್ತ ಪರಿಹಾರ, ಹಾಗೂ ಗಲಭೆಯಿಂದ ನೊಂದವರ ಮೇಲೆ ಸೂಕ್ತ ಕ್ರಮ".

ಜನಶಕ್ತಿ ಕನ್ನಡ ವಾರಪತ್ರಿಕೆ

ತಿಪಟೂರು

'ಗಣೇಶಮೂರ್ತಿ ಅಲ್ಲ' ಸೌಹಾರ್ದತೆಯ ವಿಸರ್ಜನೆ ಯತ್ನ

ಮುಸ್ಲಿಂ ಸಮುದಾಯದ ಜನರು ಸಂಭವನೀಯ ಗಲಭೆ, ಘರ್ಷಣೆ ತಪ್ಪಿಸಬೇಕೆಂದು ಪ್ರಜ್ಞಾಪೂರ್ವಕವಾಗಿ ಬಯಸಿ ಪ್ರಯತ್ನಿಸಿದರೂ, ಶಾಸಕರಲ್ಲಿ ವಿನಂತಿಸಿದರೂ, ಚೆಡ್ಡಿ ಪಡೆಗಳು ಯೋಜಿಸಿದಂತೆಯೇ ಗಲಭೆ ನಡೆದಿದೆ ಎಂದರೆ...

ಮೊನ್ನೆ ಸೆಪ್ಟೆಂಬರ್ 12 ರ ರಾತ್ರಿ ವಿಹೆಚ್‌ಪಿ ಮತ್ತು ಭಜರಂಗಿ ದುಷ್ಕರ್ಮಿಗಳು ನಡೆಸಿದ ದುಷತ್ಯಕ್ಕೆ ತಿಪಟೂರು ನಗರ ತತ್ತರಿಸಿ ಹೋಗಿದೆ. ಗಣಪತಿ ಉತ್ಸವದ ನೆಪದಲ್ಲಿ ಸಂಘಪರಿವಾರದ ಪುಂಡರು ನಡೆಸಿದ ಕೃತ್ಯದಿಂದ ಕೋಮುಗಲಭೆ ಸೃಷ್ಟಿಯಾಗಿದೆ. ಅಂದು ರಾತ್ರಿ 9.30 ರ ಸುಮಾರಿನಲ್ಲಿ ಗಾಂಧಿನಗರದಲ್ಲಿ ಇಡಲಾಗಿದ್ದ ಗಣೇಶ ವಿಸರ್ಜನೆಯ ಮೆರವಣಿಗೆ ನಡೆಸಲಾಗಿದ್ದು, ಕೋಮುವಾದಿ ಸಂಘಗಳ ಪ್ರಚೋದನೆಯಿಂದ ಹಿಂದೂ ಮುಸ್ಲಿಂ ನಡುವೆ ಕೋಮುದ್ವೇಷ ಭುಗಿಲೆದ್ದಿದೆ. ಪರಿಣಾಮ ಹಲವು ಅಂಗಡಿಗಳು, ಸೈಕಲ್ ಶಾಪ್‌ಗಳು ಸುಟ್ಟು ಹೋಗಿವೆ. ಅಪಾರ ಆಸ್ತಿ ಪಾಸ್ತಿ ನಾಶವಾಗಿದೆ. ಈ ಸಂದರ್ಭದಲ್ಲಿ ನಡೆದ ಕಲ್ಲು ತೂರಾಟದಲ್ಲಿ ಹಲವರು ಗಾಯಗೊಂಡಿದ್ದಾರೆ.

ಇದೆಲ್ಲವೂ ಸ್ಥಳೀಯ ಬಿಜೆಪಿ ಶಾಸಕ ಬಿ.ಸಿ.ನಾಗೇಶ್ ಎಂಬ ಚಡ್ಡಿ ಚತುರನ ನೇತೃತ್ವದಲ್ಲೇ ನಡೆದುಹೋಗಿದೆ. ಇದಕ್ಕೆ ಡಿವೈಎಸ್‌ಪಿ ಸೇರಿದಂತೆ ಎಲ್ಲ ಪೋಲೀಸರ ಬೆಂಬಲವೂ ದೊರೆತಿದೆ ಎಂಬುದು ಮೇಲು ನೋಟಕ್ಕೆ ಕಂಡು ಬರುತ್ತವೆ. ಯಾಕೆಂದರೆ ಕಲ್ಲು ತೂರಾಟ, ಆಟೋ, ಅಂಗಡಿಗಳಿಗೆ ಬೆಂಕಿ ಹಚ್ಚುತ್ತಿದ್ದರೂ ಕೋಮುವಾದಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ನಡೆದಿದ್ದೇನು?

ಸೆ.12ರ ರಾತ್ರಿ 9.30ರ ಸಮಯದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ನಡೆಸಲಾಗಿದೆ. ಈ ಸಂದರ್ಭದಲ್ಲಿ ಸ್ಥಳೀಯ ಬಿಜೆಪಿ ಶಾಸಕ ಬಿ.ಸಿ.ನಾಗೇಶ್ ಮೆರವಣಿಗೆ ಮುಂದಾಳತ್ವ ವಹಿಸಿದ್ದರು. ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ನೂರಾರು ಮಂದಿ ಪೋಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು. ಈ ಮಧ್ಯ ಮೆರವಣಿಗೆ ಮಸೀದಿ ಬಳಿ ಬರುತ್ತಿದ್ದಂತೆಯೇ ಮೊದಲೇ ಕುಡಿದು ಕ್ಯಾತೆ ತೆಗೆಯಲು ಸಿದ್ಧರಾಗಿದ್ದ ಪುಂಡರು 45 ನಿಮಿಷಗಳಿಗೂ ಹೆಚ್ಚು ಕಾಲ ಕಿವಿಗಡಚಿಕ್ಕುವಂತೆ ಪಟಾಕಿ ಸಿಡಿಸಿದ್ದಾರೆ. ತಮಟೆ, ನಗಾರಿಗಳ ಸದ್ದನ್ನು ಹೆಚ್ಚಿಸಿ ಮಸೀದಿ ಒಳಗಿದ್ದವರನ್ನು ಪ್ರಚೋದಿಸಿದ್ದಾರೆ. ಜಾತಿ, ಧರ್ಮದ ಹೆಸರಿನಲ್ಲಿ ನಿಂದಿಸಲಾಗಿದೆ. ಆದರೂ ಮಸೀದಿ ಒಳಗಿದ್ದವರು ಸುಮ್ಮನಿದ್ದಾರೆ.

ಇದನ್ನು ಗ್ರಹಿಸಿದ ಚಡ್ಡಿ ಚತುರರು ಮಸೀದಿಯ ಮೇಲೆ ಕಲ್ಲು ತೂರಿದರೆಂದು, ಕೂಡಲೇ ಮೆರವಣಿಗೆ ಸಾಗುತ್ತಿದ್ದವರ ಮೇಲೆ ಕತ್ತಲೆಯಿಂದ ತೂರಿ ಬಂದ ಬಾಟಲಿಯೊಂದು ಬಿತ್ತೆಂದು ಹೇಳಲಾಗುತ್ತಿದೆ. ಪೋಲೀಸರ ಸರ್ಪಗಾವಲಿನಲ್ಲೇ ಮೆರವಣಿಗೆ ತೆರಳುತ್ತಿದ್ದರೂ ಹೊರಗಿನಿಂದ ಬಾಟಲ್ ಹೇಗೆ ಬೀಳಲು ಸಾಧ್ಯ ಈ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿಲ್ಲ.

ಬೆಂಕಿ ಹಲ್ಲೆ, ಲೂಟಿ:

ಗಣೇಶ ವಿಸರ್ಜನೆಯ ಮೆರವಣಿಗೆಗೆ ಭೋವಿ ಕಾಲೋನಿ, ಚಾಮುಂಡೇಶ್ವರಿ ನಗರ ಸೇರಿದಂತೆ ಬೇರೆ ಬೇರೆ ಬಡಾವಣೆಯಗಳ ಯುವಕರನ್ನು ಕರೆತರಲಾಗಿತ್ತು. ಯಾಕೆಂದರೆ ಯಾರಿಗೆ ಯಾರೆಂದು ತಿಳಿಯಬಾರದು. ಇದು ಚೆಡ್ಡಿಗಳು ಪೂರ್ವ ಯೋಜಿತವಾಗಿ ಹೆಣೆದ ತಂತ್ರ. ಇದೇ ವೇಳೆ ಉಭಯ ಕೋಮುಗಳ ನಡುವೆ ಘರ್ಷಣೆ ಆರಂಭವಾಗುತ್ತಿದ್ದಂತೆ ಸಂಘಿಗಳು ಸಿಕ್ಕಸಿಕ್ಕ ಮುಸ್ಲಿಮರ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ. ಮನೆಗಳಿಗೆ ನುಗ್ಗಿ ಮಹಿಳೆಯರು, ಮಕ್ಕಳು, ವೃದ್ಧರು ಎನ್ನದೆ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ. ಕೆಲವು ಅಂಗಡಿಗಳ ಬಾಗಿಲು ಮುರಿದು ಲೂಟಿ ಮಾಡಲಾಗಿದೆ. ಇದರಿಂದ ಮುಸ್ಲಿಮರು ಭಯಭೀತಿಗೆ ಒಳಗಾಗಿ ಮನೆಯೊಳಗೆ ಸೇರಿಕೊಂಡಿದ್ದಾರೆ. ಈ ಮಧ್ಯೆ ಕೆರಳಿದ ಕೆಲ ಮುಸ್ಲಿಂ ಯುವಕರು ಸಹ ಕೆಲವೆಡೆ ದಾಂಧಲೆ ನಡೆಸಿದ್ದಾರೆ.



ಸುಟ್ಟುಹೋದ ಅಂಗಡಿ, ವಾಹನಗಳು

ಪೋಲೀಸ್ ವೈಫಲ್ಯ:

ಕೋಮುಗಲಭೆ, ದಾಂಧಲೆ ನಡೆದು ಅಟ್ಟಹಾಸ ಮೆರೆಯುತ್ತಿದ್ದರೂ ಕ್ರಮ ಕೈಗೊಳ್ಳದ ಪೋಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆ. ಗಲಭೆ ನಡೆಯಬಹುದೆಂಬ ಮುನ್ಸೂಚನೆ ಪೋಲೀಸರಿಗೆ ಮೊದಲೇ ತಿಳಿದಿತ್ತಾದರೂ ಸರ್ಕಾರ ಹಾಗೂ ಶಾಸಕರ ಆಣತಿಯಂತೆ ನಡೆದುಕೊಳ್ಳುವ ಮೂಲಕ ಗಲಭೆಗೆ ಪೋಲೀಸ್ ಇಲಾಖೆ ನೇರ ಕಾರಣವಾಗಿದೆ.

ಉಂಡ ಮನೆಗೆ ದ್ರೋಹ:

ರಂಜಾನ್ ಹಬ್ಬದ ಉಪವಾಸದ ಹಿನ್ನೆಲೆಯಲ್ಲಿ ಸ್ಥಳೀಯ ಶಾಸಕ ಬಿ.ಸಿ.ನಾಗೇಶ್ ಹಾಗೂ ಡಿವೈಎಸ್‌ಪಿಗೆ ಮುಸ್ಲಿಂ ಬಾಂಧವರು ಗಲಭೆ ನಡೆದು ಒಂದು ವಾರಕ್ಕೂ ಮೊದಲೇ ಸಭೆಯೊಂದರಲ್ಲಿ ಸನ್ಮಾನಿಸಿದ್ದಾರೆ. ಈ ಸಂದರ್ಭದಲ್ಲಿ ಮುಸ್ಲಿಂ ಮುಖಂಡರು ಸೂಕ್ತ ಭದ್ರತೆ ಒದಗಿಸುವಂತೆ, ಶಾಂತಿ ಸುವ್ಯವಸ್ಥೆ ಕಾಪಾಡುವಂತೆ ಮನವಿ ಮಾಡಿಕೊಂಡಿದ್ದಾರೆ. ಅಲ್ಲದೆ, ಗಣೇಶ ವಿಸರ್ಜನಾ ಮೆರವಣಿಗೆಯನ್ನು ಹತ್ತು ಗಂಟೆಯ ಬಳಿಕ ನಡೆಸುವಂತೆ ಮಾಡಿದ ಮನವಿಗೆ ಡಿವೈಎಸ್‌ಪಿ ಮತ್ತು ಶಾಸಕ ನಾಗೇಶ್ ಒಪ್ಪಿಗೆ ನೀಡಿದ್ದರೆಂದು ತಿಳಿದುಬಂದಿದೆ.

ಆದರೆ ರಂಜಾನ್ ಹಬ್ಬದ ಸವಿಯೂಟ ಉಂಡೂ ಸನ್ಮಾನ ಸ್ವೀಕರಿಸಿದ ಶಾಸಕ ನಾಗೇಶ್ ಮತ್ತು ಡಿವೈಎಸ್‌ಪಿ ಗಲಭೆಗೆ ಕುಮ್ಮಕ್ಕು ನೀಡಿ ಉಂಡಮನೆಗೆ ದ್ರೋಹ ಬಗೆದಿದ್ದಾರೆ. ಕೊಟ್ಟ ಮಾತು ಉಳಿಸಿಕೊಳ್ಳದೆ ವಚನ ಭ್ರಷ್ಟರಾಗಿದ್ದಾರೆ.

ಪ್ರಗತಿ ಪರರ ಭೇಟಿ :

ಕೋಮುಗಲಭೆಯಿಂದ ತತ್ತರಿಸಿದ್ದ ತಿಪಟೂರು ಪಟ್ಟಣಕ್ಕೆ ಜಿಲ್ಲಾ ಸಿಪಿಎಂ ಮುಖಂಡರು ಭೇಟಿ ನೀಡಿದ್ದರು. ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಸಂಘ ಪರಿವಾರವೇ ಗಲಭೆಗೆ ಕಾರಣವೆಂಬುದು ದೃಢಪಟ್ಟಿದೆ.

ಡಿವೈಎಸ್‌ಪಿ ಅಮಾನತಿಗೆ ಆಗ್ರಹ :

ಇಡೀ ಘಟನೆಯನ್ನು ನಿಯಂತ್ರಿಸುವಲ್ಲಿ ಸಂಪೂರ್ಣ ವಿಫಲವಾಗಿರುವ ಡಿವೈಎಸ್‌ಪಿಯನ್ನು ಅಮಾನತು ಗೊಳಿಸಬೇಕು, ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಜಿಲ್ಲಾ ಸಿಪಿಎಂ ಹಾಗೂ ಪ್ರಗತಿಪರ ಸಂಘಟನೆಗಳು ಒತ್ತಾಯಿಸಿವೆ. ಇಡೀ ಘಟನೆಯ ಹಿಂದೆ ಮುಖ್ಯಮಂತ್ರಿ ಯಡಿಯೂರಪ್ಪ, ಗೃಹಸಚಿವ ವಿ.ಎಸ್. ಆಚಾರ್ಯ ಅವರ ಕೈವಾಡ ಇದೆ ಎಂಬ ಆರೋಪವೂ ಕೇಳಿ ಬರುತ್ತದೆ.

ಶರಣ ಸಂಸತಿಯ ನೆಲೆ ವೀಡು, ಶಾಂತಿ ಪ್ರಿಯರ ಬೀಡಾಗಿದ್ದ ತಿಪಟೂರಿನಲ್ಲಿ ಇದೀಗ ಕೋಮುವಾದಿಗಳ ಅಟ್ಟಹಾಸ ಎಲ್ಲೆ ಮೀರಿದೆ. ಇದಕ್ಕೆ ಯಡ್ಡಿ ನೇತೃತ್ವದ ಚಡ್ಡಿ ಸರ್ಕಾರದ ಕುಮ್ಮಕ್ಕಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಯಾರಿಗೂ ನೆಮ್ಮದಿ ಇಲ್ಲದಂತಾಗಿದೆ. ಲೋಕಸಭೆ ಚುನಾವಣೆ ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಹಿಂದುತ್ವದ ಟ್ರಂಪ್ ಕಾರ್ಡ್ ಬಳಸಿ ಮತ ಪಡೆಯಲು ಬಿಜೆಪಿ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಗುಜರಾತ್ ಮಾದರಿ ಎಂದರೆ ಇದೇ ಇರಬೇಕು!

■ ಪುಟ್ಟಣ್ಣ, ತುಮಕೂರು

ಎರಡು ಪ್ರಸಂಗಗಳು.......

ಪುಟ 3 ರಿಂದ

ಶಾಸಕರ ಭವನದಲ್ಲಿ ಸೃಷ್ಟಿಯಾಗಿದೆ. ಎಲ್ಲ ನಿಯಮದಂತೆ ಅಲ್ಲಿನ ಸಭಾಂಗಣವನ್ನು ಕಾದಿರಿಸಲಾಗಿದ್ದರೂ, ಅಲ್ಲಿಯ ಸಿಬ್ಬಂದಿ ಸಂಘಟಕರಿಗೆ -ಆಹ್ವಾನಿತರಿಗೆ ಅದನ್ನು ಕೊಡಲು ನಿರಾಕರಿಸಿದ್ದಾರೆ. ಅದಕ್ಕೆ ಬೀಗಹಾಕಿದ್ದಾರೆ. ಯಾಕೆಂದು ಕೇಳಿದರೆ ಇದು ಕೊಡಲಿಕಾಗೋಲ ಎಂದು ಸಿಬ್ಬಂದಿ ಉತ್ತರಿಸಿದೆ. ನಿಯಮದ ಪ್ರಕಾರ ಬುಕ್ ಮಾಡಲಾಗಿದೆ. 'ತೆಗೆಯಿರಿ ನಿಮ್ಮ ದಾಖಲೆ ಪುಸ್ತಕ? ಎಂದಾಗ ಅವತ್ತಿನ ಹಾಳೆಯೇ ಅಲ್ಲಿಂದ ಮಾಯಾ! ಅರ್ಥಾತ್ ದಾಖಲೆಯನ್ನು ಕಿತ್ತು ಬಿಡಲಾಗಿದೆ. ಈ ಹಾಲ್ ಬುಕ್ ಮಾಡಿದವರು ಹಾಲಿ ಶಾಸಕ ಕೆ.ಜಿ.ಜಾರ್ಜ್, (ಕಾಂಗ್ರೆಸ್). ಇದಕ್ಕೆ ಆಹ್ವಾನಿಸಲ್ಪಟ್ಟವರು, ಸಂಸದ ಸಾಂಗ್ಲಿಯಾನ, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾ. ನಾಯಕ್‌ರವರು, ಚುನಾಯಿತ ಪ್ರತಿನಿಧಿಗಳು, ಗಣ್ಯರು ...ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಬಜರಂಗದಳ ಧಾಳಿ ನಡೆಸುತ್ತಿದ್ದಾರೆ. ಅದೇ ಕೆಲಸವನ್ನು ವಿಧಾನಸಭಾ ಸಭಾಪತಿ ಜಗದೀಶ್ ಶೆಟ್ಟರ್ ಮಾಡಿದ್ದಾರೆ. ಸಭಾಪತಿ ಹುದ್ದೆ ಪಕ್ಷಾತೀತ, ಎಲ್ಲರ'ನ್ನೂ ಸಮಾನವಾಗಿ ಕಾಣುವೆ ಎಂದೆಲ್ಲಾ ಹೇಳಿಕೊಳ್ಳುವ ಶೆಟ್ಟರ್ ತನ್ನ ಬಜರಂಗಿದಳದ ಚಡ್ಡಿ ಬುದ್ಧಿ ತೋರಿಸಿದ್ದಾರೆ.

ಅಧಿಕಾರಕ್ಕೆ ಬಂದು ಇನ್ನು ಆರು ತಿಂಗಳಾಗಿಲ್ಲ... ಸರ್ಕಾರದ ನೀತಿ ನಿಯಮ -ನಾಗರಿಕ ಸಂಹಿತೆಯ ಹೊಣೆಗಾರಿಕೆ ಎಲ್ಲವನ್ನು ಗಾಳಿಗೆ ತೂರಿ ಕೇಶವ ಶಿಲ್ಪದ ಫರ್ಮಾನನ್ನೇ ಜಾರಿಗೊಳಿಸುತ್ತಿರುವ ಹಾವಳಿ ಪಡೆ ಇನ್ನೆಂತಹ ಅನಾಹುತಗಳನ್ನು ಮಾಡಲಿದೆಯೋ ಶೆಟ್ಟರ್ ಸೇರಿದಂತೆ ಅವರ ಚೆಡ್ಡಿಪಡೆಯೂ ಪ್ರಜಾಪ್ರಭುತ್ವದ ಹಕ್ಕು ಅವಕಾಶಗಳ ಮೇಲೆ ಹಾಡಹಗಲೇ ನಿರ್ಲಜ್ಯವಾಗಿ ದಾಳಿಗಳನ್ನು ನಡೆಸುತ್ತಲೇ ಇರುವ ಧಾಳಿಗೆ ಧಿಕ್ಕಾರ.

ಉದ್ದೇಶವೇನು?

ಬುಟ್ಟಿಯೊಳಗಿನ ಹಿಂದುತ್ವದ ಅಜೆಂಡಾವನ್ನು ಇಷ್ಟೀಷ್ಟೇ ಹೊರತೆಗೆಯುವ ಕೆಲಸ ತುಂಬಾ ನಿಪುಣತೆಯಿಂದ ನಡೆಯುತ್ತಿದೆ. ಸಮಾರಂಭವೊಂದರಲ್ಲಿ ?ಭಗವದ್ಗೀತೆ?ಯನ್ನು ರಾಷ್ಟ್ರೀಯ ಗ್ರಂಥವಾಗಿಸಬೇಕೆಂದು ಸೋಂಧೆ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸ್ವಾಮಿಗಳು ಸಲಹೆ ನೀಡಿದ್ದಾರೆ. ಒಡನೆಯೇ ಸಾರ್ವಜನಿಕ ಅಭಿಪ್ರಾಯ ಗಣಿಸಿ ಅನಿರ್ಧಾರ ಕೈಗೊಳ್ಳಲಾಗುವುದು ಎಂದು ಶಿಕ್ಷಣ ಸಚಿವ ಕಾಗೇರಿ ಹೇಳುತ್ತಾರೆ. ಭಗವದ್ಗೀತೆಯಲ್ಲಿ ಜ್ಞಾನ, ಸಾಹಿತ್ಯ-ಸಂಸತಿಯ ದೃಷ್ಟಿಯಿಂದ ಓದುವುದಕ್ಕೆ ಯಾರ ತಕರಾರು ಇರಬೇಕಿಲ್ಲ. ಆದರೆ ಅದನ್ನು ಮತೀಯತೆಯ ಉದ್ದೇಶಕ್ಕೆ ಬಳಸಲು ನಡೆಸುವ ಯತ್ನ ಸಲ್ಲ.

ಸೆಪ್ಟೆಂಬರ್ 1 8 ರಂದು 'ಸಮುದಾಯ' ಸಂಘಟಿಸಿದ್ದ ಚರ್ಚ್ ಮೇಲಿನ ದಾಳಿ ವಿರೋಧಿ ಪ್ರತಿಭಟನೆಯಲ್ಲಿ ಪಾಲ್ಗೊಂಡ ಗಣ್ಯರು, ಟೌನ್ ಹಾಲ್‌ಮುಂದೆ



ಕ್ರೈಸ್ತರ ಮೇಲಿನ ಧಾಳಿ ಖಂಡಿಸಿ ಸೆ. 25 ರಂದು ರಾಜ್ಯದಾದ್ಯಂತ ಪ್ರತಿಭಟನೆ

ಇತ್ತೀಚೆಗೆ ರಾಜ್ಯದ ಹಲವೆಡೆ ಕ್ರೈಸ್ತರ ಪ್ರಾರ್ಥನಾಲಯಗಳ ಮೇಲೆ ಸಂಘ ಪರಿವಾರದ ಸಂಘಟನೆಗಳು ದಾಳಿಮಾಡಿ ಅಲ್ಪ ಸಂಖ್ಯಾತರಲ್ಲಿ ಆತಂಕವನ್ನು ಉಂಟುಮಾಡಿರುವ ಗಂಭೀರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಧಾಳಿಗಳನ್ನು ನಡೆಸಲು ಭಜರಂಗದಳದಂದಹ ಸಂಘಟನೆಗಳಿಗೆ ರಾಜ್ಯ ಬಿಜೆಪಿ ಸರ್ಕಾರವೇ ಕುಮ್ಮಕ್ಕು ನೀಡುತ್ತಿರುವುದನ್ನು ಪ್ರತಿಭಟಿಸಿ ರಾಜಾದ್ಯಾಂತ ತಾಲ್ಲೂಕು ಜಿಲ್ಲಾ ಕೇಂದ್ರಗಳಲ್ಲಿ ಇದೇ 25ರಂದು ಗುರುವಾರ ಸಾಮೂಹಿಕ ಧರಣಿ ಸತ್ಯಾಗ್ರಹಗಳನ್ನು ನಡೆಸಿ ತಹಶೀಲ್ದಾರ, ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಮನವಿ ಪತ್ರವನ್ನು ಕಳುಹಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ನಿರ್ಧರಿಸಿದೆ. ಅಲ್ಪ ಸಂಖ್ಯಾತರ ಮೇಲೆ, ಅವರ ಪ್ರಾರ್ಥನಾಲಯಗಳ ಮೇಲೆ, ನಡೆಯುತ್ತಿರುವ ಧಾಳಿಗಳನ್ನು ನಿಲ್ಲಿಸಲು ಸರ್ಕಾರ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು, ಧಾಳಿಗಳನ್ನು ಪ್ರಚೋದಿಸುತ್ತಿರುವ ಸಂಘ ಪರಿವಾರ ಮುಖಂಡರನ್ನು ಮತ್ತು ಧಾಳಿಗಳಲ್ಲಿ ಭಾಗವಹಿಸಿದ್ದ ದುಷ್ಕರ್ಮಿಗಳನ್ನು ಬಂಧಿಸಬೇಕು, ಮತ್ತು ಪೋಲೀಸರು ಪಕ್ಷಪಾತದಿಂದ ವರ್ತಿಸಿ ಬಂಧಿಸಿರುವ ಎಲ್ಲಾ ಅಲ್ಪ ಸಂಖ್ಯಾತರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲಾಗುವುದು ಎಂದು ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ತಿಳಿಸಿದ್ದಾರೆ.

ಒರಿಸ್ಸಾ ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ಮೇಲೆ ದಾಳಿ ಖಂಡಿಸಿ ಮಾನವ ಸರಪಳಿ, ಜ್ಯೋತಿ ಬೆಳಗಿಸಿ ಪ್ರತಿಭಟನೆ



ಸೆಪ್ಟೆಂಬರ್ 12,2008ರ ಶುಕ್ರವಾರ ಸಂಜೆ 6.00 ಗಂಟೆಗೆ ಶಾಂತಿನಗರ ಪ್ರದೇಶದಲ್ಲಿ ಒರಿಸ್ಸಾ, ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ಮೇಲೆ ದಾಳಿ ಖಂಡಿಸಿ ಒಂದು ಕ್ರಿಶ್ಚಿಯನ್ನರು, ಮುಸ್ಲಿಂ ಧರ್ಮದವರು ಸೇರಿ ಒಟ್ಟಾಗಿ ಮಾನವ ಸರಪಳಿ, ಮೇಣದ ಜ್ಯೋತಿ ಪ್ರತಿಭಟನೆಯನ್ನು ನಡೆಸಲಾಗಿದೆ. ಈ ಕಾರ್ಯಕ್ರಮಕ್ಕೆ ಜನಶಕ್ತಿ ಸಂಪಾದಕರು ಎಸ್.ವೈ.ಗುರುಶಾಂತ್‌ರವರುಭಾಗವಹಿಸಿ ಒಂದು ಮೂಲಭೂತವಾದಿಗಳು ದೇಶ ವ್ಯಾಪ್ತಿ ನಡೆಸುತ್ತಿರುವ ಕೃತ್ಯವನ್ನು ಖಂಡಿಸಿದರು. ಗುಜರಾತ್‌ನಂತರ, ಒರಿಸ್ಸಾ, ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿಯನ್ನು ಮುಂದುವರೆಸುವ ಆರ್‌ಎಸ್‌ಎಸ್, ವಿಹೆಚ್‌ಪಿ ಭಜರಂಗದಳಗಳು ಕೋಮು ದಳ್ಳುರಿ ಪ್ರಯೋಗವನ್ನು ಪ್ರಜ್ಞಾವಂತ ನಾಗರೀಕರು, ಸಂಘಟನೆಗಳು ಒಗ್ಗಟ್ಟಿನಿಂದ ಹಿಮ್ಮೆಟ್ಟಿಸಲು ಮುಂದಾಗಬೇಕು ಕೋಮುಸೌಹಾರ್ದತೆ ಯನ್ನು ಉಳಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಸ್ಥಳೀಯ ಮಸೀದಿ ಉಪಾಧ್ಯಕ್ಷರಾದ ಅಬ್ದುಲ್ ಕಲಿಕ್‌ಸಾಬ್ ಭಾಗವಹಿಸಿ ಎಲ್ಲಾ ಜನರು ಐಕ್ಯತೆಯಿಂದ ಈ ಕೃತ್ಯವನ್ನು ಖಂಡಿಸಬೇಕು. ಅಂಬೇಡ್ಕರ್ ಕನ್ನಡ ಸಂಘದ ಅಧ್ಯಕ್ಷರು ವಂದಿಸಿದರು. ಸ್ಥಳೀಯ ಮುಖಂಡರಾದ ಸಗಾಯ್‌ರಾಜ್ ಹಾಗೂ ನೂರಾರು ಜನ ಭಾಗವಹಿಸಿದರು.

ಹೀಗೊಂದು ಸಂತಸದ ಪರಿಣಾಮ



ಈ ಸಂಗಾತಿಯ ಹೆಸರು ಪಾರ್ಥಿಬೆನ್ ಅಂತ. ಅವರು ಜನಶಕ್ತಿ ಕನ್ನಡ ವಾರಪತ್ರಿಕೆಗೆ 500 ರೂ. ಕೊಡುಗೆ ನೀಡಿದ್ದಾರೆ. ಯಾವ ಕಾರಣಕ್ಕೆ ಅಂತಿರಾ ಮೂರು ಕಾರಣಗಳು

ಒಂದು ಅವರಿಗೆ ಇತ್ತೀಚಿಗೆ 50ವರ್ಷ ತುಂಬಿತು. ಎರಡನೆಯದು ಅವರ ಬಾಳಿನ ಸಂಗಾತಿ ರಮಣಿಯವರೊಂದಿಗೆ ದಾಂಪತ್ಯ ಜೀವನಕ್ಕೆ ಹೆಜ್ಜೆ ಇಟ್ಟು 25 ವರ್ಷವಾಯಿತು. ಸಮಾಜದ ಆಮೂಲಾಗ್ರ ಪರಿವರ್ತನೆಗಾಗಿ ಪಣತೊಟ್ಟ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಿಪಿಐ(ಎಂ)ನ ಸದಸ್ಯರಾಗಿ 25 ವರ್ಷ ಪೂರೈಸಿತಂತೆ. ಸಮತಸಕ್ಕೆ ಹಲವು ಕಾರಣಗಳು ಅಂತಹ ಸಂತಸದ ಸಂದರ್ಭಗಳ ನೆನಪಾಗಿ ಜನಶಕ್ತಿಯಂತಹ ಜನಪರ ಪತ್ರಿಕೆಗೆ ಕೊಡುಗೆ ನೀಡುವ ಪದ್ಧತಿಯು ಎಷ್ಟೊಂದು ಅರ್ಥಪೂರ್ಣ ಅಲ್ಲವೇ ನೀವೂ ಪ್ರಯತ್ನಿಸಬಹುದು. ಅಂದಹಾಗೆ ಪಾರ್ತಿಬಾನ್ ಅವರು ಬೆಂಗಳೂರಿನ ಮಿನರ್ವ ಮಿಲ್ ಕಾರ್ಮಿಕರಾಗಿ ನಿವೃತ್ತಿ ಪಡೆದು ಕಾರ್ಮಿಕ ಹಕ್ಕುಗಳಿಗಾಗಿ ಹೋರಾಡುವ ಕಾರ್ಮಿಕ ಚಳವಳಿಯ ಮುಖಂಡರಾಗಿದ್ದಾರೆ.



ಸರ್ಕಾರಿ ಭೂಮಿ ಹರಾಜು ವಿರೋಧಿಸಿ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡುತ್ತಿರುವ ವಿಚಾರವಾದಿ ಪ್ರೊ. ಜಿ.ಕೆ.ಗೋವಿಂದರಾವ್

ಚಂದಾದಾರರೇ, ಏಜೆನ್ಸಿದಾರ ಬಂಧುಗಳೇ, ಈ ಬದಲಾವಣೆ ಗಮನಿಸಿ

ಜನಶಕ್ತಿ ಕನ್ನಡ ವಾರ ಪತ್ರಿಕೆಯ ಲೆಕ್ಕಪತ್ರ, ಪ್ರಸಾರ, ವಿಳಾಸಪಟ್ಟಿ ಇತ್ಯಾದಿ ವಿಚಾರಗಳನ್ನು ನಿರ್ವಹಿಸುತ್ತಿರುವ ಸಂಗಾತಿ ವೀರಣ್ಣ ಕಲ್ಮನಿಯವರ ಫೋನ್ ನಂಬರ್ ಬದಲಾಗಿದೆ.

ಹಣಕಾಸು ವ್ಯವಹಾರ, ವಿಳಾಸ ಬದಲಾವಣೆ, ದೂರುಗಳನ್ನು, ಹೊಸಚಂದಾ, ಏಜೆನ್ಸಿ ನೋಂದಣಿ ಇತ್ಯಾದಿ ಯಾವುದೇ ವಿಷಯಗಳಿಗೆ ಸಂಗಾತಿಗಳು ಇನ್ನು ಮುಂದೆ ಈ ಕೆಳಕಂಡ ಫೋನ್ ನಂಬರನ್ನು ಸಂಪರ್ಕಿಸುವುದು.

ವೀರಣ್ಣ ಕಲ್ಮನಿ: 9480151132

ಆರ್ಥಿಕವಾಗಿ ಕುಸಿಯುತ್ತಿರುವ ಅಮೆರಿಕಾದ ಕಂಪನಿಗಳು 3ನೇ ಜಗತ್ತಿನ ದೇಶಗಳನ್ನು ಕೊಳ್ಳೆಹೊಡೆಯುವ ಭಾಗವಾಗಿ ಭಾರತಕ್ಕೂ ಬರುತ್ತಿವೆ. ಇವೆಲ್ಲವನ್ನು ತಿಳಿದೂ ತಿಳಿಯದಂತಿರುವ ಕೇಂದ್ರ ಸರ್ಕಾರ ಅಂತಿಮವಾಗಿ ಒಪ್ಪಂದಕ್ಕೆ ಸಹಿ ಹಾಕಲು ಮುಂದಾಗಿದೆ. ಅಣು ಒಪ್ಪಂದ ಅಮೆರಿಕಾದ ಕಂಪನಿಗಳಿಗೆ ಸಹಾಯವಾಗಬಹುದೇ ಹೊರತು ಭಾರತದ ಜನ ಸಾಮಾನ್ಯರಿಗಲ್ಲ

ಅಣು ಒಪ್ಪಂದ

ಸೆಪ್ಟೆಂಬರ್ 25 ಕರಾಳದಿನ

ಬಾಲಕೃಷ್ಣಶೆಟ್ಟಿ

ಭಾರತ ಅಮೇರಿಕಾ ಅಣು ಒಪ್ಪಂದಕ್ಕೆ ಅಂತಿಮ ಸಹಿ ಸೆಪ್ಟೆಂಬರ್ 25 ರಂದು ಬೀಳಲಿದ್ದು ಭಾರತದ ಪಾಲಿಗೆ ಅದು ಕರಾಳದಿನವಾಗಲಿದೆ. ಸಾಮ್ರಾಜ್ಯಶಾಹಿ ಅಮೇರಿಕಾಕ್ಕೆ ಅಡಿಯಾಳಾಗುವ ಮಿಲಿಟಿರಿ, ಆರ್ಥಿಕ ಒಪ್ಪಂದಗಳು ಅಣು ಒಪ್ಪಂದದ ಭಾಗವಾಗಿ ಬರಲಿವೆ. ಇದರ ವಿರುದ್ಧ ನಿರಂತರ ಹೋರಾಟ ನಡೆಸುವ ಪ್ರತಿಜ್ಞೆಯನ್ನು ಪ್ರತಿಯೊಬ್ಬ ದೇಶ ಪ್ರೇಮಿ ಭಾರತೀಯ ಕೈಗೊಳ್ಳಬೇಕಾಗಿದೆ.

ಅಮೇರಿಕಾದ ಕೈಗಾರಿಕೋದ್ಯಮಿಗಳಿಗೆ ಲಾಭ:

ಸೆಪ್ಟೆಂಬರ್ 18 ರಂದು ಅಮೇರಿಕಾದ ವಾಷಿಂಗ್‌ಟನ್‌ನಲ್ಲಿರುವ ವ್ಯವಹಾರಗಳ ಸಮಿತಿಯ ಮುಂದೆ ನೀಡಿದ ಹೇಳಿಕೆಯಲ್ಲಿ, 'ಭಾರತ ಅಮೇರಿಕಾ ಅಣು ಒಪ್ಪಂದವಾಗಿ 10,000 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಬೇಕಾದ ಅವಶ್ಯಕತೆಗಳನ್ನು ಅಮೆರಿಕಾದ ಕಂಪನಿಗಳಿಂದ ಖರೀದಿಸಲು ಭಾರತ ಒಪ್ಪಿದೆ ಎಂದು ಅಮೇರಿಕಾ ರಾಜಕೀಯ ಕಾರ್ಯದರ್ಶಿ ವಿಲಿಯಂ ಬರ್ನ್ಸ್ ಹೇಳಿರುತ್ತಾರೆ. ಅದೂ ಅಲ್ಲದೆ ಅವರು ಮುಂದುವರೆದು "ಕನಿಷ್ಠ ಎರಡು ಸ್ಥಾವರಗಳನ್ನು ಅಮೆರಿಕಾದ ಕಂಪನಿಗಳಿಗೆ ನೀಡುವುದಾಗಿ ಭಾರತ ಭರವಸೆ ನೀಡಿದೆ" ಎಂದು ಹೇಳಿದ್ದಾರೆ. ಆದ್ದರಿಂದ ಅಣು ಒಪ್ಪಂದದಿಂದ ಲಾಭ ಯಾರಿಗೆ ಎಂಬುದು ಸ್ಪಷ್ಟ. ಇಷ್ಟಕ್ಕೂ ಅಮೇರಿಕಾದ ತಂತ್ರಜ್ಞಾನ ರಷ್ಯಾ ಮತ್ತು ಫ್ರಾನ್ಸ್ ದೇಶಗಳಿಗಿಂತ ಹಿಂದಿದೆ ಎಂಬುದನ್ನು ಗಮನಿಸಬೇಕು. ಈಗಾಗಲೇ ಕುಸಿಯುತ್ತಿರುವ ಅಮೇರಿಕಾದ ಕಂಪನಿಗಳಿಗೆ ಕೊಳ್ಳೆ ಹೊಡೆಯಲು ಈ ಒಪ್ಪಂದ ದಾರಿ ಮಾಡಿಕೊಡುತ್ತದೆ.

ಅಮೇರಿಕಾದ ಎನ್ರಾನ್ ಕಂಪನಿ ಕುಸಿಯುತ್ತಿದ್ದ, ಸಂದರ್ಭದಲ್ಲಿ ಅಂದಿನ ಭಾರತದ ಸರ್ಕಾರಕ್ಕೆ ದುಂಬಾಲು ಬಿದ್ದು ವಿದ್ಯುತ್ ಸ್ಥಾವರ ಸ್ಥಾಪಿಸಿ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಳ್ಳೆ ಹೊಡೆದಿದ್ದು, ಇನ್ನೂ ಜನರ ನೆನಪಿನಿಂದ ಮಾಸಿಲ್ಲ. ಆದರೆ ಆ ಕಂಪನಿ ಉಳಿಯಲಿಲ್ಲ. ದಿವಾಳಿ ಅರ್ಜಿ ಹಾಕಿದ ಆ ಕಂಪನಿ ಭಾರತದ ಅದರಲ್ಲೂ ಮಹಾರಾಷ್ಟ್ರದಲ್ಲಿ ಜನತೆಗೆ ವಂಚನೆ ಮಾಡಿದ್ದು, ಮಾತ್ರವಲ್ಲದೆ, ಕಂಪನಿಯ ಷೇರುದಾರರ ಹಣವನ್ನು 'ಗುಳುಂ' ಮಾಡಿತು.

ಆಳವಾದ ಸಮುದ್ರದಲ್ಲಿ ಹಡಗುಗಳು ಮುಳುಗಿದಂತೆ ಅಮೇರಿಕಾದ ಒಂದೊಂದೇ ದೈತ್ಯ ಕಂಪನಿಗಳು ಬೀದಿ ಪಾಲಾಗುತ್ತಿರುವುದನ್ನು ಕಂಡರೂ 'ರಾತ್ರಿ ಕಂಡ ಬಾವಿಗೆ ಹಗಲು ಬೀಳುತ್ತಿದ್ದಾರೆ' ಮನಮೋಹನ್ ಸಿಂಗ್ ಮತ್ತು ಅವರ ಕಾಂಗ್ರೆಸ್ ಪಕ್ಷದವರು.

ನೆಪ ಮಾತ್ರಕ್ಕೆ ವಿರೋಧ

4 ವರ್ಷಗಳಿಗೂ ಹೆಚ್ಚು ಕಾಲ ಸರಕಾರವನ್ನು ಬೆಂಬಲಿಸಿದ ಎಡಪಕ್ಷಗಳ ವಿರೋಧವನ್ನು ಲೆಕ್ಕಿಸದೆ ಅಣು ಒಪ್ಪಂದಕ್ಕೆ ಮುಂದಾದ ಮನಮೋಹನ್‌ಸಿಂಗ್ ನೇತೃತ್ವದ ಕೇಂದ್ರ ಸರಕಾರವು ಅಮೇರಿಕಾದ ಅಧ್ಯಕ್ಷ ಜಾರ್ಜ್ ಬುಶ್ ಅಲ್ಲಿನ ಕಾಂಗ್ರೆಸ್‌ಗೆ ಬರೆದ ಪತ್ರದ ಹಿನ್ನೆಲೆಯಲ್ಲಿ ವಿರೋಧವನ್ನು ವ್ಯಕ್ತಪಡಿಸಿದೆ. ಎಲ್ಲವೂ ಮುಗಿದು ಅಂತಿಮ ಒಪ್ಪಂದಕ್ಕೆ ಸಹಿ ಹಾಕಲು ಅಮೇರಿಕಾಕ್ಕೆ ಹೊರಡುತ್ತಿರುವ ಸಂದರ್ಭದಲ್ಲಿ ಅಮೇರಿಕಾದ ಅಧ್ಯಕ್ಷರು ಅಲ್ಲಿನ ಕಾಂಗ್ರೆಸ್ಸಿಗರಿಗೆ ಬರೆದ ಪತ್ರಕ್ಕೆ ವಿರೋಧ ವ್ಯಕ್ತಪಡಿಸಿದರೆ ಏನು ಫಲ? ಇದು ಅಮೇರಿಕಾದ ಕಿರಿಯ ಪಾಲುದಾರನಾಗುವ ಕುತಂತ್ರವನ್ನು ಅರಿಯದ ಭಾರತದ ಮುಗ್ಧ ಜನರ ದಿಕ್ಕು ತಪ್ಪಿಸುವ ಕಾಂಗ್ರೆಸ್ ಪಕ್ಷದ ತಂತ್ರವಾಗಿದೆ ಅಷ್ಟೆ.

ಪರಮಾಣು ವಿತರಣಾ ಗುಂಪು (ಎನ್‌ಎಸ್‌ಜಿ) ಭಾರತದ ಮೇಲೆ ಹಾಕಿದ ದಿಗ್ಬಂಧನವನ್ನು ಸಡಿಲಿಸಲಾಗಿದೆ ಎಂದು ಜಗತ್ತಿಗೆ ಹೇಳಿದರೂ ಅದರ ಹಿಂದೆ ಅಡಗಿರುವ ಕರಾಳ ತತ್ವಗಳು ಒಂದೊಂದಾಗಿ ಬೆಳಕಿಗೆ ಬರುತಿದೆ.

ಮೊದಲನೆಯದಾಗಿ, ಹತ್ತು ವರ್ಷಗಳ ಹಿಂದೆ ಅಣ್ವಸ್ತ್ರ ಪರೀಕ್ಷೆಯ ನಂತರ ಅಮೇರಿಕಾವೂ ಸೇರಿದಂತೆ ಹಲವು ರಾಷ್ಟ್ರಗಳು ಭಾರತದ ಮೇಲೆ ಹೇರಿದ್ದ ದಿಗ್ಬಂಧನದ ಹಿನ್ನೆಲೆಯಲ್ಲಿ ಭಾರತ ಸರಕಾರವು ಇನ್ನು ತಾನು ಅಣ್ವಸ್ತ್ರ ಪರೀಕ್ಷೆ ನಡೆಸುವುದಿಲ್ಲ ಎಂದು ಘೋಷಿಸಿಕೊಂಡಿತ್ತು. ಆದರೆ ಈಗ ಅಣು ಒಪ್ಪಂದದ ಹೆಸರಿನಲ್ಲಿ 45 ರಾಷ್ಟ್ರಗಳ ದಿಗ್ಬಂಧನವನ್ನು ಸಡಿಲಿಸಲು ಇನ್ನು ಮುಂದೆ ಈ ರಾಷ್ಟ್ರಗಳ ಒಪ್ಪಿಗೆ ಪಡೆಯದೆ ಅಣು ಪರೀಕ್ಷೆ ನಡೆಸುವುದಿಲ್ಲ ಎಂಬ ಷರತ್ತನ್ನು ಒಪ್ಪಿಕೊಂಡಂತಾಯಿತು. ಅಂದರೆ ಇನ್ನು ಮುಂದೆ ಭಾರತ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುವಂತಿಲ್ಲ. ಇದು ಭಾರತದ ಸಾರ್ವಭೌಮತೆಗೆ ತಗುಲಿದ ಮಹತ್ತರವಾದ ಏಟು.


ಸೆಪ್ಟೆಂಬರ್ 13 ರಂದು ಕನ್ನಡಪ್ರಭ ಪತ್ರಿಕೆಯಲ್ಲಿ ಬಂದ ವರದಿಯ ಪ್ರಕಾರ 'ಅಣು ದಿಗ್ಬಂಧನವನ್ನು ಎನ್‌ಎಸ್‌ಜಿ ರಾಷ್ಟ್ರಗಳು ಸಡಿಲಿಸಿದ್ದರೂ ಸೂಕ್ಷ್ಮ ತಂತ್ರಜ್ಞಾನಗಳನ್ನು ಭಾರತಕ್ಕೆ ನೀಡಬಾರದು ಎಂಬ ರಹಸ್ಯ ನಿರ್ಧಾರವನ್ನು ಅವು ಕೈಗೊಂಡಿವೆ....." ಅಂದರೆ ಎನ್‌ಎಸ್‌ಜಿ ಸಡಿಲಿಕೆ ನಿಜವಾದ ಸಡಿಲಿಕೆ ಅಲ್ಲ.

ಎರಡನೆಯದಾಗಿ ಅಮೇರಿಕಾದ ಅಧ್ಯಕ್ಷರು ಅಲ್ಲಿನ ಸಂಸತ್ತಿಗೆ (ಕಾಂಗ್ರೆಸ್) ಬರೆದ ಪತ್ರದಲ್ಲಿ ಅಣು ಒಪ್ಪಂದವು ರಾಜಕೀಯ ಒಪ್ಪಂದವಾಗಿದ್ದು ಕಾನೂನಿನ ಬೆಂಬಲವಿಲ್ಲ ಎಂದು ಹೇಳುವ ಮೂಲಕ ಭಾರತಕ್ಕೆ ಯಾವ ಸ್ಥಾನವನ್ನು ಕೊಡಲಾಗಿದೆ ಎಂಬುದು ಸಾಬೀತಾಗಿದೆ. ಇದರಿಂದ ಭಾರತದ ಸಂಸತ್ತಿಗೆ ಪ್ರಧಾನಿ ನೀಡಿದ ಭರವಸೆ ಸುಳ್ಳಾಗಿದೆ. ಅಂದರೆ ಎಡಪಕ್ಷಗಳು ಯಾವಾಗಲೂ ಹೇಳುತ್ತಾ ಬಂದಿದ್ದ ಹೈಡ್ ಕಾಯಿದೆಯ ಅನ್ವಯ ಭಾರತಕ್ಕೆ ಸ್ವತಂತ್ರವಾದ ಸಾರ್ವಭೌಮ ನಿರ್ಧಾರ ಕೈಗೊಳ್ಳುವಂತಿಲ್ಲ.

ಮೂರನೆಯದಾಗಿ, ಎನ್‌ಎಸ್‌ಜಿ ಸಡಿಲಿಕೆ ನಿರ್ಧಾರ (ವೇವರ್)ದ ಪ್ಯಾರಾ3 ರ ಪ್ರಕಾರ ನಾಗರಿಕ ಹಾಗೂ ಮಿಲಿಟರಿ ಅಣುಸ್ಥಾವರಗಳನ್ನು ಪ್ರತ್ಯೇಕಿಸುವ ಯೋಜನೆಗೆ (seperation plan) 2005ರ ಜುಲೈ 18 ರಂದು ಭಾರತದ ಪ್ರಧಾನಿ ಹಾಗೂ ಅಮೇರಿಕಾದ ಅಧ್ಯಕ್ಷರು ನಡೆಸಿದ ಮಾತುಕತೆ ಹಾಗೂ ಸೆಪ್ಟೆಂಬರ್ 5 ರಂದು ವಿದೇಶಾಂಗ ಸಚಿವರು ನೀಡಿದ ಹೇಳಿಕೆಯೇ ಆಧಾರವಾಗಿರುತ್ತದೆ. ಅಣು ಒಪ್ಪಂದ (123 ಒಪ್ಪಂದ)ವೂ ಸೇರಿದಂತೆ ಎಲ್ಲಾ ದ್ವಿಪಕ್ಷೀಯ ಒಪ್ಪಂದಗಳು ಮೇಲೆ ಹೇಳಿದ ಪ್ಯಾರಾ 3 ರ ಭಾಗವಾಗಿರುತ್ತದೆ. ಅಂದರೆ ಇರಾನ್ ಕುರಿತು ಅಮೆರಿಕಾ ತೆಗೆದುಕೊಳ್ಳುವ ನಿರ್ಧಾರಕ್ಕೆ ಭಾರತ ಒಪ್ಪಬೇಕು. ಆದ್ದರಿಂದಲೇ ಹಿಂದೆ ಐಎಇಎ ಸಭೆಯಲ್ಲಿ 2 ಬಾರಿ ಭಾರತ ಇರಾನ್ ವಿರುದ್ಧ ಮತ ನೀಡಿದ್ದನ್ನು ನೆನಪಿಸಿಕೊಳ್ಳಬೇಕು.

123 ಒಪ್ಪಂದದ ಒಂದೊಂದು ತುಣುಕುಗಳು ಅಮೇರಿಕಾ ಮತ್ತು ಇತರ ದೇಶಗಳಲ್ಲಿ ಹೊರಗೆ ಬೀಳುತ್ತಿರುವುದರಿಂದ ಅಮೇರಿಕಾದಿಂದ ರಿಯಾಕ್ಟರ್ ಆಗಲೀ ಇಂಧನವಾಗಲಿ ಪಡೆಯಲು ಎಷ್ಟೊಂದು ಕಷ್ಟವಿದೆ ಎಂಬುದು ಸ್ಪಷ್ಟವಾಗುತ್ತದೆ. ಒಮ್ಮೆ ಎನ್‌ಎಸ್‌ಜಿ ಒಪ್ಪಿಗೆ ಪಡೆದ ನಂತರ ಅಮೆರಿಕಾ ನೀಡದೆ ಹೋದಲ್ಲಿ ಇತರೆ ದೇಶಗಳಿಂದ ರಿಯಕ್ಟರ್ ಅಥವಾ ಪರಮಾಣು ಇಂಧನವನ್ನು ಪಡೆಯಬಹುದು ಎಂದು ಮನಮೋಹನ್‌ಸಿಂಗ್ ಹೇಳುತ್ತಾರೆ. ಆದರೆ ಸಮಾಜವಾದಿ ದೇಶಗಳನ್ನು ಹೊರತುಪಡಿಸಿದರೆ ಉಳಿದ ದೇಶಗಳ ಮೇಲೆ ಸದ್ಯಕ್ಕೆ ಅಮೇರಿಕಾದ ಪ್ರಭಾವವೇ ಜಾಸ್ತಿ ಇದೆ ಎಂಬುದು ಮನಮೋಹನ್‌ಸಿಂಗರಿಗೆ ಗೊತ್ತಿಲ್ಲವೇನು?.

ಪುಟ 14ಕ್ಕೆ



ಕೃಪೆ: ಪ್ರಜಾವಾಣಿ

ಮನಮೋಹನ ನೀತಿ: ಪ್ರತಿಭಟನೆಗೆ ಕರೆ

ಸೆಪ್ಟೆಂಬರ್ 25ಕ್ಕೆ ಅಣು ಒಪ್ಪಂದಕ್ಕೆ ಅಂತಿಮವಾಗಿ ಸಹಿ ಬೀಳಲಿದ್ದು, ಅಂದು ದೇಶದಾದ್ಯಂತ ಪ್ರತಿಭಟನೆ ನಡೆಸಲು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್, ಮತ್ತು ತೆಲುಗುದೇಶಂ ಪಕ್ಷ ಹಾಗೂ ಜನತಾದಳ(ಎಸ್) ನಿರ್ಧರಿಸಿವೆ.

ಅಂತಿಮವಾಗಿ ಒಪ್ಪಂದಕ್ಕೆ ಸಹಿ ಹಾಕುವ ಮೊದಲು ಸಂಸತ್ತನ್ನು ಕರೆದು ಒಪ್ಪಿಗೆ ಪಡೆಯಲಾಗುವುದು ಎಂದು ಐಎಇಎಗೆ ಹೋಗುವ ಮೊದಲು ದೇಶಕ್ಕೆ ಭರವಸೆ ನೀಡಿದ್ದರೂ ಸಂಸತ್ತನ್ನು ಎದುರಿಸಲು ಮನಮೋಹನ್ ಸಿಂಗ್ ಸರ್ಕಾರ ಹಿಂದೇಟು ಹಾಕುತ್ತಿದೆ. ಆದ್ದರಿಂದಲೇ ಸಂಸತ್ತಿನ ಅಧಿವೇಶನ ಅಕ್ಟೋಬರ್ 17 ರಿಂದ ಆರಂಭವಾಗಲಿದೆ. ಅಂದರೆ ಅದಕ್ಕೂ ಮೊದಲು ಅಮೇರಿಕಾಕ್ಕೆ ಬರಬೇಕೆಂದು ಅಧ್ಯಕ್ಷ ಜಾರ್ಜ್‌ಬುಶ್ ನೀಡಿದ ಆಹ್ವಾನದ ಮೇಲೆ ಮನಮೋಹನ್‌ಸಿಂಗ್ ಸೆಪ್ಟೆಂಬರ್ 25ಕ್ಕೆ ನ್ಯೂಯಾರ್ಕ್ ತೆರಳಲಿದ್ದು, ಅಣು ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ.

ಅಮೇರಿಕಾದ ಕಾಂಗ್ರೆಸ್ಸಿನ (ಅಲ್ಲಿನ ಸಂಸತ್ತು) ಅಧಿವೇಶನ ಈಗ ನಡೆಯುತ್ತಲಿದ್ದು, ಸೆಪ್ಟೆಂಬರ್ 26ಕ್ಕೆ ಮುಕ್ತಾಯಗೊಳ್ಳಲಿದೆ. ವಿಪರ್ಯಾಸವೆಂದರೆ ಯಾವುದೆ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಅಮೇರಿಕಾದಲ್ಲಿ ಅಲ್ಲಿನ ಸಂಸತ್ತಿನ ಒಪ್ಪಿಗೆ ಬೇಕು. ಆದರೆ ಭಾರತದಲ್ಲಿ ಕ್ಯಾಬಿನೆಟ್‌ನ(ಸಚಿವ ಸಂಪುಟ) ಒಪ್ಪಿಗೆ ಇದ್ದರೆ ಸಾಕು. ಇದು ಮನಮೋಹನ್ ಸಿಂಗ್‌ರ ನೀತಿ.

ತಾರಾಪುರ ಸ್ಥಾವರಕ್ಕೆ ಒದಗಿದ ಗತಿ :

1964ರಲ್ಲಿ ಭಾರತವು ಅಮೇರಿಕಾದೊಂದಿಗೆ ತಾರಾಪುರ ಅಣು ಸ್ಥಾವರಕ್ಕೆ ಇಂಧನ ಒದಗಿಸುವ ಕುರಿತು ಅಣು ಒಪ್ಪಂದ ಮಾಡಿಕೊಂಡಿತ್ತು. ಆದರೆ ಆ ಒಪ್ಪಂದ ಏನಾಯ್ತು? 1974 ರಲ್ಲಿ ಪ್ರಥಮ ಬಾರಿಗೆ ಭಾರತವು ಪೋಖ್ರಾನ್‌ನಲ್ಲಿ ಪರಮಾಣು ಪರೀಕ್ಷೆ ನಡೆಸಿದಾಗ ಅಮೇರಿಕಾ ತಾರಾಪುರಕ್ಕೆ ಇಂಧನ ಪೂರೈಕೆ ನಿಲ್ಲಿಸಿತ್ತು. ಮಾತ್ರವಲ್ಲದೇ ಏಕಪಕ್ಷೀಯವಾಗಿ ಒಪ್ಪಂದವನ್ನು ರದ್ದುಪಡಿಸಿತ್ತು.

ಮುಂದೆಯೂ ಹಾಗೇ ಮಾಡುತ್ತೇವೆಂಬ ಇಂಗಿತವನ್ನು ಅಮೇರಿಕಾ ಈಗಾಗಲೇ ವ್ಯಕ್ತಪಡಿಸಿದೆ. "ಭಾರತವು ಅದರ ಸಾರ್ವಭೌಮತ್ವಕ್ಕೆ ತಕ್ಕಂತೆ ಪರಮಾಣು ಪರೀಕ್ಷೆ ನಡೆಸಿದರೆ ಅದಕ್ಕೆ ಉತ್ತರ ನೀಡುವ ಹಕ್ಕನ್ನು ಅಮೇರಿಕಾ ಉಳಿಸಿಕೊಂಡಿದೆ" ಎಂದು ವಿದೇಶಾಂಗ ಕಾರ್ಯದರ್ಶಿ ಕಾಲಡೊಲಿಸಾ ರೈಸ್ ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಿಯೂ ಬುದ್ಧಿಬಾರದಿದ್ದರೆ?

'ಹಿಂದುತ್ವದ ಪ್ರಯೋಗ ಶಾಲೆ' ಕರಾವಳಿಯಲ್ಲಿ ಒರಿಸ್ಸಾದಲ್ಲಿನ ಉದ್ವಿಗ್ನ ಸ್ಥಿತಿಯನ್ನೇ ಬಳಸಿಕೊಂಡು ಸಂಘ ಪರಿವಾರ ವ್ಯವಸ್ಥಿತ ದಾಳಿ ನಡೆಸಿದೆ. ಭಜರಂಗ ದಳ ಮುಂತಾದ ದಾಳಿಕೋರರನ್ನು ಬಿಟ್ಟ ಪೊಲೀಸರು ಕ್ರಿಶ್ಚಿಯನ್ ಯುವಕರನ್ನು ಹಿಡಿದು ಹಿಡಿದು ಬಡಿದು ಕೇಸು ಜಡಿದಿರುವುದು ಏನನ್ನು ತೋರಿಸುತ್ತಿದೆ?

ಇದು ಕ್ರೈಸ್ತರ ಮೇಲಿನ ದಾಳಿಯಲ್ಲ ಪ್ರಜಾಪ್ರಭುತ್ವದ ಮೇಲಿನ ದಾಳಿ


ಹಿಂದೂ-ಮುಸ್ಲಿಂ ಮತೀಯ ಗಲಭೆಗಳ ಪ್ರಯೋಗವನ್ನು ಕರಾವಳಿಯಲ್ಲಿ ಯಶಸ್ವಿಯಾಗಿ ನಡೆಸಿ ರಾಜ್ಯದಲ್ಲಿ ಅದನ್ನು ಪ್ರಯೋಗಿಸಿ ಅಧಿಕಾರ ಹಿಡಿದ ಬಿಜೆಪಿ ಮುಂದಿನ ಲೋಕಸಭೆ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ಮತ್ತೊಂದು ಭರ್ಜರಿ ಪ್ರಯೋಗವನ್ನು ಕರಾವಳಿಯಲ್ಲಿ ನಡೆಸಿದೆ.

ಕಳೆದ ತಿಂಗಳ ಕೊನೆಯಲ್ಲಿ ಮಂಗಳೂರಿನ ಬಿ.ಸಿ.ರೋಡ್, ಬಜ್ಪೆ, ಮತ್ತಿತರೆಡೆ ನಡೆದ ಹಲ್ಲೆ ಘಟನೆಗಳನ್ನು ಬಳಸಿ ಕೋಮುಗಲಭೆ ಸೃಷ್ಟಿಸಲು ಯತ್ನಿಸಿದ್ದ ಸಂಘ ಪರಿವಾರ ನಿರೀಕ್ಷಿತ ಫಲ ದೊರಕದೆ ನಿರಾಶೆಗೊಳಗಾಗಿತ್ತು. ಭಯಭೀತಗೊಂಡಿದ್ದ ಜನತೆ ಎಲ್ಲಾ ಸರಿಯಾಯಿತು ಎಂದು ನಿರಾಳಗೊಳ್ಳುತ್ತಿದ್ದಂತೆಯೇ ಮೊನ್ನೆ ಸೆ.14 ರಂದು ದೆಹಲಿ ಸರಣಿ ಸ್ಫೋಟಗಳನ್ನು ಮೀರಿಸುವ ರೀತಿಯಲ್ಲಿ ವ್ಯವಸ್ಥಿತವಾದ ಯೋಜನೆಯೊಂದನ್ನು ಜಾರಿಗೊಳಿಸಿದ ಸಂಘ ಪರಿವಾರ ಕರಾವಳಿಯ ಒಟ್ಟು 12ಕ್ಕೂ ಹೆಚ್ಚು ಕ್ರೈಸ್ತರ ಚರ್ಚ್, ಪ್ರಾರ್ಥನಾ ಮಂದಿರಗಳಿಗೆ ಏಕಕಾಲದಲ್ಲಿ ಕ್ರೈಸ್ತರು ಪ್ರಾರ್ಥನೆ ಸಲ್ಲಿಸುತ್ತಿರುವಾಗಲೇ ದಾಳಿ ನಡೆಸಿ ಜಿಲ್ಲೆಯನ್ನು ಅಗ್ನಿಕುಂಡವನ್ನಾಗಿಸಿತು.

ಕ್ರೈಸ್ತರ ಮೇಲಿನ ದಾಳಿಗಳಿಗೆ ಕಳೆದ ಕೆಲ ದಿನಗಳಿಂದಲೇ ಜಿಲ್ಲೆಯಲ್ಲಿ ತಾಲೀಮು ನಡೆಸಲಾಗುತ್ತಿತ್ತು. ಮತಾಂತರದ ಗುಲ್ಲು ವ್ಯಾಪಕವಾಗಿ ಹರಡಲಾಗಿತ್ತು. ನ್ಯೂ ಲೈಫ್ ಹೆಸರಿನ ಕ್ರೈಸ್ತರ ಸಣ್ಣ ಗುಂಪನ್ನು ಗುರಿಯಾಗಿಟ್ಟುಕೊಂಡು ಇತ್ತೀಚಿನ ವರ್ಷಗಳಲ್ಲಿ ಮತಾಂತರದ ಪ್ರಶ್ನೆಯನ್ನು ಮುಂಚೂಣಿಗೆ ತರಲು ಸಂಘ ಪರಿವಾರ ಯತ್ನಿಸುತ್ತಿತ್ತು. ವರ್ಷಕ್ಕೆ ಒಂದೆರಡು ಬಾರಿ ನ್ಯೂ ಲೈಫ್ ಕೇಂದ್ರಗಳಿಗೆ ಮತಾಂತರದ ನೆಪವನ್ನೊಡ್ಡಿ ದಾಳಿ ನಡೆಸಲಾಗುತ್ತಿದ್ದರೂ, ನ್ಯೂ ಲೈಫ್ ಸಂಘಟನೆಯವರು ಪ್ರತಿಕ್ರಿಯಿಸದೆ ಸುಮ್ಮನಾಗುತ್ತಿದ್ದರು. ಕ್ರಿಶ್ಚಿಯನ್ನರಲ್ಲಿ ಬಹುಸಂಖ್ಯಾತರಾದ ಕೆಥೋಲಿಕ್ ಪಂಥದವರು ನ್ಯೂ ಲೈಫ್‌ಗೂ ತಮಗೂ ಯಾವುದೇ ಸಂಬಂಧವಿಲ್ಲ, ಕೆಥೋಲಿಕ್ ಚರ್ಚ್‌ಗಳು ಮತಾಂತರ ನಡೆಸುತ್ತಿಲ್ಲ ಎಂಬ ಹೇಳಿಕೆ ನೀಡುತ್ತಿದ್ದರು. ಇದು ಇಲ್ಲಿಗೆ ಮುಗಿದುಹೋಗುತ್ತಿತ್ತು. ದನ ಸಾಗಾಟ, ಕಸಾಯಿಖಾನೆ ವಿವಾದ, ವಿಭಿನ್ನ ಕೋಮಿನ ಪ್ರೇಮಿಗಳು, ಭಯೋತ್ಪಾದನೆ ಯಂತಹ ಹಾಟ್‌ಕೇಕ್ ವಿಷಯಗಳು ದಿನಕ್ಕೊಂದು ದೊರಕುತ್ತಿದ್ದುದರಿಂದ ಭಜರಂಗಿಗಳೂ ಜಾಸ್ತಿ ಆ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ.

ಒರಿಸ್ಸಾ-ಪ್ರಯೋಗಕ್ಕೆ ಸ್ಕೆಚ್

ಇತ್ತೀಚೆಗೆ ಈ ವಿಷಯಗಳು ಹಳಸಲಾಗ ತೊಡಗಿದಾಗ ರಾಷ್ಟ್ರೀಯ ಮಟ್ಟದಲ್ಲಿ ಮತಾಂತರದ ವಿಷಯವನ್ನು ಚಿಡ್ಡಿಪಡೆ ಯಶಸ್ವಿಯಾಗಿ ಬಳಸುತ್ತಿರುವುದನ್ನು ನೋಡಿದ ಕರಾವಳಿಯ ಸಂಘಿಗಳು ಒರಿಸ್ಸಾ ಗಲಭೆಯ ನಂತರ ಇಲ್ಲಿಯೂ ಒರಿಸ್ಸಾ ಪ್ರಯೋಗಕ್ಕೆ ಸ್ಕೆಚ್ ತಯಾರಿಸಿದರು.



ಒರಿಸ್ಸಾ ಘಟನೆಗಳನ್ನು ಖಂಡಿಸಿ ಮಿಷನರಿಗಳು ಶಾಂತಿಯುತ ಪ್ರತಿಭಟನೆಯ ಭಾಗವಾಗಿ ತಮ್ಮ ಶಾಲಾ ಕಾಲೇಜುಗಳನ್ನು ಒಂದು ದಿನ ಮಟ್ಟಿಗೆ ಬಂದ್ ಮಾಡಿದಾಗ ಬೀದಿಗಿಳಿದ ಕಾವಿ ಪಡೆ ಕ್ರೈಸ್ತ ಸಂಸ್ಥೆಗಳಿಗೆ ಮುತ್ತಿಗೆ ಹಾಕಿ ಭಯದ ವಾತಾವರಣವನ್ನು ನಿರ್ಮಿಸಿತು. ನಂತರ ಮಿಷನರಿಗಳಿಗೆ ಸೇರಿದ ಶತಮಾನಗಳ ಇತಿಹಾಸವಿರುವ ಬಡ ರೋಗಿಗಳ ಆಶ್ರಯ ತಾಣ ಫಾಧರ್ ಮುಲ್ಲರ್ಸ್ ಆಸ್ಪತ್ರೆಗೆ ಕುಂಟು ನೆಪವನ್ನೊಡ್ಡಿ ದಾಳಿ ನಡೆಸಿ ದಾಂಧಲೆಗೈಯ್ಯಲಾಯಿತು. "ಒರಿಸ್ಸಾದ ಲಕ್ಷ್ಮಣಾನಂದರ ಹತ್ಯೆಗೆ ಯಾರು ಹೊಣೆ, ಚರ್ಚುಗಳೇ ಉತ್ತರಿಸಿ" ಎಂಬ ಉದ್ರೇಕಕಾರಿ ಬ್ಯಾನರ್‌ಗಳನ್ನು ಹಾಕಲಾಯಿತು. ಕ್ರೈಸ್ತರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಪುಸ್ತಕಗಳನ್ನು ಮುದ್ರಿಸಿ ಶಾಲಾ ಕಾಲೇಜುಗಳಲ್ಲಿ ವಿತರಿಸಲಾಯಿತು.

ಈ ಬಾರಿ ಬಹಳ ಸ್ಪಷ್ಟವಾಗಿ ಕೆಥೋಲಿಕ್ ಕ್ರೈಸ್ತರನ್ನು ಬೀದಿಗೆಳೆಯಲೇ ಬೇಕು, ಆ ಮುಖಾಂತರ ಕರಾವಳಿಯ ಕೋಮು ಕದನಗಳಿಗೆ ಹೊಸ ಆಯಾಮ ನೀಡಬೇಕು ಎಂದು ತೀರ್ಮಾನಿಸಿ ವ್ಯವಸ್ಥಿತವಾದ ಪೂರ್ವ ತಯಾರಿಯೊಂದಿಗೆ ಬಿಜೆಪಿ ಪರಿವಾರ ಕಾರ್ಯಾಚರಣೆ ನಡೆಸಿದೆ.

ಇಷ್ಟೆಲ್ಲಾ ತಯಾರಿಯೊಂದಿಗೆ ಸೆ.14ರ ಏಕಕಾಲದಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆಸಲಾಗಿದೆ. ನ್ಯೂಲೈಫ್ ನವರಿಗೆ ಸೇರಿದ ಪ್ರಾರ್ಥನಾಲಯಗಳ ಜೊತೆಗೆ ಕೆಥೋಲಿಕ್‌ರ ಕೇಂದ್ರಗಳಿಗೂ ಉದ್ದೇಶಪೂರ್ವಕವಾಗಿ ದಾಳಿ ನಡೆಸಿ ಏಸುವಿನ ಮೂರ್ತಿ, ಪರಮ ಪ್ರಸಾದಗಳನ್ನು ಧ್ವಂಸಗೊಳಿಸಲಾಯಿತು.

ಚರ್ಚ್‌ಗಳ ಮೇಲೆ ದಾಳಿಯಾಗಬಹುದು ಎಂಬ ನಿರೀಕ್ಷೆ ಎಲ್ಲರಿಗೂ ಇದ್ದರೂ ಈ ರೀತಿ ಭಯೋತ್ಪಾದಕರನ್ನೂ ಮೀರಿಸುವ ಕೃತ್ಯ ನಡೆಯಬಹುದು ಎಂದು ನಿರೀಕ್ಷಿಸಿರದ ಕರಾವಳಿ ಒಮ್ಮೆಗೆ ದಂಗು ಬಡಿದುಹೋಯಿತು.

ಹತಾಶರಾಗಿ ಬೀದಿಗಿಳಿದರು

ಇತ್ತೀಚಿನ ದಿನಗಳ ನಿರಂತರ ಕಿರುಕುಳ, ಮತಾಂತರದ ಆರೋಪಗಳಿಂದ ಬೇಸತ್ತಿದ್ದ ಕ್ರೈಸ್ತರು ಈ ಬೃಹತ್ ಪ್ರಮಾಣದ ದಾಳಿ, ಮಿಲಾಗ್ರಿಸ್‌ನಂತಹ ಪುರಾತನ ಚರ್ಚಿನ ಮೇಲಾದ ದಾಳಿಯಿಂದ ಕಂಗೆಟ್ಟು, ಹತಾಶರಾಗಿ ತಕ್ಷಣವೇ ಜಿಲ್ಲೆಯಾದ್ಯಂತ ಬೀದಿಗಿಳಿದರು.


ಕಪ್ಪು ಬಾವುಟ ಹಾರಿಸಿ ಕ್ರೈಸ್ತರ ಪ್ರತಿಭಟನೆ

ಮಂಗಳೂರಿನ ಪ್ರತಿ ಚರ್ಚ್‌ಗಳ ಮುಂದೆ ನೂರಾರು ಸಂಖ್ಯೆಯಲ್ಲಿ ಕ್ರೈಸ್ತರು ಸೇರತೊಡಗಿದರು. ಗಾಯಕ್ಕೆ ಮೆಣಸು ಅರೆದಂತೆ ದಾಳಿಯ ಸಂಯೋಜನೆಗೆ ಮಂಗಳೂರಿಗೆ ಆಗಮಿಸಿದ್ದ ಭಜರಂಗಿ ಮುಖಂಡ ಮಹೇಂದ್ರ ಕುಮಾರ್ ದಾಳಿಯನ್ನು ನಾವೇ ನಡೆಸಿದ್ದೇವೆ, ಮತಾಂತರ ನಡೆಸುವ ನ್ಯೂ ಲೈಫ್ ವಿರುದ್ಧ ನಮ್ಮ ಕಾರ್ಯಾಚರಣೆ, ಕ್ರೈಸ್ತರ ಪ್ರತಿಭಟನೆ ನಡೆಸಿ ಸಮಸ್ಯೆಯನ್ನು ಮೈ ಮೇಲೆ ಎಳೆದುಕೊಳ್ಳಬಾರದು ಎಂದು ಥೇಟ್ ಲಾಡೆನ್ ತರಹ ಮಾಧ್ಯಮಗಳ ಎದುರು ಬಡಬಡಿಸತೊಡಗಿದ.

ಇದರಿಂದ ಇನ್ನಷ್ಟು ಆಕ್ರೋಶಿತರಾದ ಕ್ರೈಸ್ತ ಯುವಕರು ರಸ್ತೆ ತಡೆಗಳನ್ನು ನಡೆಸತೊಡಗಿದರು. ಮಂಗಳೂರಿನ ಕೇಂದ್ರ ಭಾಗದಲ್ಲಿ ಸಾವಿರಾರು ಕ್ರೈಸ್ತರು ಜಮಾವಣೆಗೊಂಡರು, ಮಂಗಳೂರು ಮೆಲ್ಲನೆ ಬಂದ್ ಆಗತೊಡಗಿತು. ಬಸ್ ಸಂಚಾರ ಸ್ಥಗಿತಗೊಂಡಿತು. ಕ್ರೈಸ್ತರು ಬೀದಿಗಿಳಿದ ವೇಗಕ್ಕೆ ಕಂಗಾಲಾದ ಜಿಲ್ಲಾಡಳಿತ ಪ್ರತಿಭಟನೆಯನ್ನು ಹತ್ತಿಕ್ಕಲು ವಿನಾಕಾರಣ ನಿಷೇಧಾಜ್ಞೆ ಜಾರಿಗೊಳಿಸಿತು.

ಯಾವತ್ತೂ ಬೀದಿಗಿಳಿಯದ, ಪ್ರತಿಭಟನೆ ನಡೆಸದೆ ಯೇಸು ನೋಡಿಕೊಳ್ಳುತ್ತಾನೆ, ಹಲ್ಲೆ ಮಾಡಿದವರನ್ನು ಕ್ಷಮಿಸಿಬಿಡಿ ಅನ್ನುತ್ತಿದ್ದ ಕ್ರೈಸ್ತರು ಏಕಾಏಕಿ ಬೀದಿಗಿಳಿದು ಪ್ರತಿಭಟನೆ ನಡೆಸುವುದನ್ನು ಕಂಡು ಕಸಿವಿಸಿಗೊಂಡ ಪರಿವಾರ ಹಿಂಸೆ ಸೃಷ್ಟಿಸುವ ಸಲುವಾಗಿ ನಿಷೇಧಾಜ್ಞೆಯ ನೆಪದಲ್ಲಿ ಪ್ರತಿಭಟನಾಕಾರರ ಮೇಲೆ

15ಕ್ಕೆ

ಕಾವಿಪಡೆಗಳನ್ನು ಮೀರಿಸಿದ ಪೋಲೀಸ್ ಪಡೆ

ದಾಳಿಕೋರ ಮಹೇಂದ್ರ ಕುಮಾರನ ಭಜರಂಗಿ ಪಡೆಯನ್ನು ಬಂಧಿಸದೆ ತಮ್ಮ ಮೇಲೆಯೇ ಪೋಲೀಸರು ಹಲ್ಲೆ ನಡೆಸಿದ್ದರಿಂದ ಕ್ರೈಸ್ತರು ಇನ್ನಷ್ಟು ಆಕ್ರೋಶಿತರಾಗಿ ಮರು ದಿವಸ ಕರಾವಳಿಯ ಎಲ್ಲಾ ಚರ್ಚುಗಳ ಎದುರು ಪ್ರತಿಭಟನೆ, ರಸ್ತೆ ತಡೆ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಎಲ್ಲೆಡೆ ಬೆಳಗಿನ ಜಾವದಿಂದಲೇ ಬೃಹತ್ ಸಂಖ್ಯೆಯಲ್ಲಿ ಕ್ರೈಸ್ತರು ಸೇರಿ ನಿಷೇಧಾಜ್ಞೆ ಉಲ್ಲಂಘಿಸಿ ಪ್ರತಿಭಟನೆ ನಡೆಸತೊಡಗಿದರು. ದಕ್ಷಿಣ ಕನ್ನಡದಲ್ಲಿ ಅಘೋಷಿತ ಬಂದ್ ಪರಿಸ್ಥಿತಿ ನಿರ್ಮಾಣವಾಯಿತು. ಜನತೆಯೂ ಭಜರಂಗಿಗಳಿಗೆ ಹಿಡಿ ಶಾಪ ಹಾಕ ತೊಡಗಿದರು, ಪರಿಸ್ಥಿತಿಯ ಅವಲೋಕನದ ನೆಪದಲ್ಲಿ ಮುಖ್ಯಮಂತ್ರಿಯವರು ಮಂಗಳೂರಿಗೆ ಆಗಮಿಸಿದರು.

ಮುಖ್ಯಮಂತ್ರಿ ಜಿಲ್ಲೆಯಲ್ಲಿ ಇರುವಾಗಲೇ ಎಲ್ಲೆಡೆ ಪ್ರತಿಭಟನಾಕಾರರ ಮೇಲೆ ಪೋಲೀಸ್ ದೌರ್ಜನ್ಯ ನಡೆಯತೊಡಗಿತು. ಪ್ರತಿಭಟನಾಕಾರರನ್ನು ಬೆನ್ನಟ್ಟಿದ ಯಡಿಯೂರಪ್ಪನವರ ಪೋಲೀಸ್ ಪಡೆ ಚರ್ಚ್‌ಗಳಿಗೆ ನುಗ್ಗಿ ಲಾಠಿ ಚಾರ್ಜ್ ಹೆಸರಿನಲ್ಲಿ ಮರ್ದನ ನಡೆಸತೊಡಗಿತು. ಕುಲಶೇಖರ, ತೊಕ್ಕೊಟ್ಟು, ವಾಮಂಜೂರು, ಬಜಪೆ ಮುಂತಾದೆಡೆ ಪೋಲಿಸ್ ಅತಿರೇಕದಿಂದ ಚರ್ಚ್ ಆವರಣದಲ್ಲಿ ರಣರಂಗದ ಪರಿಸ್ಥಿತಿ ನಿರ್ಮಾಣವಾಯಿತು. ಚರ್ಚ್‌ಗಳಿಗೆ ನುಗ್ಗಿದ ಪೋಲೀಸರು ಅಶ್ರುವಾಯು, ಲಾಠಿಚಾರ್ಜ್ ಮುಖಾಂತರ ಮಕ್ಕಳು, ಸನ್ಯಾಸಿಯರು, ವೃದ್ಧರ ಮೇಲೆ ದೌರ್ಜನ್ಯ ನಡೆಸತೊಡಗಿದರು. ತೊಕ್ಕೊಟ್ಟುವಿನಲ್ಲಂತೂ ಎಸ್‌ಪಿಯ ನೇತೃತ್ವದಲ್ಲಿಯೇ ದೌರ್ಜನ್ಯ ಪರಾಕಾಷ್ಠೆ ತಲುಪಿತು. ○

ದಬಾವಣೆ ರಾಜಕಾರಣ ಮತ್ತು ಕ್ರಿಶ್ಚಿಯನ್ನರು

ಎಷ್ಟೋ ಸಾರಿ ಸಂಜೆ ವೇಳೆ (ಬೆಂಗಳೂರಿ) ಸಂಜೆಯ ಪತ್ರಿಕೆಯನ್ನು ಕೊಂಡುಕೊಳ್ಳುವ ಓದುಗರಿಗೆ ಬಾರಿ ನಿರಾಶೆ ಕಾದಿರುತ್ತದೆ. ಎರಡು ಮೂರು ನಿಮಿಷಗಳಷ್ಟು ಓದಬೇಕಾದ ಯಾವ ಗಹನವಾದ ಸುದ್ದಿಯೂ ಅದರೊಳಗಿರುವುದಿಲ್ಲ. ಚಳಿಗಾಲವಾದರೆ ಸಂಜೆ ಬಜ್ಜಿ ಬೋಂಡ ತಿಂದು ಕೈ ಒರೆಸಿಕೊಳ್ಳಲು ಪತ್ರಿಕೆ ಪ್ರಯೋಜನಕ್ಕೆ ಬರಬಹುದು.

ಈಗೀಗ ಹಾಗಾಗುತ್ತಿಲ್ಲ. ಭಜರಂಗದಳ, ವಿಶ್ವ ಹಿಂದೂ ಪರಿಷತ್ ಮುಂತಾದ ಯಡಿಯೂರಪ್ಪನ ಪಟಾಲಂ ಅಂದರೆ ಕೇಸರಿ ಪಡೆಗಳಿಗೆ ಭಾರಿ ಖುಷಿಯ ಸುದ್ದಿಗಳು ಎಲ್ಲೆಲ್ಲೂ. ಬೆಳಗಿನ ಪತ್ರಿಕೆಗಳಲ್ಲಿ ಬಂದ ವರದಿ ಬಿಡಿ, ಸಂಜೆ ಬರುವ ಬೇರೆ ಆವರ್ತಿಗಳಲ್ಲೂ ಬೇರೆ ಬೇರೆ ಸುದ್ದಿಗಳು, ದಾಳಿ ದಾಳಿ ದಾಳಿ ರಾಜ್ಯದೆಲ್ಲೆಡೆ ಚರ್ಚ್‌ಗಳ ಮೇಲೆ ನಿರಂತರ ದಾಳಿಗಳ ವರದಿ. ಸಂಜೆ ಪತ್ರಿಕೆಗೆ 2 ರೂ ಕೊಟ್ಟರೆ ಪೂರ್ಣ ಅದು ಸಾರ್ಥಕ!! ಮತ್ತೆ ಮತ್ತೆ ಓದಿ ಆಸ್ವಾದಿಸಬಹುದು!!

ಸಂಘ ಪರಿವಾರದ ಜನ ತಾವು ಮಹಾನ್ ದೇಶಪ್ರೇಮಿಗಳೆಂದು ನಂಬಿಕೊಂಡಿದ್ದಾರೆ ಮತ್ತು ಆ ಬಗ್ಗೆ ಅವರು ಅವಕಾಶ ಸಿಕ್ಕಿದಾಗೆಲ್ಲಾ ಕೂಗುವುದು, ತಿರುಚುವುದು ಮಾಡುತ್ತಾರೆ.

ಈ ಭವ್ಯ ಭಾರತ ದೇಶದೊಳಗೆ ಇರುವ ಬಿಹಾರ ಎಂಬ ರಾಜ್ಯದಲ್ಲಿ ಏನೆಲ್ಲಾ ಅನಾಹುತ ನಡೆದಿದೆ. ನೇಪಾಳದಿಂದ ಭಾರತಕ್ಕೆ ಹರಿದು ಬರುವ ಕೋಸಿ ನದಿ ದಿಕ್ಕು ಬದಲಿಸಿದ್ದರಿಂದ ಬಿಹಾರದ 30 ಲಕ್ಷಕ್ಕೂ ಹೆಚ್ಚು ಜನರ ಬದುಕು ಬಿರುಗಾಳಿಗೆ ಸಿಕ್ಕ ದೋಣಿಯಂತಾಗಿದೆ.ಮನೆ ಮಾರು ಕಳೆದುಕೊಂಡ, ನಿರಾಶ್ರಿತ ಶಿಬಿರಗಳಲ್ಲಿ ದಿನದೂಡುತ್ತಿರುವ ಬಿಹಾರದ ಬಂಧುಗಳಿಗೆ ದೇಶದ ಎಲ್ಲ ದಿಕ್ಕುಗಳಿಂದಲೂ ನೆರವು ಸಿಗಬೇಕಾಗಿದೆ.

ಈಗ 'ದೇಶಪ್ರೇಮಿ'ಗಳ ನಿಜವಾದ ಕರ್ತವ್ಯವಾದರೂ ಏನಾಗಬೇಕಿತ್ತು. ಅವರು ಮಾಡುತ್ತಾ ಇರುವುದಾದರೂ ಏನು? ಬಿಹಾರದ ದುರಂತ ಸಂತ್ರಸ್ತರ ನೆರವಿಗೆ ಧಾವಿಸಬೇಕಾದ ದೇಶಭಕ್ತರಿಗೆ ಸಿಕ್ಕ ವಿಷಯವೇನು?

ಒರಿಸ್ಸಾ ರಾಜ್ಯದ ಕಂದಮಾಲ್ ಜಿಲ್ಲೆಯ ಲಕ್ಷ್ಮಣಾನಂದ ಸರಸ್ವತಿ ಸ್ವಾಮೀಜಿಯನ್ನು ಯಾರೋ ಗುಂಡಿಟ್ಟು ಕೊಂದರು. ಅವರನ್ನು ಕ್ರಿಶ್ಚಿಯನ್ನರೇ ಕೊಂದಿದ್ದಾರೆ ಎನ್ನುತ್ತಾರೆ ಸಂಘ ಪರಿವಾರದವರು. ನಾವೇ ಕೊಂದವರು ಅನ್ನುತ್ತಾರೆ ನಕ್ಸಲೀಯರು. ಕೊಲೆ ಖಂಡನಾರ್ಹ. ಅದರ ಬಗೆಗೆ ತನಿಖೆಯಾಗಲಿ. ಅಪರಾಧಿಗಳಿಗೆ ಕಾನೂನು ಪ್ರಕಾರ ಶಿಕ್ಷೆಯಾಗಲಿ. ಆದರೆ ಈಗ ನಡೆದಿರುವುದೇನು? ಇದೊಂದು ಅನಾಗರೀಕ ಪ್ರತಿಕ್ರಿಯೆ. ಒಂದು ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯದ ಜನರನ್ನು ಗುರಿಯಾಗಿಟ್ಟುಕೊಂಡು ನಡೆದಿರುವ ಹೀನ ಹಿಂಸಾಚಾರ ಇದು.

ರಾಜ್ಯದೆಲ್ಲೆಡೆ ಅತ್ಯಂತ ಯೋಜಿತವಾಗಿ ವ್ಯವಸ್ಥಿತವಾಗಿ ಚರ್ಚ್‌ಗಳು, ಕ್ರಿಶ್ಚಿಯನ್ನರ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆಯುತ್ತಿದ್ದರೆ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಿ ಸಂವಿಧಾನಿಕ ಬದ್ಧತೆ ಜವಾಬ್ದಾರಿ ನಿರ್ವಹಿಸಬೇಕಾದ ಮುಖ್ಯಮಂತ್ರಿಗಳು ಏನನ್ನುತ್ತಾರೆ.

'ಭಜರಂಗದಳವು ಸೇರಿದಂತೆ ಕೋಮುಗಲಭೆ ನಡೆಸುವವರ ವಿರುದ್ಧ ಸರ್ಕಾರ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತದೆ' ಎನ್ನುವ ಯಡಿಯೂರಪ್ಪ ಅದರ ಹಿಂದೆಯೇ ಹೇಳುವುದು ಕೇಳಿ.

"ಕರಾವಳಿ ಜಿಲ್ಲೆಗಳಲ್ಲಿ ಆಮಿಷ ಒಡ್ಡಿ ಬಲವಂತದ ಮತಾಂತರ ನಡೆಯುತ್ತಿದೆ. ಈ ಬಗ್ಗೆ ಮಾಹಿತಿ ಇದೆ. ಇದರ ಸುಳಿವನ್ನು ಅರಿತೇ ಭಜರಂಗದಳದವರು ದಾಳಿ ನಡೆಸಿದ್ದಾರೆ."

ಎಲಾ ನಾಲಿಗೆಯೇ? ಏನು ಚಮತ್ಕಾರ ನಿನ್ನದು. ಸರ್ಕಾರ ಕ್ರಮ ವಹಿಸುತ್ತದೆಂದು ತೋರಿಸಿಕೊಂಡು ಒಂದು ಹುಸಿ ಬೆದರಿಕೆ ಹಾಕಿದಂತೆಯೂ ಆಯ್ತು. ಜೊತೆಗೆ ಚರ್ಚ್‌ಗಳ ಮೇಲೆ ದಾಳಿ ಮಾಡಿದ್ದು ಸರಿಯಾಗಿಯೇ ಇದೆ, ನಾವಿದ್ದೇವೆ ನೀವು ಮುಂದೆ ನಡೆಯಿರಿ ಅಂತ ದಾಳಿಕೋರರ ರೆಕ್ಕೆ ಪುಕ್ಕಗಳಿಗೆ ನೀರು ತಟ್ಟಿದಂತೆಯೂ ಆಯ್ತು.

ಹಾನಿಗೊಂಡ ಚರ್ಚ್‌ಗಳ ದುರಸ್ತಿ ವೆಚ್ಚವನ್ನು ಸರ್ಕಾರ ಭರಿಸಿಕೊಡುತ್ತದೆ ಎನ್ನುವ ಮುಖ್ಯಮಂತ್ರಿಗಳು 'ಮತಾಂತರಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ' ಎನ್ನುತ್ತಾರೆ. ಯಾವ ಕಾನೂನಿನ ಬಗೆಗೆ ಹೇಳುತ್ತಾರೆ ಇವರು. ಯಾವುದೇ ವ್ಯಕ್ತಿ ತನಗೆ ಸರಿ ಕಂಡ ಧರ್ಮವನ್ನು ಅನುಸರಿಸುವುದು, ಆ ಕುರಿತು ಪ್ರಚಾರ ಮಾಡುವುದು, ತನಗೆ ಸರಿ ಕಾಣದ ಧರ್ಮವನ್ನು ಬಿಟ್ಟು ಮತ್ತೊಂದನ್ನು ಒಪ್ಪಿಕೊಳ್ಳುವುದು ಧಾರ್ಮಿಕ ಸ್ವಾತಂತ್ರ್ಯದ ಭಾಗವಲ್ಲವೇ? ಹಿಂದೆಲ್ಲಾ

ಕೇಂದ್ರ-ರಾಜ್ಯ ಗೃಹ ಸಚಿವರು ಏನು ಮಾಡುತ್ತಿದ್ದಾರೆ?



ಬೌದ್ಧ, ಜೈನ ಧರ್ಮಕ್ಕೆ ಜನ ಮತಾಂತರ ಆಗಲಿಲ್ಲವೇ? ಭಾರತೀಯ ಸಂವಿಧಾನದ ಪ್ರಕಾರ ಧಾರ್ಮಿಕ ಸ್ವಾತಂತ್ರ್ಯ ಒಂದು ಮೂಲಭೂತ ಹಕ್ಕಲ್ಲವೇ? ಪುಸ್ತಕಗಳಲ್ಲಿ ಅಡಗಿ ಕುಳಿತಿರುವ ಕಾನೂನು ಕಾಯ್ದೆಗಳು ಹೇಳುವುದೇ ಒಂದು. ಅಧಿಕಾರದ ಚುಕ್ಕಾಣಿ ಹಿಡಿದವರ ಕೈಯಿಂದ ಜಾರಿಗೊಳ್ಳುವಾಗ, ಬಾಯಿಂದ ಜಾರುವಾಗ ಅವು ಪಡೆದುಕೊಳ್ಳುವ ರೂಪವೇ ಒಂದು.

ಮಂಗಳೂರು, ಕೋಲಾರ, ಚಿಕ್ಕಬಳ್ಳಾಪುರ,ಚಿಕ್ಕಮಗಳೂರು ಹೀಗೆ ವಿವಿಧೆಡೆ ಚರ್ಚ್‌ಗಳ ಮೇಲಿನ ದಾಳಿಗೆ ಬೆದರಿ ಒಂದು ಊರಿನ ಧಾರ್ಮಿಕ ಮುಖ್ಯಸ್ಥರು ತಮ್ಮೂರಿನ ಚರ್ಚ್‌ಗೆ ಮತ್ತು ತಮಗೆ ರಕ್ಷಣೆ ಕೇಳಿದರೆ ಪೋಲೀಸರು ಏನು ಹೇಳುತ್ತಾರೆ. ನಗರ ಸಭೆಯಲ್ಲಿ ಯಾವ ಚರ್ಚ್‌ಗಳೂ ನೋಂದಾಯಿತವಾಗಿದ್ದವೋ ಆ ಚರ್ಚ್‌ಗಳಿಗೆ ಮಾತ್ರ ನಾವು ರಕ್ಷಣೆ ಕೊಡುತ್ತೇವೆ. ಬೇರೆ ಚರ್ಚ್‌ಗಳಿಗೆ ರಕ್ಷಣೆ ಕೊಡುವುದಿಲ್ಲ!

ಯಾವುದೇ ಧಾರ್ಮಿಕ ಸಂಸ್ಥೆ, ಪೂಜಾ ಮಂದಿರ, ಪ್ರಾರ್ಥನಾ ಮಂದಿರ ಇತ್ಯಾದಿ ನಿರ್ಮಾಣ ಮಾಡುವಾಗ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಅನುಮತಿ ಪಡೆದುಕೊಳ್ಳಬೇಕು ಎಂಬುದು ಅಪೇಕ್ಷಣೀಯವಾದರೂ, ಈ ನಿರ್ದಿಷ್ಟ ಸನ್ನಿವೇಶದಲ್ಲಿ ದಾಳಿ, ಗಲಭೆ, ಸಾವು ನೋವುಗಳಿಗೆ, ಆಕ್ರೋಶ ಹಿಂಸೆ, ಅವಕಾಶ ನೀಡದಂತೆ ಕಾನೂನು ಸುವ್ಯವಸ್ಥೆ ಕಾಪಾಡಬೇಕು. ಜವಾಬ್ದಾರಿ ಇರುವವರು ಆಡುವ ಮಾತಾ ಇದು.

ನನ್ನನ್ನು ಕೊಲ್ಲಲು ಬಂದಿದ್ದಾರೆ ರಕ್ಷಣೆ ನೀಡಿ ಎಂದು ಯಾರಾದರೂ ಈ ಪೋಲೀಸರನ್ನು ಕರೆದರೆ ನಿನ್ನ ಗುರ್ಧುತಿನ ಚೀಟಿ, ವಿಳಾಸ, ವಿವರ ತೋರಿಸು ಅದಿಲ್ಲವಾದರೆ ರಕ್ಷಣೆ ನೀಡುವುದಿಲ್ಲ ಎನ್ನುತ್ತಾರೋ ಈ ಪೋಲೀಸರು? ಸಂವಿಧಾನ ಕಾಪಾಡುವುದಾಗಿ ಪ್ರಮಾಣ ಮಾಡಿದ ಮುಖ್ಯಮಂತ್ರಿ ಸಂವಿಧಾನ ವಿರೋಧಿ ಮಾತುಗಳನ್ನಾಡುವಾಗ ಇನ್ನು ಸಾಧಾರಣ ಪೋಲೀಸ್ ಪೇದೆ, ಕೆಳ ಹಂತದ ಪೋಲೀಸ್ ಅಧಿಕಾರಿಗಳು ಇನ್ನೇನು ತಾನೇ ಮಾತನಾಡಬಹುದು.

ಒರಿಸ್ಸಾದಲ್ಲಿನ ಕ್ರಿಶ್ಚಿಯನ್ನರ ಮೇಲಿನ ದಾಳಿಯನ್ನು ವಿರೋಧಿಸಿ ತಮ್ಮ ಶಿಕ್ಷಣ ಸಂಸ್ಥೆಗಳಿಗೆ ರಜೆ ನೀಡಿ ಪ್ರತಿಭಟನೆ ನಡೆಸಿದ ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳಿಗೆ ನೋಟೀಸ್ ಜಾರಿ ಮಾಡಿ, ಯಾರೆಷ್ಟೇ ವಿರೋಧಿಸಿದರೂ 'ಕಾನೂನು ಕ್ರಮ' ಖಚಿತ ಎಂದು ಬೆದರಿಸುವ ಶಿಕ್ಷಣ ಮಂತ್ರಿಯನ್ನು ಪಡೆದ ರಾಜ್ಯದಲ್ಲಿ ಭಜರಂಗದಳದಂತಹ ಮತಾಂಧರ ಪಡೆಗೆ ಚರ್ಚ್‌ಗಳ ಮೇಲೆ ದಾಳಿ ಮಾಡಲು ಇನ್ಯಾವ ಸ್ಫೂರ್ತಿ ಬೇಕು, ಕಾಗೇರಿಯವರ ಕಿರುಚಾಟವೇ ಸಾಕು.

ಆರ್.ರಾಮಕೃಷ್ಣ



ಮಾತೆ ಮೇರಿ ವಿಗ್ರಹ ಧ್ವಂಸ - ಮತಾಂತರಕ್ಕೆ ಮೇರಿ ಪ್ರಚೋದಿಸಿದರೆ?

ಅವ್ಯಾಹತ ದಾಳಿಗಳು, ನಿಷ್ಕ್ರಿಯ ಸರ್ಕಾರ

ಕರ್ನಾಟಕದಲ್ಲಿ ಚರ್ಚ್‌ಗಳ ಮೇಲಿನ ದಾಳಿಯನ್ನು ದಾವಣಗೆರೆಯ ಬ್ಯಾಡಾದಲ್ಲಿ ಉದ್ಘಾಟಿಸಲಾಯಿತು. 'ಉದ್ಘಾಟನೆ' ಮತ್ತು ಮುಂದುವರಿಕೆಯನ್ನು ಯೋಜಿಸಲಾಗಿದೆಯೇ ಹೊರತು, ಅದರ ಸಮಾರೋಪವನ್ನು ಯೋಜಿಸಲಾಗಿಲ್ಲದಿರುವುದರಿಂದ ಅವು ನಿರಂತರವಾಗಿ ಮುಂದುವರೆದೇ ಇವೆ. ಪತ್ರಿಕೆಯನ್ನು ಕೊಂಡು ಓದುವ ಓದುಗರಿಗೆ ಪತ್ರಿಕೆಯ ಬೆಲೆಯ ಪೂರ್ಣ ಮೌಲ್ಯದ ಸುದ್ದಿ ಕೊಡಬೇಕೆಂದು ಸಂಘ ಪರಿವಾರ ನಿರ್ಧರಿಸಿಯೇನೋ ಎಂಬಂತೆ ದಿನವೂ ಅದೇ ಸುದ್ದಿ ಪತ್ರಿಕೆಗಳ ತುಂಬೆಲ್ಲಾ ಅದೇ ಸುದ್ದಿ.

ಮಂಗಳೂರಿನ ಹಂಪನ ಕಟ್ಟೆಯಲ್ಲಿರುವ ಮಿಲಾಗ್ರಿಸ್ ಚರ್ಚ್ ಬಳಿ ಪ್ರಾರ್ಥನಾ ಮಂದಿರ, ಕೋಡಿಕಲ್‌ನ ಸಿಎಸ್ಐ ಚರ್ಚ್‌ಗಳ ಮೇಲೆ ಧಾಳಿ ನಡೆಸಲಾಗಿದೆ. ಬೆಳ್ತಂಗಡಿಯ ಮಡಂತ್ಯಾರು ಸಮೀಪದ ಪಾರೆಂಕಿ ಗ್ರಾಮದಲ್ಲಿನ ಮಹಿಮಾ ಪ್ರಾರ್ಥನಾಲಯ ಹಾಗೂ ಕಳೆಂಜ ಗ್ರಾಮದ ಕಾಯರ್ತಡ್ಕದಲ್ಲಿರುವ ಐಪಿಸಿ ಪ್ರಾರ್ಥನಾ ಮಂದಿರ ಮೇಲೆ ದಾಳಿ ನಡೆದಿದೆ.


ಸುಳ್ಯದ ಬೋರುಗುಡ್ಡೆ ಬೆತೆಸ್ದಾ ಆರಾಧನಾಲಯದ ಮೇಲೆ ಧಾಳಿ ನಡೆದಿದೆ. ಪುತ್ತೂರು ತಾಲ್ಲೂಕಿನ ನೆಟ್ಟಣದಲ್ಲಿ ಪ್ರೊಟೆಸ್ಟೆಂಟ್ ಚರ್ಚ್‌ನಲ್ಲಿ ಪ್ರಾರ್ಥನಾ ನಡೆಸುತ್ತಿದ್ದ ಪಾಸ್ಟರ್ ಮೇಲೆ 40 ಮಂದಿ ಇದ್ದ ತಂಡ ಹಲ್ಲೆ ಮಾಡಿದೆ.

ಪುತ್ತೂರು ತಾಲ್ಲೂಕಿನ ಬನ್ನೂರು ಜೋಡುಕಟ್ಟೆಯಲ್ಲಿ ಬಿಲೀವರ್ಸ್ ಚರ್ಚ್ ಆಫ್ ಇಂಡಿಯಾ 9ಬಿಸಿಐ) ಪ್ರಾರ್ಥನಾ ಮಂದಿರಕ್ಕೆ ನುಗ್ಗಿದ ಕಿಡಿಗೇಡಿಗಳು ದಾಂಧಲೆ ಮಾಡಿ ಪೀಠೋಪಕರಣ ಹಾಳುಗೆಡವಿದ್ದಾರೆ.

ಮೂಡುಬಿದಿರೆಯ ಮಾಸ್ತಿಕಟ್ಟೆಯಲ್ಲಿ ಡಿಮೆಲ್ಲೋ ಕೌಂಪೌಂಡ್ ನ್ಯೂ ಲೈಫ್ ಎಂಬ ಪ್ರಾರ್ಥನಾಲಯದ ಮೇಲೆ ಧಾಳಿ ನಡೆದಿದೆ.

ಉಡುಪಿಯಲ್ಲಿಯೂ ಧಾಳಿಗಳು ನಡೆದಿವೆ. ಛಾಯಾಗ್ರಾಹಕರ ವೇಷದಲ್ಲಿ ಬಂದು ಭಾನುವಾರದ ಪ್ರಾರ್ಥನೆ ನಡೆಸಲಾಗುತ್ತಿದ್ದ ನ್ಯೂಲೈಫ್ ಚರ್ಚಿನ ಮೇಲೆ ಧಾಳಿ ನಡೆಸಲಾಗಿದೆ. ಬೈಂದೂರು ಸಮೀಪದ ನೀರುಗದ್ದೆಯ ಕ್ರೈಸ್ತ ಪ್ರಾರ್ಥನಾ ಮಂದಿರಕ್ಕೆ ನುಗ್ಗಿದ ದುಷ್ಕರ್ಮಿಗಳು ದಾಂಧಲೆ ನಡೆಸಿ, ವಾಹನಗಳಿಗೆ ಬೆಂಕಿ ಹಚ್ಚಿ,

ಪುಟ 15 ಕ್ಕೆ





■ ಕೆ.ನೀಲಾ

...... ಎಷ್ಟು ಘಟನೆಗಳ ಪಟ್ಟಿ ಮಾಡಲಿ...? ಒಂದೇ ಎರಡೇ.... ಪ್ರಭುತ್ವದ ದ್ರೋಹಕ್ಕೆ ಸಡ್ಡು ಹೊಡೆದು ಸಹಬಾಳ್ವೆ ಕಟ್ಟಿಕೊಂಡ ಉದಾಹರಣೆಗಳು ಅಸಂಖ್ಯಾತ. "ಧಾಳಿಕೋರರಂಗೆ ಧರ್ಮವುಂಟೇ....?" ಧರ್ಮವೆಂಬು ದೊಂದು ನೆಪ. ಧಾಳಿಗೆ ಸರಳಮಾರ್ಗ. ಆದರೆ ಜಗದಗಲ ಹೆಡೆಯೆತ್ತುತ್ತಿರುವ ಧಾಳಿಕೋರತನ ವಿಷದ ಹಲ್ಲು ಕಿತ್ತಲು ಮತ್ತೆ ಎದೆಯ ಬಟ್ಟಲಲಿ ಅಕ್ಷಯ ಪ್ರೇಮ ಹೊಂದಿದ ಜನಮಾನಸವೇ ಸರ್ವಶಕ್ತವಾದದ್ದು.

'ದಾಳಿಕೋರರಂಗೆ ಧರ್ಮವುಂಟೇ ?'

ಸೆಪ್ಟೆಂಬರ್ 17, ಯಾರಿಗೆ ಗೊತ್ತಿತ್ತು, ಈ ದಿನ ಸಂಘ ಪರಿವಾರಿಗಳ ಕೈಗೆ ಆಯುಧವಾಗುವ ದಿನವೆಂದು? ವರ್ಷದಿಂದ ವರ್ಷಕ್ಕೆ ಆತಂಕ ಸೃಷ್ಟಿಸುವ ದಿನವಾಗುತ್ತಿದೆ. ಈ ವರ್ಷ ಮುಖ್ಯಮಂತ್ರಿ ಯಡಿಯೂರಪ್ಪ ಕಲ್ಬುರ್ಗಿಗೆ ಭೇಟಿಯಿತ್ತು ಹೈದರಾಬಾದ್ ಕರ್ನಾಟಕ ವಿಮೋಚನಾ ಗಾಥೆಯನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿವುದಾಗಿ ಸಾರಿದ್ದಾರೆ. ಹಿಂದಿರುವ ಉದ್ದೇಶವೇನು? ತುಂಬ ಸ್ಪಷ್ಟವಾಗಿದೆ. ಹಿಂದೂ - ಮುಸ್ಲಿಂ ಭಾವನೆ ಕೆರಳಿಸಿ ತಮ್ಮ ಗದ್ದುಗೆಯನ್ನು ಗಟ್ಟಿಗೊಳಿಸುವ ಹುನ್ನಾರ ವಿಮೋಚನಾ ದಿನಾಚರಣೆಗೆ 10 ಲಕ್ಷ ರೂಪಾಯಿ ಬಿಡುಗಡೆ ಮಾಡುವರಂತೆ! ಕೋಮು ಬೆಂಕಿ ಪ್ರಜ್ವಲಿಸಲು ಮಾಡಬೇಕಾದ ಖರ್ಚು !!

ಮೈಸೂರು ಸಂಸ್ಥಾನವೂ ಒಪ್ಪಿರಲಿಲ್ಲ

ಬ್ರಿಟೀಷ್ ಸಾಮ್ರಾಜ್ಯಶಾಹಿಯು ಭಾರತವನ್ನು ಒಡೆದು ಆಳಿದೆ ಮತ್ತು ಭಾರತ ಬಿಟ್ಟು ತೆರಳುವಾಗಲು ಒಡೆಯಲು ಬೇಕಾದ ವಿಷ ಬೀಜ ಬಿತ್ತಿ ತೆರಳಿದೆ. ಬೇಕೆಂದರೆ ಭಾರತ ಒಕ್ಕೂಟದಲ್ಲಿ ರಾಜಶಾಹಿ ಸಂಸ್ಥಾನಗಳು ಸೇರಬಹುದು. ಇಲ್ಲವೇ ಸ್ವಾತಂತ್ರ್ಯ ರಾಜ್ಯಗಳೆಂದು ಘೋಷಿಸಿಕೊಂಡು ಉಳಿಯಬಹುದು ಎಂದು. ರಾಜಶಾಹಿ ಯಾವತ್ತೂ ತನ್ನ ಗದ್ದುಗೆ - ಕಿರೀಟಕ್ಕಾಗಿಯೇ ಬಡಿದಾಡುತ್ತ ಬಂದಿದೆ. ಅಂತೆಯೇ 1947 ಆಗಸ್ಟ್ 15 ರ ನಂತರವೂ ದೇಶದ ಐದು ಸಂಸ್ಥಾನಗಳು ಭಾರತದ ಒಕ್ಕೂಟದಲ್ಲಿ ವಿಲೀನವಾಗಲಿಲ್ಲ. ಜುನಾಗಡ್, ಕಾಶ್ಮೀರ್, ಗ್ವಾಲಿಯರ್, ಮೈಸೂರು ಮತ್ತು ಹೈದರಾಬಾದ್. ಹೈದರಾಬಾದ್ ಸಂಸ್ಥಾನವನ್ನು ಮುಸ್ಲಿಂ ದೊರೆ ನಿಜಾಮ ಆಳುತ್ತಿದ್ದರೆ ಉಳಿದ ನಾಲ್ಕೂ ಸಂಸ್ಥಾನಗಳು ಹಿಂದೂ ರಾಜರೇ ಆಳುತ್ತಿದ್ದರು. ಸ್ವಾತಂತ್ರ್ಯದ 48 ದಿನಗಳ ತರುವಾಯ ದೀರ್ಘ ಸಂಘರ್ಷ ನಡೆಸಿ, 'ಮೈಸೂರು ಚಲೋ' ಚಳುವಳಿಯಲ್ಲಿ ಸಾವಿರಾರು ಜನ ಪಾಲ್ಗೊಂಡ ಮೇಲೆ ಮೈಸೂರಿನಲ್ಲಿ ಭಾರತದ ಬಾವುಟ ಹಾರಾಡಬೇಕಾಯ್ತು. ಅಂತೆಯೇ ಹೈದರಾಬಾದ್ ನಿಜಾಮ ಸಹ. ಆದರೆ ಈಗ ಹೈದರಾಬಾದ್ ಸಂಸ್ಥಾನದ ವಿಲೀನೀಕರಣದ ಪ್ರಸಂಗವೇ ಸಂಘ ಪರಿವಾರಿಗಳಿಗೊಂದು ಆಹಾರ ಏಕೆ? ಏಕೆಂದರೆ ನಿಜಾಮ ಮುಸ್ಲಿಂ. 1947 ಆಗಸ್ಟ್‌ದಿಂದ 1948 ಸೆಪ್ಟೆಂಬರ್‌ವರೆಗೆ ನಿಜಾಮ ವಿಲೀನಕ್ಕೆ ಒಪ್ಪದಿರುವುದು ಮತ್ತು ಅದೇ ಸಂದರ್ಭದಲ್ಲಿ ಕಾಸಿಂ ರಜ್ವಿ ಎನ್ನುವ ಮುಸ್ಲಿಂ ವಕೀಲನೊಬ್ಬ 'ರಜಾಕಾರ್' ಗುಂಪು ಹುಟ್ಟುಹಾಕಿ ದಂಗೆ - ಲೂಟಿ ನಡೆಸಲು ಪ್ರಚೋದಿಸಿದ್ದು, ರಜಾಕಾರ ಸಂಘಟನೆಯಲ್ಲಿ ಮುಸ್ಲಿಮೇತರರೂ ಇರುವ ವಿಷಯ ಚರಿತ್ರೆಯಿಂದ ಮರೆ ಮಾಚಲಾಗಿದೆ. ಮೂಲಭೂತವಾದದ ಧೋರಣೆ ಹೊಂದಿದ ರಜಾಕಾರ ಧಾಳಿಯನ್ನು ಸದೆಬಡಿಯಲು ಭಾರತದ ಸರಕಾರವೂ ಮಿಲ್ಟ್ರಿ ಕಳಿಸಿ ಕ್ರಮ ಕೈಗೊಂಡಿತು. ಅನೇಕ ಪ್ರಗತಿಪರ ಮುಸ್ಲಿಂ ಬಾಂಧವರೇ 'ರಜಾಕಾರ' ವಿರೋಧಿಗಳಾಗಿದ್ದರು. ಮಿಲ್ಟ್ರಿ ಆಕ್ಷನ್ ತರುವಾಯ 'ರಜಾಕರ ಧಾಳಿ ನಿರ್ನಾಮವಾಯ್ತು ಮತ್ತು ಆನಂತರ ಹಿಂದೂ ಪರ ಶಕ್ತಿಗಳು ಇಮ್ಮಡಿ ಸೇಡು ತೀರಿಸಿಕೊಳ್ಳಲು, ಅಮಾಯಕ ಮುಸ್ಲೀಮರ ಮೇಲೆ ಧಾಳಿ - ಕೊಲೆ -ಸುಲಿಗೆ ಮಾಡಿದ್ದೇ ವೀರಸಂಘರ್ಷದ ಪ್ರತೀಕ ವೆಂದು ಸ್ವಾತಂತ್ರ್ಯ ಹೋರಾಟವೆಂದು ಬಣ್ಣಿಸಲಾಗು ತ್ತಿದೆ. ವೀರತೆಲಂಗಾಣದ ರೈತರ ಸಶಸ್ತ್ರ ಮಹಾನ್ ಹೋರಾಟವನ್ನೂ ಮರೆಮಾಚಲಾಗುತ್ತಿದೆ.

ಅಂದು ಆರೇಳು ತಿಂಗಳ ಕಾಲಘಟ್ಟದಲ್ಲಿ ನಡೆದ ಪರಸ್ಪರ ಕೋಮು ಪ್ರಚೋದನೆ ಧಾಳಿಯ ಪ್ರಕರಣವನ್ನು ಇಂದಿನ ಬಿಜೆಪಿ ಮತ್ತು ಸಂಘಗ್ಯಾಂಗು ಮುಸ್ಲಿಮ ವಿರುದ್ಧದ ಅಸ್ತ್ರವಾಗಿಸಿಕೊಳ್ಳಲು ಹವಣಿಸುತ್ತಿದೆ. ರಾಜಕೀಯ ಮತ್ತು ಧಾರ್ಮಿಕ ಮೂಲಭೂತವಾದದ ಕಾಂಡವನ್ನು ಬೇಕೆಂದೇ ಕೆಣಕಿ ಸಾಮಾನ್ಯ ಜನತೆಯ ಜೀವನದ ಸೌಹಾರ್ದ ತಂತುವನ್ನು ಕಡಿಯಲು ಹೊರಟಿದೆ ಬಿಜೆಪಿ. ಆ ಹೊತ್ತಿನಲ್ಲೂ ಜನಸಾಮಾನ್ಯ ಹಿಂದೂ-ಮುಸ್ಲೀಮರು ಪರಸ್ಪರ ಮಾನವೀಯತೆಯಿಂದ ರಕ್ಷಿಸಿಕೊಂಡಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಬಿಟ್ಟುಹೋದ 'ಒಡೆದಾಳುವ ನೀತಿ'ಯನ್ನು ಈಗ ಬಿಜೆಪಿ ಮುಂದುವರೆಸಿದೆ. ತಮ್ಮ ಗದ್ದುಗೆ ಉಳಿವಿಕೆಗಾಗಿ ಈ ನೆಲದಲ್ಲಿ ರಾಜರುಗಳು ಕ್ರೌರ್ಯದ ಯುದ್ಧ ಸಾರಿದ್ದಾರೆ. ಸಾಮಾನ್ಯ ಸೈನಿಕರು ಬಲಿಯಾಗಿದ್ದಾರೆ. ಈಗ ಇದೇ ಬಿಜೆಪಿ ತನ್ನ ಸರಕಾರ ರಕ್ಷಣೆಗಾಗಿ "ಆಪರೇಷನ್ ಕಮಲ"ವೆಂಬ ಪ್ರಜಾಪ್ರಭುತ್ವ ವಿರೋಧಿ, ಜನವಿರೋಧಿ ಕುಟಿಲ ಕಾರಸ್ಥಾನ ನೀತಿ ಅಳವಡಿಸಿಕೊಂಡಿದೆ. ಮಾತ್ರವಲ್ಲ ಚರ್ಚ್‌ಗಳ ಮೇಲೆ ದಾಳಿ ಅಲ್ಪಸಂಖ್ಯಾತ, ಬದುಕುವ ಹಕ್ಕಿಗೆ ಧಕ್ಕೆ ತಂದಿದೆ. ಸರಕಾರವೇ ಭಜರಂಗದಳದ ಬೆನ್ನಿಗೆ ನಿಂತು ಧಾಳಿಯನ್ನು ಸಮರ್ಥಿಸಿಕೊಳ್ಳುತ್ತಿದೆ. ಅಂದಿನ ನಿಜಾಮಶಾಹಿಗೂ ಅದಕ್ಕೂ ಮುನ್ನದ ಬ್ರಿಟಿಷ್ ಸಾಮ್ರಾಜ್ಯಶಾಹಿಗೂ ಮತ್ತು ಇಂದಿನ ಬಿಜೆಪಿಯ ನೀತಿಗೂ ಏನಾದರೂ ವ್ಯತ್ಯಾಸವಿದೆಯೇ? ಜನರ ಬದುಕನ್ನು ಅಶಾಂತಗೊಳಿಸಿ, ಸಂಕಟಕ್ಕೀಡು ಮಾಡಿ, ಜನರನ್ನು ಕಚ್ಚಾಟಕ್ಕಿಳಿಸಿ ತಮ್ಮ ಸರ್ವಾಧಿಕಾರ ಮೆರೆದಿದೆ. ವಿಷ ಮತ್ತು ದ್ವೇಷದ ಸಂಸತಿ ಬೆಳೆಸಲಾಗುತ್ತಿದೆ.


ಯಾವತ್ತೂ ಹಾರಿದೆ ಮಾನವೀಯತೆಯ ಬಾವುಟ

ಆದರೆ 'ಜನತೆ' ಮಾತ್ರ ಯಾವತ್ತೂ ಮಾನವೀಯತೆಯ ಬಾವುಟವನ್ನು ಹಾರಾಡಿಸಿದ್ದಾರೆ. ಜಾತಿ-ಮತ- ಅಂತಸ್ತಿನಾಚೆಗೆ ಮನುಜಮತದ ಹಿರಿಮೆ-ಗರಿಮೆ ಮೆರೆದಿದ್ದಾರೆ. ಸ್ನೇಹ-ಪ್ರೇಮದ ಶಕ್ತಿ-ಸಾಮರ್ಥ್ಯವನ್ನು ಮತ್ತೆ ಮತ್ತೆ ಋಜುಗೊಳಿಸಿ ಪ್ರತಿಷ್ಠಾಪಿಸಿದ್ದಾರೆ.... ರಜಾಕಾರ ಧಾಳಿಯ ಮತ್ತು ಆನಂತರದ ಹಿಂದೂಗಳು ಮುಸ್ಲಿಂ ಮೇಲಿನ ಧಾಳಿಯ ಸಂದರ್ಭದ ವಿವರಗಳಿಗಾಗಿ ಅನೇಕ ಹಿರಿಯರನ್ನು ಮಾತಾಡಿದ್ದಾಗ ತಿಳಿದು ಬಂದಿದ್ದೇನು ಗೊತ್ತೇ? ಪ್ರಭುತ್ವ ಕುರ್ಚಿಗಾಗಿ ಕುಟಿಲತೆ ಮಾಡಿ ಜನರನ್ನು ಹೊಡೆದಾಟಕ್ಕಿಳಿಸಿದಾಗ ಸಾಮಾನ್ಯ ಜನತೆ ಪರಸ್ಪರ ನೆರವು ಹಂಚಿಕೊಂಡು ಸೌಹಾರ್ದತೆಯ ಅಂತರಶಕ್ತಿಯನ್ನು ವೃದ್ಧಿಸಿಕೊಂಡು ಮನುಷ್ಯತ್ವವನ್ನು ಬಾಳಿ ಬೆಳೆಸಿದ್ದಾರೆ. ಮೌಖಿಕ ಇತಿಹಾಸ ವೆಂಬುದೊಂದು ನೈಜ ಚರಿತ್ರೆಗೆ ದಾಖಲಾತಿಯಾಗಿ ಒದಗಿಬಂದರೆ ಈ ಮಾನಪ್ರೇಮ- ಸಕಲ ಜೀವಾತ್ಮರಿಗೆ ಲೇಸು ಬಯಸುವ ಧೋರಣೆ ಅಜರಾಮರವಾಗಿ ನಮ್ಮ ಮುಂದೆ ಸ್ಪುಟಗೊಳ್ಳುತ್ತದೆ.

ದಾಳಿ ಸುರುವಾದಾಗ...

ಮೆಹೆರಾಜ ಹೇಳುತ್ತಿದ್ದ "ರಜಕಾರ ಧಾಳಿ ಸುರುವಾದಾಗ ತಮ್ಮ ಹಳ್ಳಿಯಲ್ಲಿಯೂ ಬಸ್ಸಪ್ಪನಂಥವರ ಕುಟುಂಬಗಳು ಭಯದ ನೆರಳಲ್ಲಿ ಬದುಕುತ್ತಿದ್ದವು. ಅದೊಂದು ದಿನ ಊರಲ್ಲಿ ರಜಾಕಾರರ ಪೋಕರಿ ಗುಂಪೊಂದು ಲೂಟಿಗಿಳಿಯಿತು. ಮೆಹೆರಾಜರ ತಾತ, ದೊಣ್ಣೆ ಹಿಡಿದು ಊರಿನ ರಸ್ತೆಯುದ್ದಕ್ಕೂ ಪ್ರಭಾತ ಫೇರಿ ಹೊರಟ. ಉದ್ದಕ್ಕೂ ಬಿಟ್ಟ ಗಡ್ಡ ನೀವಿಕೊಳ್ಳುತ, ತನ್ನ ಅಜಾನುಬಾಹುಗಳನ್ನು ಬೀಸುತ "ಕತೇ ಮುಸಲ್ಮಾನರಿಬ್ಬರ ಬರ್ರಿ ಮಕ್ಕಳೇ ಅಲ್ಲಾಹು ಎಲ್ಲರಿಗೂ ಪ್ರೀತಿಸಬೇಕು ಅಂದಾನ. ನಮಗ ಲೂಟಿ ಮಾಡಲಾಕ ಖರೇ ಇಸ್ಲಾಂ ಪರವಾನಿಗೆ ಕೊಡಾದಿಲ್ಲ. ಧರ್ಮದ ಹೆಸರ ಹೇಳಿ ಲೂಟಿ ಮಾಡವ್ರು ನೀವು ಮುಸಲ್ಮಾನರೇ ಅಲ್ಲ. ನೀವೆಲ್ಲ ದಗಾಖೋರ-ಲೂಟಿಕೋರ ಬದ್ಮಾಶರು. ತಾಖತ್ತಿದ್ದರ ನನ್ನ ಮುಂದ ಬರ್ರಿ...." ಎಂದು ಸವಾಲು ಹಾಕಿ ಗುಡಿಗಿದ. ಮಹ್ಮದಸಾಬ್‌ನ ಎದುರು ಬರುವ ಧೈರ್ಯ ಯಾರಿಗೂ ಬರಲಿಲ್ಲ "ಕಲ್ಲಪ್ಪಣ್ಣ ಈರಭದ್ರ ಕಾಕಾ ನೀವು ಯಾರಿಗೂ ಅಂಜಬೇಕಾಗಿಲ್ಲ... ನಾವಿಲ್ಲೇನು?" ಅಂತ ಹಿಂದೂಗಳ ಮನೆ - ಮನೆಗೆ ಹೋಗಿ ಧೈರ್ಯ ತುಂಬುವಾಗ ಕಣ್ಣಂಚಲ್ಲಿ ಪ್ರೀತಿಯ ಹನಿ ತುಂಬಿಕೊಂಡು ಅನೇಕ ಮುಸ್ಲಿಂ ಯಜಮಾನರು ದನಿಗೂಡಿಸಿದರು. ಹೀಗೆ ರಜಾಕಾರ ಧಾಳಿಯ ಸಂದರ್ಭದಲ್ಲಿ ತಮ್ಮ ಮಾನ ಪ್ರಾಣ ಉಳಿಸಿದ ಮುಸಲ್ಮಾನ್ರ ಕುಟುಂಬಗಳನ್ನು ಆನಂತರ ನಡೆದ ಹಿಂದೂ ಮೂಲಭೂತವಾದಿಗಳ ಧಾಳಿಯಿಂದ ಉಳಿಸಿ ರಕ್ಷಿಸುವ ಹೊಣೆ ಹೊತ್ತರು. ಅನೇಕ ಹಿಂದೂ ಕುಟುಂಬಗಳು ಅವರ ಮನೆಯಲ್ಲಿ ಇವರು. ಇವರ ಮನೆಯಲ್ಲಿ ಅವರು ತಿಂಗಳಾನುಗಟ್ಟಲೆ ಕೂಡಿ ಬಾಳಿದರು. ಜೀವ ಪ್ರೇಮದ ಸಂಸತಿಯೊಂದೇ ಅಲ್ಲಿ ಎಲ್ಲರನ್ನೂ ರಕ್ಷಿಸಿತು.

ಧಾಳಿಗೆ ಹೆದರಿ ಮಹ್ಮದ್ ಪಾಶಾ ಊರು ಬಿಟ್ಟು ಓಡಿಹೋದ. ಹೊಸ ಮದುಮಗಳು ಬಾನು ಬೀ, ವಯಸ್ಸಾದ ಅತ್ತೆ-ಮಾವ ಎಲ್ಲಿಗೆ ಹೋಗಬೇಕು? ಮಲ್ಲಿಕಾರ್ಜುನ ತನ್ನ ಹೆಂಡತಿಯನ್ನು ಕಳಿಸಿ ಬಾನುಬೀ ಕುಟುಂಬವನ್ನು ಕರೆಸಿದ. "ತಂಗಿ, ನಿಮ್ಮ ನಮ್ಮ ಮನೆತನ ಭಾಳ ವರ್ಷದಿಂದ ಕೂಡಿ ನಡದಿವಿ. ಕಷ್ಟ-ಸುಖ ಹಂಚಕೊಂಡಿವಿ. ನೀ ಅಂಜಬ್ಯಾಡ. ನನಗ ತಂಗಿಯಾಗಿದ್ರ ಈ ಮನ್ಯಾಗ ಇರ್ತಿದ್ದಿ ಹೌದಿಲ್ಲ....? ಈಗನೂ ಹಂಗೇ ಏನೋ ಕೇಡಗಾಲ ಬಂದದ. ಎದಿಗುಂದ ಬ್ಯಾಡ. ಇಂಥ ವ್ಯಾಳ್ಯಾದಾಗ ಆಗ್ಲಿಲ್ಲ ಅಂದ್ರೆ ಹ್ಯಾಂಗ? ನೀವು ಮೂರು ಜನ ಇಲ್ಲೇ ಇರ್ರಿ. ಮುಂದ ಎಲ್ಲಾ ಶಾಂತ ಆದ ಮ್ಯಾಲ ನಿಮ್ಮ ಮನಿಗಿ ಹೋಗಾವ್ರೀ...." ಮಲ್ಲಿಕಾರ್ಜುನ ತನ್ನ ಮನೆ ಜನಕ್ಕೆಲ್ಲ ಹೇಳಿ, "ಇವರ ಮನಸಿಗೆ ಧಕ್ಕೆ ಆಗಲಾರದಂಗ ಇಟ್ಕೊವಾ ಜವ್ಮೆದಾರಿ ನಿಮ್ಮದು..." ಎಂದು ಆದೇಶಿಸಿದ. ಬಾನುಬೀ ಮತ್ತು ಅತ್ತೆ-ಮಾವ, ಯಾ ಅಲ್ಲಾ, ನಿಂದೇ ಪ್ರತಿರೂಪ ಈ ಭೂಮಿ ಮ್ಯಾಲ ಸೃಷ್ಟಿ ಮಾಡಿದಿ ಎಂದು ಮುಗಿಲು ಕೈ ಮಾಡಿ ವಂದನೆ ಸಲ್ಲಿಸಿದರು. "ಬೇಟಾ, ನೀನೇ ನಮ್ದು ಅಸಲಿ ಮಗಾ..." ಎಂದು ಗಳಗಳನೆ ಅತ್ತರು. ○



ಸಾಕ್ಷರತೆ ಮತ್ತು ದಲಿತರು

ಅಸ್ಪೃಶ್ಯತೆ-ಜಾತಿ ಆಚರಣೆಯನ್ನು ವ್ಯವಸ್ಥಿತವಾಗಿ ಪೋಷಿಸಿಕೊಂಡು ಬರುತ್ತಿರುವ ನಮ್ಮ ಸಮಾಜವು ಅತ್ಯಂತ ಅಮಾನವೀಯವಾಗಿದೆ. ದೇಶದ ದಲಿತ ಸಮುದಾಯ ಬೇಧ-ಅವಮಾನಗಳಿಂದ ನರಳುತ್ತಿರುವ ಶೋಚನೀಯ ಸ್ಥಿತಿ ಹೆಚ್ಚುತ್ತಿದೆ. ಆಧುನಿಕ ಯುಗದಲ್ಲೂ ಅಸ್ಪೃಶ್ಯತೆಯ ಸ್ವರೂಪ, ಜಾತಿ ಪದ್ಧತಿ ಮತ್ತು ವರ್ಣಾಶ್ರಮ ಧರ್ಮದ ಗರ್ಭಗುಡಿಗಳು ಹುಟ್ಟುತ್ತಲೇ ಇವೆ.

ಶತ ಶತಮಾನಗಳಿಂದಲೂ ಪಕೃತಿ ನೀಡುವ ಬೆಳಕು, ನೀರು, ಗಾಳಿಯನ್ನು ಸಹ ದಲಿತರಿಗೆ ದಕ್ಕಲು ಬಿಡದೆ ಕತ್ತಲೆಯ ಕೂಪಕ್ಕೆ ತಳ್ಳಲಾಗುತ್ತಿದೆ. ಶಿಕ್ಷಣದ ಬೆಳಕನ್ನು ಅಡ್ಡಗಟ್ಟಿ ದಲಿತರನ್ನು ವಂಚಿಸಲಾಗಿದೆ ಎಂಬುದಕ್ಕೆ ದಲಿತರ ಮತ್ತು ದಲಿತೇತರ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಗೊತ್ತಾಗುತ್ತದೆ.

ವಿವರಗಳು	ರಾಜ್ಯದ ಒಟ್ಟು ಸಾಕ್ಷರತೆ	ದಲಿತರ ಸಾಕ್ಷರತೆ	ದಲಿತೇತರ ಸಾಕ್ಷರತೆ	ಸಾಕ್ಷರತೆಯ ಶೇಕಡವಾರು ಅಂತರ
ಸಾಕ್ಷರತೆ ಒಟ್ಟು	ಶೇ.67.04	51.55	71.45	-19.90
ಮಹಿಳೆಯರು	ಶೇ.57.45	40.23	63.39	-23.16
ಪುರುಷರು	ಶೇ.76.29	62.58	80.18	-17.60

ಎಸ್‌ಎಫ್‌ಐ 11ನೇ ರಾಜ್ಯ ಸಮ್ಮೇಳನ

ಕರ್ನಾಟಕ ರಾಜ್ಯದ ವಿದ್ಯಾರ್ಥಿ ಚಳುವಳಿಯ ಪ್ರಧಾನ ಸಂಘಟನೆಯಾದ ಎಸ್ಸೆಫೈನ 11ನೇ ರಾಜ್ಯ ಸಮ್ಮೇಳನ ಚಿಕ್ಕಬಳ್ಳಾಪುರದಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ನಡೆದಿದೆ. ಸಮ್ಮೇಳನದಲ್ಲಿ ನಡೆದ ಚರ್ಚೆಯ ಸಾರವೇನು? ಸಮ್ಮೇಳನದ ಫಲಿತವೇನು? ಒಂದು ವರದಿ - ವಿಜಯಕುಮಾರ್ ದೊಡ್ಮನಿ

'ಶಿಕ್ಷಣದ ವ್ಯಾಪಾರೀಕರಣದಿಂದ ಬೌದ್ಧಿಕ ಸ್ವಾವಲಂಬನೆ ನಾಶ'

ಪ.ಬಂಗಾಳ ಶಿಕ್ಷಣ ಸಚಿವ ಕಾಂ. ಪಾರ್ಥದೇಬ್

ನಮ್ಮ ದೇಶ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನತೆಯ ತ್ಯಾಗ ಬಲಿದಾನಗಳೊಂದಿಗೆ ಹೋರಾಟದ ಪರಂಪರೆ ಉಳ್ಳದೇಶ. ಆದರೆ ಇಂದು ಯಾವ ಶಕ್ತಿಗಳ ವಿರುದ್ಧ 200 ವರ್ಷಗಳ ಕಾಲ ಜಾತಿ-ಮತ-ಪಂಥ ಮರೆತು ಹೋರಾಡಿದೆವೋ ಅದೇ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ನಮ್ಮ ದೇಶದ ಪ್ರಧಾನಿ ಮನಮೋಹನ್‌ಸಿಂಗ್ ರವರು ಅಣು ಒಪ್ಪಂದ ಮೂಲಕ ರತ್ನಗಂಬಳಿ ಹಾಸಿ ಸ್ವಾಗತಿಸುತ್ತಾ ದೇಶವನ್ನು ಸ್ವಾತಂತ್ರ್ಯ ಸಿಕ್ಕ 62 ವರ್ಷಗಳಲ್ಲಿಯೇ ಗುಲಾಮಗಿರಿಗೆ ತಳ್ಳಿದ್ದಾರೆ. ಜನತೆಯ ಅತ್ಯಾವಶ್ಯಕ ಸೇವಾ ವಲಯವನ್ನು ಎಫ್‌ಡಿಐ ಗೆ ತೆರೆಯುವ ಮೂಲಕ ಜನತೆಯನ್ನು ಆಳವಾದ ಸಂಕಷ್ಟದ ಕಂದಕಕ್ಕೆ ನೂಕಲ್ಪಡುತ್ತಿದ್ದಾರೆ ಎಂದು ಪಶ್ಚಿಮ ಬಂಗಳಾದ ಪ್ರಾಥಮಿಕ ಶಿಕ್ಷಣ ಸಚಿವರಾದ ಕಾಂ: ಪಾರ್ಥದೇಬ್ ಎಸ್‌ಎಫ್‌ಐ 11ನೇ ರಾಜ್ಯ ಸಮ್ಮೇಳನದ ಅಂಗವಾಗಿ ಚಿಕ್ಕಬಳ್ಳಾಪುರದಲ್ಲಿ ಆಯೋಜಿಸಿದ ಬಹಿರಂಗಸಭೆ ಉದ್ಘಾಟಿಸುತ್ತಾ ಕಟುವಾಗಿ ಟೀಕಿಸಿದರು.

ಆಳುತ್ತಿರುವ ಸರ್ಕಾರಗಳ ಶಿಕ್ಷಣವನ್ನು ಖಾಸಗಿಯರಿಗೆ ನೀಡಿ ವಾಣಿಜ್ಯೀಕಸುತ್ತಿರುವ ಪರಿಣಾಮವಾಗಿ ದೇಶದ ಶಿಕ್ಷಣವೂ ಜನಸಾಮಾನ್ಯರಿಗೆ ದೊರೆಯದಂತಾಗಿದೆ. ಇದರಿಂದಾಗಿಯೇ, ಆಳುವ ಸರ್ಕಾರದ - ಶಿಕ್ಷಣದಿಂದ ಹಿಂದೆ ಸರಿಯುತ್ತಿರುವ ಹಿನ್ನೆಲೆಯಲ್ಲಿ ದೇಶದ ಉನ್ನತ ಶಿಕ್ಷಣಕ್ಕೆ ಬರುವವರ ಪಾಲು ಕೇವಲ ಶೇ.7 ಮಾತ್ರ. ಇದರಿಂದಾಗಿ ಒಂದು ಕಡೆ ಬೌದ್ಧಿಕ ಸ್ವಾವಲಂಬನೆಗೆ ಹೆಚ್ಚಿಸಿಕೊಳ್ಳಲಾಗದೆ ಪ್ರತಿಭಾ ಪಲಾಯನ ವಾಗುತ್ತಿದೆ ನಾಶವಾಗುತ್ತದೆ ಎಂದರು.

ವೇದಿಕೆಯಲ್ಲಿದ್ದ ಕಾಂ: ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಬಿಜೆಪಿಯು ಶಿಕ್ಷಣವನ್ನು ಮಾರಾಟಕ್ಕೆ ಇಟ್ಟಿದೆಯೇ ಹೊರತು ಜನಕಲ್ಯಾಣಕ್ಕಾಗಿ ಬಳಸುತ್ತಿಲ್ಲ. ತನ್ನ ಕೋಮುವಾದಿ ಹಿಡನ್ ಅಜೆಂಡಾ ತುಂಬಲು, ತುದಿಗಾಲ ಮೇಲೆ ನಿಂತಿದೆ ಎಂದ ಅವರು ಬಿಜೆಪಿಗೆ ತಾಕತಿದ್ದರೆ ಶಿಕ್ಷಣದ ರಾಷ್ಟ್ರೀಕರಣದ ಬಗ್ಗೆ ಮಾತನಾಡಲಿ ಎಂದು ಸವಾಲೆಸದರು. ವೇದಿಕೆಯಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿಯಾಗಿದ್ದ ಕಾಂ: ನವೀನ್ ಕುಮಾರ್, ರಾಜ್ಯ ಉಪಾಧ್ಯಕ್ಷರಾಗಿದ್ದ ಕಾಂ: ವಿಜಯಕುಮಾರ್‌ದೊಡ್ಡಮನಿ, ಎಂ.ಪಿ.ಮುನಿವೆಂಕಟಪ್ಪ, ವಿದ್ಯಾರ್ಥಿನಿಯರ ಉಪಸಮಿತಿ ಮುಖಂಡರಾದ ಈರಮ್ಮ ಔರಾದ್ ಹಾಜರಿದ್ದರು. ಅಧ್ಯಕ್ಷತೆಯನ್ನು ಬಿ.ರಾಜಶೇಖರಮೂರ್ತಿ ವಹಿಸಿದ್ದರು. 3500 ಹೆಚ್ಚು ವಿದ್ಯಾರ್ಥಿಗಳ ಆಕರ್ಷಕ ರ‍್ಯಾಲಿ ನಗರಾದ್ಯಂತ ನಡೆಯಿತು.

ಅಮೇರಿಕಾದ ಜೊತೆ ಮನಮೋಹನ್ ಸಿಂಗ್ ಒಳ ಒಪ್ಪಂದ-ದೇಶಕ್ಕೆ ಮಾರಕ

ಸಮ್ಮೇಳನದ ಅಧಿಕೃತ ಚಾಲನೆಯಾಗಿ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಪ್ರತಿನಿಧಿ ಅಧಿವೇಶನವನ್ನು ಎಸ್‌ಎಫ್‌ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ: ಕೆ.ಕೆ.ರಾಘೇಶ್ ಉದ್ಘಾಟಿಸಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟಿಷರ ಜೊತೆ ಕೆಲ ಶಕ್ತಿಗಳು ಒಳ ಒಪ್ಪಂದ ಮಾಡಿಕೊಂಡು ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆಗೆ ಕಾರಣವಾಗಿ ದೇಶ ಕೊಳ್ಳೆ ಹೊಡೆಯಲು 'ಮೀರಸಾದಕ್'ರು ಕೆಲಸ ಮಾಡಿದಂತೆ ಮನಮೋಹನ್ ಸಿಂಗ್‌ರವರು ಅಮೇರಿಕಾ ಸಾಮ್ರಾಜ್ಯಶಾಹಿ ಜೊತೆ ಒಳ ಒಪ್ಪಂದ ಮಾಡಿಕೊಂಡು ದೇಶವನ್ನು ಆಪತ್ತಿಗೆ ಒಳಪಡಿಸುತ್ತಿದ್ದಾರೆ ಎಂದ ಅವರು ಅಣು ಒಪ್ಪಂದ ಅಪಾಯಗಳನ್ನು ವಿಶ್ಲೇಷಿಸುತ್ತಾ ಈ ನೀತಿ ವಿರುದ್ಧ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪರಂಪರೆ



ಇರುವ ವಿದ್ಯಾರ್ಥಿ ಸಮುದಾಯ ಹೋರಾಟಕ್ಕೆ ಇಳಿಯಬೇಕೆಂದು ಕರೆ ನೀಡಿದರು.

ವಿವಿಧ ಸಮಿತಿ, ಅಧ್ಯಕ್ಷ ಮಂಡಳಿಯೊಂದಿಗೆ ಸಮ್ಮೇಳನಕ್ಕೆ ಚಾಲನೆ ಆರಂಭವಾಗುತ್ತಿದ್ದಂತೆ ಕಾಂ: ವಿಜಯಕುಮಾರ್ ದೊಡ್ಡಮನಿ ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು. ಕರಡು ವರದಿಯನ್ನು ಕಾಂ:ಹೆಚ್.ನವೀನ್ ಕುಮಾರ್ ಮಂಡಿಸಿದರು. ಕರಡು ವರದಿಯ ಮೇಲೆ 5 ಗಂಟೆಗಳ ಕಾಲ 48 ಜನ ಪ್ರತಿನಿಧಿಗಳು ಮಾತನಾಡಿದರು. ಅಲ್ಲದೆ ಘಟಕ ಆಧಾರಿತ ಕಾರ್ಯಾಚರಣೆ, ಸೈದ್ಧಾಂತಿಕ, ಬೌದ್ಧಿಕ ಚಳುವಳಿ ಮತ್ತು ಹೋರಾಟ ಕುರಿತು 2 ಆಯೋಗ ರಚಿಸಿ ಚರ್ಚಿಸಲಾಯಿತು.

ಬಿಳ್ಕೊಡುಗೆ ಸಮಾರೋಪ ಸಮಾರಂಭ:

ಈ ನಡುವೆ ಡಿವೈಎಫ್‌ಐ, ಹಮಾಲಿ ಫೆಡರೇಷನ್, ಸಿಐಟಿಯು, ಜನವಾದಿ ಸೇರಿದಂತೆ ಸಹೋದರ ಸಂಘಟನೆಯಿಂದ ಶುಭಾಶಯ ಕೋರಿದರೆ, ಕೇರಳ, ತಮಿಳುನಾಡು, ಹಿಮಾಚಲಪ್ರದೇಶ ಎಸ್‌ಎಫ್‌ಐ ರಾಜ್ಯ ಸಮಿತಿಯಿಂದ ಶುಭಾಶಯ ಜರುಗಿತು. ಅಂತಿಮವಾಗಿ ಇಲ್ಲಿಯವರೆಗೂ ದುಡಿದು ಬಿಡುಗಡೆಯನ್ನು ಹೊಂದಿದ ಸಂಗಾತಿ ಬಿ.ರಾಜಶೇಖರ ಮೂರ್ತಿ, ವಿಜಯಕುಮಾರ್ ದೊಡ್ಡಮನಿ, ಎಂ.ಪಿ.ಮುನಿವೆಂಕಟಪ್ಪ, ಎಂ.ಎಸ್. ಹಡಪದ, ಮಂಜುನಾಥ್. ಬಿ.ಎನ್. ಲಿಂಗರಾಜ್ ಇತರರನ್ನು ಆತ್ಮೀಯವಾಗಿ ನೆನಪಿನ ಕಾಣಿಕೆ ನೀಡಿ ಬಿಳ್ಕೊಡಲಾಯಿತು. ಬೀಳ್ಕೊಡಿಗೆ ಹೊಂದಿದ ಸಂಗಾತಿಗಳು ಮಾತನಾಡಿ ತಮ್ಮ ಅನುಭವ, ಎಸ್‌ಎಫ್‌ಐ ನೂತನ ರಾಜ್ಯ ಸಮಿತಿ ಮಾಡಬೇಕಾದ ಕೆಲಸ ವಿಶ್ಲೇಷಿಸಿದರು. ಅಂತಿಮವಾಗಿ ಧ್ವಜಾರೋಹಣ ದೊಂದಿಗೆ ಸಮ್ಮೇಳನ ಮುಕ್ತಾಯ ವಾಯಿತು. ಶಾಲಾ ಕಾಲೇಜು ಆಧಾರಿತ ಸಂಘಟನೆ ಹೆಚ್ಚಿನ, ಸೈದ್ಧಾಂತಿಕವಾಗಿ ಸಂಘರ್ಷಾತ್ಮಕವಾಗಿ ಹೋರಾಟ ಬೆಳೆಸುವವದೊಂದಿಗೆ ಸಮ್ಮೇಳನ ಮುಕ್ತಾಯ ಹೊಂದಿತು. ಜನಪ್ರತಿ ಕ್ರಿಯೆ: ಸಮ್ಮೇಳನ ಜರುಗಿದ ಪ್ರದೇಶದಲ್ಲಿ ಜನತೆಯ ಪ್ರತಿಕ್ರಿಯೆ ಅಖಿಲ ಭಾರತ ಸಮ್ಮೇಳನ ಇಲ್ಲಿಯೇ ನಡೆಯಲಿ ಎಂದು ಒಬ್ಬ ಹೋಟೇಲ್ ಕಾರ್ಮಿಕ ಹೇಳಿದರೆ ಬಸ್ ನಿಲ್ದಾಣದಲ್ಲಿ ಒಬ್ಬ ಕ್ಲೀನರ್ ಎಸ್‌ಎಫ್‌ಐ ನ ಶಿಸ್ತಿಗೆ ಹುಮ್ಮಸ್ಸಿಗೆ ನನಗೆ ಖುಷಿಯಾಗಿದೆ ಎಂದರು.

ಮಾಜಿ ರಾಜ್ಯ ಅಧ್ಯಕ್ಷ- ಕಾರ್ಯದರ್ಶಿಗಳ ಸಮಾಗಮ

ಗಂಭೀರ ವರದಿ ಚರ್ಚೆಯ ನಡುವೆ ಹೊಸ ನಾಡ ಕಟ್ಟಲು, ಎಸ್‌ಎಫ್‌ಐನ ಆಶಯು ಈಡೇರಿಸಲು ದುಡಿದ ಎಸ್‌ಎಫ್‌ಐ ಮಾಜಿ ರಾಜ್ಯಾಧ್ಯಕ್ಷ ಕಾರ್ಯದರ್ಶಿಗಳ ಸಮಾಗಮವೂ ದಿನಾಂಕ:14ರ ಸಂಜೆ ಜರುಗುತ್ತಿದ್ದಂತೆ ಎಲ್ಲಾ ಪ್ರತಿನಿಧಿಗಳಿಗೂ ವಿದ್ಯುತ್ ಸಂಚಾರವಾದಂತೆ ಹಳೆಯ ಸಂಘಟನಾ, ಚಳುವಳಿಯ ಅನುಭವದ ಬುತ್ತಿಯಿಂದ ಹೆಕ್ಕಿ ಹೇಳಲು, ಅಳವಡಿಸಿಕೊಳ್ಳಲು ಕಾತುರತೆ ಕಾಣುತ್ತಿತ್ತು. 3 1/2 ತಾಸುಗಳ ಕಾಲ ಜರುಗಿದರೂ ಕೇಳಬೇಕೆನ್ನುವ ಹಂಬಲ ಮಾತ್ರ ಇನ್ನೂ ಆರಿರಲಿಲ್ಲ. ವೇದಿಕೆಯಲ್ಲಿ 1979ರಲ್ಲಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾಗಿದ್ದ ಕಾಂ:ಹಳಕಟ್ಟಿ, ವಿ.ಎನ್. 1987 ರಿಂದ 1994ರವರೆಗೆ ಎಸ್‌ಎಫ್‌ಐ ರಾಜ್ಯ ರಾಜ್ಯಾಧ್ಯಕ್ಷರಾಗಿದ್ದ ಜಿ.ಸಿ.ಬಯ್ಯಾರೆಡ್ಡಿ, ಕಾರ್ಯದರ್ಶಿ ಎಸ್.ವೈ.ಗುರುಶಾಂತ್, 1994ರಿಂದ 1998ರವರೆಗೆ ಕಾರ್ಯದರ್ಶಿ ಕೆಲಸ ಮಾಡಿದ ಪ್ರಕಾಶ್, ಅಧ್ಯಕ್ಷರಾಗಿ ಕೆಲಸ ಮಾಡಿದ ಕೆ.ಎನ್.ಉಮೇಶ್, 10ನೇ ರಾಜ್ಯ ಸಮ್ಮೇಳನದಲ್ಲಿ ಬಿಡುಗಡೆ ಹೊಂದಿದ ಕೆ.ಎಸ್. ಲಕ್ಷ್ಮಿ ಸೇರಿದಂತೆ ಹಲವರು ವೇದಿಕೆ ಮೇಲಿದ್ದರು.

ಎಸ್‌ಎಫ್‌ಐ ಬೆಳೆಯಲಿ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಅಸ್ತ್ರವಾಗಲಿ

ಆರಂಭದಲ್ಲಿ 1975 ರಿಂದ ಎಸ್‌ಎಫ್‌ಐನಲ್ಲಿ ತೊಡಗಿಸಿಕೊಂಡ ವಿ.ಎನ್.ಹಳಕಟ್ಟಿ ಮಾತನಾಡಿ "ನಾನು ಎಸ್‌ಎಫ್‌ಐಗೆ ಆಕರ್ಷಿತನಾಗಿದ್ದು ಸೈದ್ಧಾಂತಿಕವಾಗಿ, ನಾವು ಪದವಿ ಓದುತ್ತಿರುವಾಗ ತತ್ವಶಾಸ್ತ್ರ ವಿದ್ಯಾರ್ಥಿಯಾಗಿ ಮಾರ್ಕ್ಸ್‌ವಾದದ ಕಡೆ ಒಲವುಳ್ಳವಾಗಿದ್ದವು. ಅದಕ್ಕಾಗಿ ಮಾರ್ಕ್ಸ್‌ವಾದದ ಅಧ್ಯಯನ ತಂಡರಚಿಸಿಚರ್ಚಿಸುತ್ತಿದ್ದವು. ಆಗ ದಾಂಡೇಲಿಯಲ್ಲಿ ಪೇಪರ್ ಮಿಲ್ ಕಾರ್ಮಿಕರ ಐತಿಹಾಸಿಕ ಹೋರಾಟ ನಡೆದಿದ್ದಿತು. ಅಲ್ಲಿ ಬೆಂಬಲ ನೀಡಲಿಕ್ಕೆ ಹೋದಾಗ ಎಸ್‌ಎಫ್‌ಐ ಪರಿಚಯದೊಂದಿಗೆ ಹೋರಾಟಕ್ಕೆ ಧುಮುಕಿದವು. ಎಸ್‌ಎಫ್‌ಐ ನಿಂದ ಶುಲ್ಕ ಏರಿಕೆ, ಶಿಕ್ಷಣದ ಹಕ್ಕು ದಮನದ ವಿರುದ್ಧ ಪ್ರಬಲ ಧ್ವನಿ ಎತ್ತಿದ್ದವು. ವಿದ್ಯಾರ್ಥಿ ವಿದ್ಯಾರ್ಥಿನಿಯರ ಐಕ್ಯತೆ ಸಾಧಿಸಿದೆವು. ಎಸ್‌ಎಫ್‌ಐನಿಂದ ಬೆಳೆದು ಬಂದಿದ್ದರಿಂದಲೇ ರೈತರ ನರಗುಂದ ನವಲಗುಂದ ಬಂಡಾಯಕ್ಕೆ ನಾನು ಧುಮುಕಲು ಸಾಧ್ಯವಾಯಿತು" ಎಂದು ಅನುಭವ ಹಂಚಿಕೊಂಡರು. ಎಸ್‌ಎಫ್‌ಐ ಶೀಘ್ರ ಬೆಳೆದು ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಅಸ್ತ್ರವಾಗಲಿ ಎಂದರು.

ಎಸ್‌ಎಫ್‌ಐ ಒಂದು ಆಲದ ಮರ, ವಿಶ್ವವಿದ್ಯಾಲಯ:

ಜನಶಕ್ತಿ ಪತ್ರಿಕೆಯ ಸಂಪಾದಕರಾದ ಕಾಂ: ಎಸ್‌ವೈ.ಗುರುಶಾಂತ್ ಮಾತನಾಡಿ ತಾವು ಕಟ್ಟಾ ಸಂಪ್ರದಾಯ ಶರಣನಾಗಿದ್ದೆ. ಎಸ್‌ಎಫ್‌ಐ ಮಾನವೀಯತೆ ಕಲಿಸಿತು ಎಂದರು. ಹೊಸಪೇಟೆಯ ವಿಜಯನಗರ ಕಾಲೇಜಿನ ಅನುಭವ ವಿರಿಸುತ್ತಾ ಎಸ್‌ಎಫ್‌ಐ ಒಂದು ಆಲದ ಮರದಂತೆ, ವಿಶ್ವವಿದ್ಯಾಲಯದಂತೆ ಇಲ್ಲಿ ಪಳಗಿದವರು ಎಲ್ಲಾ ಕ್ಷೇತ್ರಗಳನ್ನು ಸಾಧನೆ ಗೈಯಬಲ್ಲರು ಎಂದರು. ನಂತರ ಮಾತನಾಡಿದ ಕೆ.ಎನ್. ಉಮೇಶ್ ತಾವು ಎಬಿವಿಪಿಯಲ್ಲಿ ಇದ್ದವನು ಸೈದ್ಧಾಂತಿಕ ಪ್ರಶ್ನೆಗಳಿಗಾಗಿ ಎಸ್‌ಎಫ್‌ಐ ಕಡೆ ಬಂದೆ. ಎಸ್‌ಎಫ್‌ಐ 'ಸರಿದಾರಿ' ಎಂದು ಅರಿತೆ. ಅದರ ಘೋಷಣೆಯಾದ ಸ್ವಾತಂತ್ರ್ಯ ಪ್ರಜಾಪ್ರಭುತ್ವ, ಸಮಾಜವಾದ ಇಂದಿಗೂ ಎಂದಿಗೂ ಪ್ರಸ್ತುತ, ಅದುವೇ ಪರ್ಯಾಯ ಎಂದರು. ಕಾಂ: ಲಕ್ಷ್ಮಿ, ಕಾಂ:ಪ್ರಕಾಶ್ ಅನುಭವ ಹಂಚಿಕೊಳ್ಳುತ್ತಾ ಜಾಗತೀಕರಣದಲ್ಲಿ ವಿದ್ಯಾರ್ಥಿಗಳ ಮನೋಸ್ಥಿತಿ ಅದನ್ನು ಎಸ್‌ಎಫ್‌ಐ ಈಗ ಅರಿತು ಹೇಗೆ ಕೆಲಸ ಮಾಡಬೇಕೆಂದು ಮಾರ್ಮಿಕವಾಗಿ ವಿವರಿಸಿದರು. ಕಾಂ:ಬಯ್ಯಾರೆಡ್ಡಿ ಯವರು ಎಸ್‌ಎಫ್‌ಐ ಗುರಿ ವಿವರಿಸುತ್ತಾ ಭಗತ್‌ಸಿಂಗ್‌ರ ಪರಂಪರೆ, ಚಂದ್ರ ನೆನಪಿಸಿ ಎಲ್ಲರನ್ನೂ ಹುರಿದುಂಬಿಸಿದರು. ಎಸ್ಸೆಫೈ ಮಾಜಿ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ ಸ. 15 ರಂದು ಶುಭಕೋರಿ ಮಾತನಾಡಿ ವಿದ್ಯಾರ್ಥಿ ಸಂಘಟನೆಯು ಕಾರ್ಯಾಚರಣೆಯಲ್ಲಿ ಪ್ರಜಾಪ್ರಭುತ್ವವನ್ನು ಇನ್ನಷ್ಟು ಗಟ್ಟಿಗೊಳಿಸಬೇಕೆಂದು ಸಲಹೆ ನೀಡಿದರು. ನೀಡಿದರು.


ಜನಶಕ್ತಿ ಕನ್ನಡ ವಾರಪತ್ರಿಕೆ

ಸೆಪ್ಟೆಂಬರ್ 28, 2008

ನಿರ್ಣಾಯಕ ಹೋರಾಟದಕ್ಕೆ ಸಂಕಲ್ಪ

ಎಸ್ಎಫ್ಐ 11ನೇ ಸಮ್ಮೇಳನ ಈ ಬಾರಿ ಮೈಲಿಗಲ್ಲನ್ನು ಸ್ಥಾಪಿಸಿದೆ. 2005 ರಲ್ಲಿ 58,000 ದಷ್ಟಿದ್ದ ಸದಸ್ಯತ್ವ 3 ವರ್ಷಗಳಲ್ಲಿ 1,12,000 ವನ್ನು ಮೀರಿ ಸರಿಸುಮಾರು ದ್ವಿಗುಣಗೊಂಡು ಒಂದು ಲಕ್ಷ ಮೀರಿದ್ದಷ್ಟೇ ಅಲ್ಲ. ಮಿಗಿಲಾಗಿ ಕಳೆದ 3 ವರ್ಷಗಳ ನಿರಂತರ ಚಳುವಳಿಯಿಂದ ಆಳುವ ಸರ್ಕಾರದ ಮೇಲೆ ಒತ್ತಡ ಹೇರಿ ಹೊಸ ಸರ್ಕಾರಿ ಶಾಲಾ-ಕಾಲೇಜುಗಳನ್ನು ಸ್ಥಾಪಿಸಲು ಸಾಧ್ಯವಾಗಿದೆ. ಹಾಸ್ಟೆಲ್ ವಿದ್ಯಾರ್ಥಿಗಳ ಊಟದ ಭತ್ಯವನ್ನು ಹೆಚ್ಚಿಸಲು ಸಾಧ್ಯವಾಗಿದೆ. ಎಲ್ಲೆ ಮೀರಿ ಬಸ್‌ಪಾಸ್ ದರ ಏರಿಕೆಯನ್ನು ತಡೆಹಿಡಿಯಲು, ವಾಪಸ್ಸು ಕೊಡಿಸಲು ಸಾಧ್ಯವಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಧನದಾಹ ನೀತಿಯ ವಿರುದ್ಧ ಸಂಘರ್ಷಾತ್ಮಕ ಹೋರಾಟಗಳೂ ನಡೆದಿವೆ. ಇವೆಲ್ಲವುಗಳನ್ನು ನೋಡುವಾಗಲೇ ಇನ್ನಷ್ಟು ಬರ್ಬರವಾಗಿ ಬಡ ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಆಳುವ ಸರ್ಕಾರಗಳು ಜಾರಿಗೆ ತಂದು ಶೇ.80 ಹೆಚ್ಚು ವಿದ್ಯಾರ್ಥಿಗಳು ಗುಣಮಟ್ಟವಲ್ಲದ ಶಿಕ್ಷಣ ಪಡೆಯುವಂತಾಗಿದೆ. ಕೇವಲ ಶ್ರೀಮಂತ ವರ್ಗ ಮಾತ್ರ ಗುಣಮಟ್ಟದ ಶಿಕ್ಷಣ ಪಡೆಯುವಂತೆ ಮಾಡಲಾಗಿದೆ. ರಾಜ್ಯ ಸರ್ಕಾರ ತನ್ನ ಹಿಂದೂ ಮೂಲಭೂತವಾದವನ್ನು ಸಮಾಜದ ಮೇಲೆ ಹೇರಲು ಸಂಸತ ವಿ.ವಿ ಸ್ಥಾಪಿಸಲು ಮತ್ತು ಶಿಕ್ಷಣ ಕೋಮುವಾದಿಕರಿಸಲು ಹೊರಟಿದೆ. ಸರ್ಕಾರಿ ಶಾಲಾ-ಕಾಲೇಜುಗಳನ್ನು ಖಾಸಗೀಕರಿಸ ಲಾಗುತ್ತಿದೆ. ಖಾಸಗೀ ವಿಶ್ವ ವಿದ್ಯಾಲಯಗಳನ್ನು ಯಥೇಚ್ಛವಾಗಿ ತೆರೆದು ಖಾಸಗಿ ಕಂಪನಿಗಳಿಗೆ ಲಾಭ ತರುವಂತಹ ವೃತ್ತಿಪರ ಕೋರ್ಸುಗಳನ್ನು ಪ್ರಾರಂಭಿಸಲಾಗುತ್ತಿದೆ.

ಎಸ್ಎಫ್ಐನ ರಾಜ್ಯಾಧ್ಯಕ್ಷ ಕೆ.ಕೆ.ರಾಘೇಶ್




ಈ ಹಿಂದೆ ಸನಾತನ ಧರ್ಮದಲ್ಲಿ ಕೇವಲ ಮೇಲ್ವರ್ಗದವರಿಗೆ ಶಿಕ್ಷಣ ಮೀಸಲಿದ್ದಂತೆ ಆಧುನಿಕ ಯುಗದಲ್ಲಿ ಶ್ರೀಮಂತರಿಗೆ ಮಾತ್ರ ಶಿಕ್ಷಣ ಎಂಬ ನೀತಿಯನ್ನು ಆಳುವ ಸರ್ಕಾರಗಳು ಜಾರಿಗೆ ತಂದಿವೆ. ಇಂತಹ ಪಟ್ಟಭದ್ರ ಶಕ್ತಿಗಳ ವಿರುದ್ಧ ಬಲಿಷ್ಠ ನಿರ್ಣಯ... ಹೋರಾಟ ರೂಪಿಸುವ ಅಗತ್ಯವನ್ನು ಎಸ್ಎಫ್ಐ ಸಮ್ಮೇಳನ ಮನಗಂಡಿತ್ತು. ಕೋಮುವಾದಿ ಬಿಜೆಪಿಯ ಅಪಾಯಕರ ನೀತಿಗಳ ವಿರುದ್ಧ ಬೃಹತ್ ತಿಳುವಳಿಕೆಯನ್ನು ರೂಪಿಸಲು ಸಂಘಟನೆಯ ಸೈದ್ಧಾಂತಿಕ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವುದು. ಮೂಲಭೂತವಾದಿ ಗಳ ಷಡ್ಯಂತ್ರಗಳನ್ನು ಅರಿಯುವುದು. ಅತ್ಯಂತ ಶೋಷಣೆಗೆ ಒಳಗಾಗುವ ದಲಿತ-ಹಿಂದುಳಿದ-ವಿದ್ಯಾರ್ಥಿನಿಯರ ಮಧ್ಯೆ ಪ್ರಜ್ಞಾಪೂರ್ಣವಾಗಿ ಅವರ ಸಮಸ್ಯೆಗಳ ಪರಿಹಾರಕ್ಕೆ ಮಧ್ಯ ಪ್ರವೇಶಿಸುವುದು ದೇಶದ ಸ್ವಾವಲಂಬನೆ-ಸ್ವಾತಂತ್ರ್ಯ ಉಳಿಸಲು ಖಾಸಗಿ ವಿ.ವಿ. ಗಳನ್ನು ವಿರೋಧಿಸುವುದು ಸೇರಿದಂತೆ ಒಟ್ಟು 30 ನಿರ್ಣಯ ಗಳನ್ನು ಅಂಗೀಕರಿಸಲಾಗಿದೆ.

ಮುಂದಿನ ದಿನಗಳಲ್ಲಿ ಸಂಘಟನೆಯನ್ನು ವಿಸ್ತರಿಸಲು - ಬಲಿಷ್ಠಗೊಳಿಸಲು ಈ ಕೆಳಕಂಡ ವಿಷಯಗಳ ಆಧಾರದಲ್ಲಿ ಸಂಘಟನೆಯನ್ನು ಬಲಪಡಿಸಲು ಸಮ್ಮೇಳನ ಕರೆಕೊಟ್ಟಿದೆ.

1. ಶಿಕ್ಷಣ ಸಂಸ್ಥೆ ಆಧಾರಿತ ಸಂಘಟನೆಗೆ ಒತ್ತು.
2. ದಮನಿತರ ಧ್ವನಿಯಾಗಲು ಕರೆ
3. ವಿದ್ಯಾರ್ಥಿನಿಯರ ನಡುವೆ ಸಂಘಟನೆ ಬಲಪಡಿಸುವುದು.
4. ವಿಶ್ವವಿದ್ಯಾಲಯಗಳಿಗೆ ಆದ್ಯತೆ

ದಮನಿತರಿಗೆ ದನಿ

ದೇವದಾಸಿಯರ ಮಕ್ಕಳು, ಕಡುಬಡತನದಿಂದ ಬೇಸತ್ತು ಬೆಂಡಾಗಿರುವ ವಿದ್ಯಾರ್ಥಿಗಳು ಪ್ರಸಕ್ತ ಶಿಕ್ಷಣವನ್ನು ಪಡೆಯುವ ಹರಸಾಹಸ ಮಾಡುತ್ತಿದ್ದಾರೆ. ದಲಿತ ವಿದ್ಯಾರ್ಥಿಗಳು ಜಾತಿ-ಅಸ್ಪೃಶ್ಯತೆ ಯಿಂದ ನಿಂದನೆಗಳಿಗೆ ಒಳಗಾಗುತ್ತಿದ್ದಾರೆ. ಶಿಕ್ಷಣ ವ್ಯಾಪಾರೀಕರಣ-ಖಾಸಗೀಕರಣದಿಂದ ಸಾಮಾನ್ಯ ಶಿಕ್ಷಣದಿಂದಲೂ ವಂಚಿತರಾಗುತ್ತಿದ್ದಾರೆ. ಇಂತಹ ಧ್ವನಿ ಇಲ್ಲದ ವಿದ್ಯಾರ್ಥಿಗಳಿಗೆ ಎಸ್ಎಫ್ಐ ಧ್ವನಿಯಾಗಬೇಕೆಂಬ ಒಮ್ಮತದ ನಿರ್ಣಯ ಸಮ್ಮೇಳನದಲ್ಲಿ ಅಂಗೀಕಾರವಾಯ್ತು. ದಲಿತ-ಹಿಂದುಳಿದ ಹಾಸ್ಟೆಲ್‌ಗಳ ದುಸ್ಥಿತಿಯ ಬಗ್ಗೆ ಚರ್ಚಿಸಿದ ಸಮ್ಮೇಳನ ಮುಂದಿನ ದಿನಗಳಲ್ಲಿ ದಲಿತ-ಹಿಂದುಳಿದ ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹರಿಸುವ ಮೂಲಕ ಈ ವಿಭಾಗವನ್ನು ಸಂಘಟನೆಯ ಮುಖ್ಯವಾಹಿನಿಗೆ ತರಲು ಸಮ್ಮೇಳನ ಕರೆಕೊಟ್ಟಿತ್ತು.



ಎಸ್ಎಫ್ಐನ ನೂತನ ರಾಜ್ಯಾಧ್ಯಕ್ಷ ನವೀನ್ ಕುಮಾರ್ ಎಚ್.ಆರ್ ಮತ್ತು ನೂತನ ರಾಜ್ಯ ಕಾರ್ಯದರ್ಶಿ ಅನಂತ ನಾಯ್ಕ

ಶಿಕ್ಷಣ ಸಂಸ್ಥೆ ಆಧಾರಿತ ಸಂಘಟನೆಗೆ ಒತ್ತು

ಸಂಘಟನೆಯನ್ನು ಬಲಿಷ್ಠಗೊಳಿಸಲು ವಿಸ್ತರಿಸಲು ಅಖಿಲ ಭಾರತ ಸಂಘಟನಾ ತಿಳುವಳಿಕೆ ಹಾಗೂ ಎಸ್ಎಫ್ಐನ ಸಂಘಟನಾ ವರದಿಯಂತೆ ಮುಂದಿನ ದಿನಗಳಲ್ಲಿ ಆದ್ಯತೆವಾರು 100 ಶಾಲಾ-ಕಾಲೇಜುಗಳನ್ನು ಗುರುತಿಸಿಕೊಳ್ಳುವುದು. ಆದ್ಯತೆಯ ಘಟಕಗಳು ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ ಚಳುವಳಿಯನ್ನು ರೂಪಿಸುವುದು. ನಿರಂತರ ಪ್ರಸಕ್ತ ವಿದ್ಯಮಾನಗಳ ಬಗ್ಗೆ ಅಧ್ಯಯನ ವೃಂದಗಳನ್ನು ನಡೆಸುವುದು. ಸಂಘಟನೆಯ ಅತ್ಯಂತ ಪ್ರಮುಖವಾದ "ಪ್ರಜಾಪ್ರಭುತ್ವದ ವಿಧಾನವನ್ನು ಕಾರ್ಯಗತಗೊಳಿಸುವುದು. ಘಟಕ ಸಮ್ಮೇಳನಗಳನ್ನು ನಡೆಸಿ ವಿದ್ಯಾರ್ಥಿ ಸದಸ್ಯರ ಅಭಿಪ್ರಾಯಗಳನ್ನು ಮನ್ನಿಸಿ ಒಮ್ಮತಾಭಿಪ್ರಾಯ ದಂತೆ ಯೋಜನೆಗಳನ್ನು ರೂಪಿಸುವುದು. ಈ ಘಟಕಗಳ ಬಗ್ಗೆ ಪ್ರತಿ ತಾಲ್ಲೂಕು- ಜಿಲ್ಲಾ-ರಾಜ್ಯ ಸಮಿತಿ ಸಭೆಗಳಲ್ಲಿ ಚರ್ಚಿಸುವುದು. ಘಟಕವನ್ನು ಕ್ರಿಯಾಶೀಲಗೊಳಿಸಲು ಯೋಜಿತ ಕಾರ್ಯಕ್ರಮಗಳನ್ನು ರೂಪಿಸುವುದು.

ವಿಶ್ವ ವಿದ್ಯಾಲಯಗಳಿಗೆ ಆದ್ಯತೆ

ಒಂದು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸುವ ವಿಶ್ವ ವಿದ್ಯಾಲಯಗಳು ವಿಚಿದ್ರಕಾರಿ ಕೋಮುವಾದಿ, ನಕ್ಸಲ್‌ವಾದಿ, ಜಾತಿವಾದಿಗಳ ತಾಣಗಳಾಗುತ್ತಿವೆ.



ಬಹಿರಂಗಸಭೆಯ ಒಂದು ನೋಟ


ಭ್ರಷ್ಟಾಚಾರದಿಂದ ಶೈಕ್ಷಣಿಕ ಮೌಲ್ಯವೇ ಕುಸಿಯುತ್ತಿದೆ. ಶಿಕ್ಷಣ ವ್ಯಾಪಾರೀಕರಣ, ಖಾಸಗೀಕರಣದಿಂದ ವಿ.ವಿ.ಗಳ ಪರಿಕಲ್ಪನೆಯೇ ನಾಶಗೊಳ್ಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ವಿ.ವಿ. ಗಳಲ್ಲಿ ಎಸ್ಎಫ್ಐ ಸಂಘಟನೆಯನ್ನು ಬಲಪಡಿಸ ದಿದ್ದಲ್ಲಿ ಮೂಲಭೂತವಾದಿಗಳ, ಜಾತಿವಾದಿಗಳು ಮೇಲುಗೈ ಸಾಧಿಸುವ ಅಪಾಯವಿದೆ. ಈ ಹಿನ್ನೆಲೆಯೇ ಮುಂದಿನ ದಿನಗಳಲ್ಲಿ ವಿಶ್ವ-ವಿದ್ಯಾಲಯಗಳೂ ಎಸ್ಎಫ್ಐ ಸಂಘಟನೆಯನ್ನು ಬಲಪಡಿಸಲು ಯೋಜಿತ ಚಳುವಳಿ ರೂಪಿಸಲು ತೀರ್ಮಾನಿಸಲಾಗಿದೆ.


ವಿದ್ಯಾರ್ಥಿನಿಯರ ಮಧ್ಯೆ ಸಂಘಟನೆ

ಅತ್ಯಂತ ಕ್ರೂರ ವ್ಯವಸ್ಥೆಯಲ್ಲಿ ನೋವಿನ ಮಡುವಿನಲ್ಲೇ ನೊಂದು ಬೆಳೆಯುವ ವಿದ್ಯಾರ್ಥಿಯರು ಅನೇಕ ಅಮಾನವೀಯ ಕೃತ್ಯಗಳಿಗೆ ತುತ್ತಾಗುತ್ತಿದ್ದಾರೆ. ಅಪ್ರಾಪ್ತ ಬಾಲಕಿಯರ ಮೇಲೆ ಶಿಕ್ಷಕರೇ ಅತ್ಯಾಚಾರ ಮುಂತಾದ ದೌರ್ಜನ್ಯ ಎಸಗುವ ಪರಿಸ್ಥಿತಿ ಉಂಟಾಗಿದೆ. ಮನುಷ್ಯಳಾದರೂ ಯಂತ್ರದಂತೆ ಮಹಿಳೆಯರನ್ನು ಬಳಸಿಕೊಂಡು ಬಿಸಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಸ್ವಾತಂತ್ರ್ಯ-ಸ್ವಾಭಿಮಾನ ಮಹಿಳೆಯರಿಗೆ ದೂರದ ಮಾತಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಂತೂ ಪದವಿ ಶಿಕ್ಷಣ ಪಡೆಯುವ ಹಂತ ತಲುಪುವವರು 100 ಕ್ಕೆ ಒಬ್ಬರು ಅಥವಾ ಇಬ್ಬರು ಎಂಬುದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಇಂತಹ ಅಮಾನವೀಯ ಶೋಷಣೆಗೆ ಒಳಗಾಗಿರುವ ವಿದ್ಯಾರ್ಥಿನಿಯರನ್ನು ಈ ಅಸಮಾನ ವ್ಯವಸ್ಥೆಯ ವಿರುದ್ಧ ಸಂಘಟಿಸುವುದು ಮುಖ್ಯವಾಗಿದೆ. ಹೀಗಾಗಿ ವಿದ್ಯಾರ್ಥಿನಿಯರನ್ನು ಸಂಘಟಿಸಲು ಹೆಚ್ಚಿನ ಮುತುವರ್ಜಿ ವಹಿಸುವುದು. ತಾಲ್ಲೂಕು, ಜಿಲ್ಲಾ, ರಾಜ್ಯಮಟ್ಟದ ಉಪಸಮಿತಿಗಳನ್ನು ರಚಿಸಿ ನಿರಂತರ ಕಾರ್ಯ ಚಟುವಟಿಕೆಗಳಲ್ಲಿ ಇರುವಂತೆ ನೋಡಿಕೊಳ್ಳುವುದು.

ಒಟ್ಟಾರೆ 350ಕ್ಕಿಂತ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡು 5 ಗಂಟೆಗಿಂತ ಹೆಚ್ಚು ಕಾಲ ಪ್ರಸಕ್ತ ಎಲ್ಲಾ ಕ್ಷೇತ್ರಗಳ ವಿದ್ಯಮಾನಗಳ ಬಗ್ಗೆ ಚರ್ಚಿಸಿದ್ದಾರೆ. ಆಳುವ ಸರ್ಕಾರಗಳ ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ-ಭೂಮಾಲಿಕ ಪಾಳೇಗಾರಿ ನೀತಿಗಳಿಂದಾಗುತ್ತಿರುವ ಶೋಷಣೆಯ ಸ್ವರೂಪಗಳು ಪ್ರತಿನಿಧಿಗಳ ಚರ್ಚೆಯಲ್ಲಿ ಅನುಭವದ ಮಾತುಗಳಾಗಿದ್ದವು. ಅಸಮಾನ ಶಿಕ್ಷಣ ವ್ಯವಸ್ಥೆಯ ವಿರುದ್ಧ ವಿಶಾಲ ವಿದ್ಯಾರ್ಥಿ ಸಮುದಾಯವನ್ನು ಎಸ್ಎಫ್ಐನ ಸಂಘಟನೆಯೊಳಗೆ ಅಣಿನೆರೆಸಲು ಯೋಜಿತ ಕಾರ್ಯಯೋಜನೆ ಯಡಿಯಲ್ಲಿ ಕಾರ್ಯ ನಿರ್ವಹಿಸ ಬೇಕು. ಆದ್ದರಿಂದ ಘಟಕ ಆಧಾರಿತ ಶಿಕ್ಷಣ ಸಂಸ್ಥೆ ಸಂಘಟನೆಯನ್ನು ಕಟ್ಟುವುದು. ಅತ್ಯಂತ ಶೋಷಣೆಗೊಳಗಾದ ಸಮುದಾಯವಾದ ದಲಿತ-ಹಿಂದುಳಿದ ವಿದ್ಯಾರ್ಥಿನಿಯರ ಹಾಗೂ ವಿಶ್ವವಿದ್ಯಾಲಯಗಳ ಮಧ್ಯೆ ಸಂಘಟನೆಯನ್ನು ಬಲಿಷ್ಠಗೊಳಿಸಲು ವಿಸ್ತರಿಸಲು ಸಮ್ಮೇಳನ ನಿರ್ಧರಿಸಿತು.

ಶುಭ ಕೋರಿದವರು ಜಿ.ವಿ.ಶ್ರೀರಾಮರೆಡ್ಡಿ, ಕಾಂ. ವಿ.ಜೆ.ಕೆ. ನಾಯರ್.





○ ಬಿ. ರಾಜಶೇಖರಮೂರ್ತಿ

'ಬಂಡವಾಳಶಾಹಿ ವ್ಯವಸ್ಥೆಯೇ ಅಂತಿಮ ಇದಕ್ಕೆ ಪರ್ಯಾಯವಿಲ್ಲ' ಎಂಬ ನವ - ಉದಾರವಾದದ (Neo-liberalism) ಹರಿಕಾರರಿಗೆ ಇತ್ತೀಚೆಗೆ ಅಮೆರಿಕಾದ ಅತಿದೊಡ್ಡ ದೈತ್ಯ ಹಣಕಾಸು - ಬ್ಯಾಂಕ್‌ಗಳಾದ ಲೆಹ್ಮನ್ ಬ್ರದರ್ಸ್ - ಮರ್‍ರಿಲ್ ಲಿಂಚ್ ಹಾಗೂ ಅಮೆರಿಕನ್ ಇಂಟರ್ ನ್ಯಾಶನಲ್ ಗ್ರೂಪ್ (AIG) - ದಿವಾಳಿ ಎದ್ದಿರುವುದು ತೀವ್ರ ಮುಖಭಂಗ ಉಂಟು ಮಾಡಿದೆ. ಇದರ ಕುರಿತಂತೆ ಸುದೀರ್ಘವಾಗಿ ಅವಲೋಕಿಸಿರುವ ಈ ವಿಶೇಷ ಲೇಖನ ಜನಶಕ್ತಿ ಓದುಗರಿಗಾಗಿ ಪ್ರಕಟಿಸಿದ್ದೇವೆ.

ಅಮೆರಿಕಾ ಹಣಕಾಸು ಮಾರುಕಟ್ಟೆ ದಿವಾಳಿ ಅಂಚಿನಲ್ಲಿ

ಎಸ್.ನಾಗರಾಜ್

ಜಾಗತೀಕರಣ ನೀತಿಯ ಸೃಷ್ಟಿಕರ್ತ ಹಾಗೂ ಜಗತ್ತಿನ ದೊಡ್ಡಣ್ಣನೆಂದುಕೊಂಡು ತನ್ನ ರಾಜಕೀಯ ಯಜಮಾನಿಕೆಯ ಪ್ರಭಾವ ಬೀರುವ ನಿಟ್ಟಿನಲ್ಲಿ ಸದಾ ಇತರ ದೇಶಗಳಿಗೆ ಬುದ್ದಿ ಹೇಳುವ ಅಮೆರಿಕ ದೇಶದ ಹಣಕಾಸು ಮಾರುಕಟ್ಟೆಯು ದಿವಾಳಿಯಾಗಿ, ಆ ದೇಶದ ಅರ್ಥ ವ್ಯವಸ್ಥೆಯು ಅವನತಿ ಅಂಚಿಗೆ ತಲುಪಿದೆ. ಅಷ್ಟೇ ಅಲ್ಲದೆ ಅದು ಇಂದೋ-ನಾಳೆಯೋ ಕುಸಿದು ಬೀಳುವುದರಲ್ಲಿ ಸಂಶಯವೇ ಇಲ್ಲ ಎಂಬಂತಾಗಿದೆ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಪುಷ್ಟಿಕರ್ತರಿಗೆ ಈ ಬಿಕ್ಕಟ್ಟಿನಿಂದ ಮುಖಭಂಗವಾಗಿದೆ.

ನವ ಉದಾರವಾದ (Neo liberalism) ನೀತಿಯ ಧ್ಯೋತಕ ಪರಿಣಾಮದ ಫಲವಾಗಿ ಕಳೆದ ಹಲವು ವರ್ಷಗಳಿಂದ ಹಲವು ಪ್ರಮುಖ ಹಣಕಾಸು ಸಂಸ್ಥೆಗಳು ಹಾಗೂ ಬ್ಯಾಂಕ್‌ಗಳು ದಿವಾಳಿ ಎದ್ದು ಸರ್ವನಾಶ ಹೊಂದುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಹಲವಾರು ಪ್ರತಿಷ್ಠಿತ ಹಣಕಾಸು ಸಂಸ್ಥೆಗಳನ್ನು ಮೇಲೆತ್ತಲು 'ಅಮೆರಿಕಾದ ಸೆಂಟ್ರಲ್ ಬ್ಯಾಂಕ್ (Federal Reserve) - ಬಿಲಿಯನ್ ಡಾಲರ್‌ಗಳನ್ನು ವಿನಿಯೋಗಿಸಿ ಅವುಗಳನ್ನು ಖರೀದಿಸಿ ಮೇಲೆತ್ತಲು ಪ್ರಯತ್ನ ಪಡುತ್ತಿದೆ.

ಕಳೆದ ವಾರವಷ್ಟೇ ವಿಶ್ವದ ಅತಿ ದೊಡ್ಡ ಬಂಡವಾಳ ಹೂಡಿಕೆ ಬ್ಯಾಂಕ್ ಲೆಹ್ಮನ್ ಬ್ರದರ್ಸ್ (Leman Brothers) ಹೋಲ್ಡಿಂಗ್ಸ್ ದಿವಾಳಿ ಎದ್ದಿರುವುದು ಮತ್ತು ಇದರ ವಿರುದ್ದ ರಕ್ಷಣೆ ಪಡೆಯಲು ಕಾನೂನು ಮೊರೆ ಹೋಗಿದೆ. ಅದೇ ರೀತಿ ವಿಶ್ವದ ಅತಿ ದೊಡ್ಡ ವಿಮಾ ಸಂಸ್ಥೆಯೆಂದು ಬಂಡಾಯ ಕಾಚ್ಚಿಕೊಳ್ಳುತ್ತಿದ್ದ ಅಮೆರಿಕನ್ ಇಂಟರ್‌ನ್ಯಾಷನಲ್ ಗ್ರೂಪ್ (AIG), ಅಮೆರಿಕಾದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ನಿಂದ 85 ಶತ ಕೋಟಿ ಡಾಲರ್ (ಅಂದರೆ 1,90,000 ಕೋಟಿ) ಕೋರಿಕೆಯ ನೆರವಿನಿಂದ ಸದ್ಯಕ್ಕೆ ದಿವಾಳಿಯಿಂದ ಬಚಾವ್ ಆಗಿದ್ದರೂ, ಅಪಾಯದ ಕತ್ತಿ ಅದರ ತಲೆಯ ಮೇಲೆ ತೂಗುತ್ತಿದೆ. 6 ತಿಂಗಳ ಹಿಂದೆ ಮತ್ತೊಂದು ಪ್ರತಿಷ್ಠಿತ ಹಣಕಾಸು ಸಂಸ್ಥೆಯಾದ ಮೆರ್‍ರಿಲ್ ಲಿಂಚ್(Merrill Lynch), ಅನ್ನು ಬ್ಯಾಂಕ್ ಆಫ್ ಅಮೆರಿಕ 50 ಬಿಲಿಯನ್ ಡಾಲರ್‌ಗೆ ವಹಿಸಿಕೊಂಡಿದೆ. ಮೆರ್‍ರಿಲ್ ಲಿಂಚ್‌ನ ಜಾಗತಿಕ ಮೌಲ್ಯ 2.5 ಟ್ರಿಲಿಯನ್ ಡಾಲರ್, ಇದು ಭಾರತದಲ್ಲಿ 1984 ರಿಂದ ವ್ಯವಹಾರ ನಡೆಸುತ್ತಿದ್ದು, ರೂ. 47,095 ಕೋಟಿ ಆಸ್ತಿ ಹೊಂದಿದೆ. ಇದರ 6 ಕಛೇರಿಗಳಲ್ಲಿ 600 ನೌಕರರು ದುಡಿಯುತ್ತಿದ್ದು, ಇವರ ಉದ್ಯೋಗಕ್ಕೆ ಕುತ್ತು ಬಂದೊದಗಿದೆ. ಇದಕ್ಕೂ ಮುನ್ನ ಬಿಯರ್ ಸ್ಟೀಯರನ್ಸ್(Bear Streans), ಫೆನ್ನಿಯಿ ಮ್ಯಾಯಿ(Fannie Mae), ಮತ್ತು ಫ್ರೆಡ್ಡಿ ಮ್ಯಾಕ್(Fraddie Mac) ಇವೆಲ್ಲಾ ಅಮೆರಿಕದಲ್ಲಿ ಕಳೆದ ಒಂದು ವರ್ಷದಿಂದೀಚೆಗೆ ದಿವಾಳಿ ಎದ್ದ ಪ್ರಮುಖ ಹಣಕಾಸು ಸಂಸ್ಥೆಗಳು ಅಮೆರಿಕಾದ Federal Reserve Bank ದೊಡ್ಡ ಪ್ರಮಾಣದಲ್ಲಿ ನೆರವು ನೀಡಿ ಇವುಗಳನ್ನೆಲ್ಲ ಖರೀದಿಸಿದೆ. ಹಾಗೆಯೇ ವಾಚೋವಿಯಾ(Wacohvia) ಅಮೆರಿಕಾದ ನಾಲ್ಕನೇ ಅತಿ ದೊಡ್ಡ ಬ್ಯಾಂಕ್ 8.86 ಬಿಲಿಯನ್ ಡಾಲರ್ ನಷ್ಟ ಅನುಭವಿಸಿದೆ. ಪ್ರಸಕ್ತ 2008ರಲ್ಲೆ ಇಲ್ಲಿಯುವರೆಗೂ ಅಮೆರಿಕಾದ 9 ಬ್ಯಾಂಕ್‌ಗಳು ನಷ್ಟ ಅನುಭವಿಸಿದೆ. ಕೇವಲ ಬ್ಯಾಂಕ್‌ಗಳಲ್ಲದೆ ಇಡೀ ಹಣಕಾಸು ವಲಯವೇ ಬಿಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿದೆ. ಎಡ್ಜ್ ಫಂಡ್ ವಿಮಾ ಸಂಸ್ಥೆಗಳು, ಆಸ್ತಿ ಪ್ರಬಂಧಕರು ಹಾಗೂ ಖಾಸಗೀ ಬಂಡವಾಳ ಸಂಸ್ಥೆಗಳು-ತೀವ್ರ ತರದ ಬಿಕ್ಕಟ್ಟು ಎದುರಿಸುತ್ತಿದ್ದು, ಅಪಾಯದ ಅಂಚಿನಲ್ಲಿವೆ.

ಸ್ಟ್ಯಾಂಡರ್ಡ್ ಮತ್ತು ಪೂರ್ (Standard Poor)ನ ಸಮೀಕ್ಷೆಯ ಒಂದು ಅಂದಾಜಿನಂತೆ ಅಮೆರಿಕಾದಲ್ಲಿನ ಹಣಕಾಸು ಸಂಸ್ಥೆಗಳು ಒಟ್ಟು 385 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಹಣವನ್ನು ಸಬ್ ಪ್ರೈವ್(Subprime) ಸೆಕ್ಯೂರಿಟಿಗಳಲ್ಲಿ ತೊಡಗಿಸಿಕೊಂಡಿವೆ. ಇಷ್ಟು ಹಣವು ಕೆಟ್ಟ ಸಾಲವಾಗಿ ಪರಿವರ್ತನೆಗೊಂಡಿದೆ. ಅಮೆರಿಕದ ಈ ಹಣಕಾಸು ವಲಯದ ಬಿಕ್ಕಟ್ಟಿನ ಕ್ಲಿಷ್ಟತೆ ಯೂರೋಪ್ ಮತ್ತಿತರ ಹಣಕಾಸು ಕೈಗಾರಿಕೆಗಳಿಗೂ ನಾಯಿಕೊಡೆಯಂತೆ ಹಬ್ಬಿದೆ. ಬ್ರಿಟನ್ ಸರ್ಕಾರ ಅದರ ಅತಿ ದೊಡ್ಡ ಹಾಗೂ ಪ್ರತಿಷ್ಠಿತ ಬ್ಯಾಂಕ್-ನಾರ್ಥರ್ನ್‌ರಾಕ್ (Northern Rock)ಅನ್ನು ವಹಿಸಿಕೊಂಡಿದೆ.


ಲೆಹ್ಮನ್ ಬ್ರದರ್ಸ್ ದಿವಾಳಿ ಸುದ್ದಿ - ಹಾಂಕಾಂಗ್ ಶೇರು ದಲ್ಲಾಳಿಯನ್ನು ಆತಂಕಕ್ಕೆ ಒಳಪಡಿಸಿದೆ

ಜರ್ಮನಿಯಲ್ಲಿಯೂ ಖರೀದಿಸುವುದು ನೆರವು ನೀಡಿ ದಿವಾಳಿ-ತಪ್ಪಿಸುವುದು ನಡೆದಿರುವ ಸಾಕಷ್ಟು ಉದಾಹರಣೆಗಳಿವೆ. 2007ರ ಕೊನೆಯಲ್ಲಿ ಅಮೆರಿಕಾದ ಆರ್ಥಿಕತೆಯ ಕೇವಲ ಶೇ.0.6ರ ದರದಲ್ಲಿ ಪ್ರಗತಿ ಸಾಧಿಸಿದೆ. ಈ ಪ್ರಗತಿಯೂ ರಪ್ತಿನಲ್ಲಾದ ಹೆಚ್ಚಳದಿಂದಾಗಿಯೇ ವಿನ: ದೇಶದೊಳಗಿನ ಬೇಡಿಕೆಯಿಂದಲ್ಲ ಎನ್ನುವುದು ಗಮನಾರ್ಹ. ಉದ್ಯೋಗದ ಅಂಕಿ ಅಂಶಗಳ ಪ್ರಕಾರ 2008 ರ ಜನವರಿಯುಲ್ಲಿ 22,000 ಉದ್ಯೋಗಿಗಳು ಕೆಲಸಕಳೆದುಕೊಂಡಿದ್ದಾರೆ. ಫೆಬ್ರವರಿ - ಮಾರ್ಚ್‌ನಲ್ಲಿ 63,000 ನೌಕರರನ್ನು ಹೊರಗಟ್ಟಿದ್ದಾರೆ. ಕಳೆದ 5 ವರ್ಷಗಳಲ್ಲಿ ದಾಖಲೆ ಪ್ರಮಾಣದ ಉದ್ಯೋಗದ ನಷ್ಟವಾಗಿದೆ. ಉದ್ಯೋಗದ ನಷ್ಟವಿದಾಗಿದೆ. ಅಲ್ಲಿನ ನಿರುದ್ಯೋಗಿಗಳ ಸಂಖ್ಯೆ 3,70,000 ದಾಟಿದೆ. ಅಲ್ಲದೆ, ಹೆಚ್ಚು ಹೆಚ್ಚು ಹಣಕಾಸು ಕಂಪನಿಗಳ ದಿವಾಳಿಯಿಂದಾಗಿ ನೌಕರರನ್ನು ತೆಗೆದು ಹಾಕುವ ಪ್ರಕ್ರಿಯೆಗಳು ದಿನನಿತ್ಯ ನಡೆಯುತ್ತಲೇ ಇವೆ. ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ತನ್ನ ಲಾಭದ ರಕ್ಷಣೆಗಾಗಿ ಬಲಿಕೊಡುವುದು ಮೊದಲು ಕಾರ್ಮಿಕರನ್ನು ಎಂಬ ವಾಸ್ತವತೆಯನ್ನು ಇಲ್ಲಿ ಗಮನಿಸಬಹುದು.

ಪ್ರಸ್ತುತ ಕಳೆದ ವಾರದ, ಮೊದಲ ಮೂರು ದಿನಗಳ ಬೆಳವಣಿಗೆಗಳು ಹಣಕಾಸು ಮಾರುಕಟ್ಟೆಯ ಬಿಕ್ಕಟ್ಟನ್ನು "ಸುನಾಮಿಯೆಂದೇ" ಆತಂಕದಿಂದ ವರ್ಣಿಸಲಾಗಿದೆ". 158 ವರ್ಷಕ್ಕೂ ಹಳೆಯದಾದ ದೈತ್ಯ ಹಣಕಾಸು ಸಂಸ್ಥೆ ಲೆಹ್ಮನ್ ಬ್ರದರ್ಸ್ ದಿವಾಳಿಯಿಂದ, ರಕ್ಷಣೆ ಪಡೆಯಲು ಮುಂದಾಗಿರುವುದು ಭಾರತ ಸೇರಿದಂತೆ, ಜಗತ್ತಿನ ಎಲ್ಲೆಡೆ ಅಂದರೆ, ಯೂರೋಪ್, ಏಷ್ಯಾಗಳಲ್ಲಿನ ಶೇರುಪೇಟೆ ತಲ್ಲಣ ಗೊಂಡಿದೆ. ಹೂಡಿಕೆದಾರರಂತೂ ತಮ್ಮ ಹಣದ ಸುಭದ್ರತೆಯ ಬಗ್ಗೆ ಗಾಬರಿ ವ್ಯಕ್ತಪಡಿಸುತ್ತಿದ್ದಾರೆ. ಲೆಹ್ಮನ್ ಬ್ರದರ್ಸ್ ಸುಮಾರು 613 ಶತಕೋಟಿ ಡಾಲರ್‌ನಷ್ಟು (ಸರಿ ಸುಮಾರು ರೂ.28,00,000 ಕೋಟಿಗೂ ಮೀರಿದ್ದು) ಗೃಹ ಮತ್ತು ಗೃಹ ಅಡಮಾನ ಮಾರುಕಟ್ಟೆಯಲ್ಲಿ ಸಾಲ ನೀಡಿದ್ದೇ ದಿವಾಳಿಗೆ ಮೂಲ ಕಾರಣವೆನ್ನಲಾಗಿದೆ. ಭಾರತದಲ್ಲಿ ಲೆಹ್ಮನ್ ಹೂಡಿರುವ ಬಂಡವಾಳದ ಮಾರುಕಟ್ಟೆ ಮೌಲ್ಯ ಅಂದಾಜು ರೂ.40,000 ಕೋಟಿಗಳಷ್ಟು. ಕಳೆದ ಸೋಮವಾರ ಒಂದೇ ದಿನದಲ್ಲಿ ರೂ.2,000 ಕೋಟಿ ಕುಸಿದು, ಮಂಜಿನಂತೆ ಕರಗಿ ಹೋಗಿದೆ, ಮುಂದಿನ ದಿನಗಳಲ್ಲಿ ಈ ಸುನಾಮಿ ಅಲೆಗೆ ಸಿಕ್ಕಿ ಕೊಚ್ಚಿ ಹೋಗುವ ಆತಂಕ ಎಲ್ಲರಲ್ಲೂ ಗೂಡುಕಟ್ಟಿದೆ.

ಅಮೆರಿಕದ ಆರ್ಥಿಕ ಬೆನ್ನೆಲುಬಾದ ಪ್ರತಿಷ್ಠಿತ ಹಣಕಾಸು ಸಂಸ್ಥೆಗಳು ಹಾಗೂ ಬ್ಯಾಂಕ್‌ಗಳ ದಿವಾಳಿಗೆ ಮೂಲ ಕಾರಣ ಅಲ್ಲಿನ ಸಬ್‌ಪ್ರೈಮ್ ಸಾಲ. ಅಂದರೆ ಗೃಹ ಅಡಮಾನ ಸಾಲವೆಂದು ವಿಶ್ಲೇಷಣೆಕಾರರು ಹಾಗೂ ನೋಬೆಲ್ ಪ್ರಶಸ್ತಿ ಪುರಸೃತ ಆರ್ಥಿಕ ತಜ್ಞ ಜೋಸೆಫ್ ಸ್ಟಿಗ್ಲಿಟ್ಜ್‌ರು ಕೂಡ ಪ್ರತಿಪಾದಿಸಿದ್ದಾರೆ.

ಸಬ್‌ಪ್ರೈಮ್ ಸಾಲ ಅಥವಾ ಗೃಹ ಅಡಮಾನ ಸಾಲವನ್ನು (Housing Mortage) ಸರಳವಾಗಿ ಅರ್ಥೈಸುವುದಾದರೆ - ಇತ್ತೀಚೆಗೆ ಹೊರಬಿದ್ದ ಅಧಿಕೃತ ಮಾಹಿತಿಯಂತೆ, ಸಬ್‌ಪ್ರೈಮ್ ಸಾಲ ಕೊಡುವಿಕೆಯಲ್ಲಿ ನಡೆದಿರುವ ಅವ್ಯವಹಾರ, ಮೋಸ ವಂಚನೆಯ ಪ್ರತಿರೂಪವೇ ಅಮೆರಿಕಾದ ಆರ್ಥಿಕತೆಯ ಬಿಕ್ಕಟ್ಟಿನ ಉಲ್ಬಣಕ್ಕೆ ಮೂಲ ಕಾರಣವಾಗಿದೆ. ಇಲ್ಲಿನ ಹಲವಾರು ಹಣಕಾಸು ಕಂಪನಿಗಳು (ಈ ಮೇಲಿನ ಪರಿಚ್ಛೇದಗಳಲ್ಲಿ ಪ್ರಸ್ತಾಪಿಸಿರುವ ಹಲವು ಕಂಪನಿಗಳು ಸೇರಿವೆ, ಪ್ರಮುಖವಾಗಿ ಲೆಹ್ಮನ್ ಬ್ರದರ್ಸ್ ಹಾಗೂ ಮೆರ್‍ರಿ ಲಿಂಚ್ ಕೂಡ ಸೇರಿಕೊಂಡಂತೆ) - ಅರ್ಹತೆ ಇಲ್ಲದವರಿಗೆ ಮತ್ತು ಯಾವುದೇ ಸೂಕ್ತವಾದ ಭದ್ರತೆಗೆ ಒತ್ತಾಯಿಸದೆ ದೊಡ್ಡ ಪ್ರಮಾಣದಲ್ಲಿ ಸಾಲ ನೀಡುತ್ತಲೇ ಹೋದವು. ಪ್ರಮುಖವಾಗಿ ಗೃಹ ಅಡಮಾನ ಸಾಲ (Housing Mortage) ನೀಡುತ್ತಾ ಹೋದವು. ಯಾವುದೇ ಹಣಕಾಸು ಸಂಸ್ಥೆ ಸಾಲ ನೀಡುವಾಗ ಪರಿಶೀಲಿಸಬೇಕಾದ ಪ್ರಮುಖ ಅಂಶವೆಂದರೆ, ಸಾಲ ಪಡೆದಾತನಿಗೆ, ಸಾಲ ಮರು ಪಾವತಿಸುವ ಸಾಮರ್ಥ್ಯವಿದೆಯೇ ಎನ್ನುವುದು ಅಥವಾ ಕ್ವೋಲ್ಯಾಟರಲ್ ಸೆಕ್ಯೂರಿಟಿ (Qualateral Security).

ಆದರೆ, ಲಾಭವನ್ನೆ ತಮ್ಮ ಗುರಿಯೆಂದು ಭಾವಿಸಿರುವ ಈ "ಲಾಭ ಪಿಪಾಸು" ಕಂಪನಿಗಳು ಈ ಕಾಳಜಿ ಮತ್ತು ಎಚ್ಚರಿಕೆಯನ್ನು ನಿರ್ಲಕ್ಷಿಸಿದವು. ಸಾಲ ಪಡೆದುಕೊಂಡವರು ಆ ಹಣವನ್ನು ಉಳಿತಾಯ ಮಾಡಲಿಲ್ಲ. ಅಥವಾ ಯಾವುದೇ ಆಸ್ತಿ ಕೊಳ್ಳುವುದಕ್ಕೆ ಅಥವಾ ಮತ್ತಷ್ಟು ಹೆಚ್ಚಿಸಿಕೊಳ್ಳುವುದಕ್ಕೆ ಬಳಸಿಕೊಳ್ಳಲಿಲ್ಲ. ಬದಲಿಗೆ ತಮ್ಮ ಐಷಾರಾಮಿ ಜೀವನಕ್ಕಾಗಿ ಹೆಚ್ಚಾಗಿ ಬಳಸಿಕೊಂಡರು. ಈ ರೀತಿ ಪದೇ ಪದೇ ಸಾಲ ಮಾಡಿ, ಮುಂದೆ ಮಾಡಿದ ಸಾಲ ತೀರಿಸಲಿಕ್ಕೂ ಆಗದೆ, ಸಾಲದ ಹಾಗೂ ಅದರ ಬಡ್ಡಿಯ ಹೊರೆ ಉಲ್ಬಣಗೊಂಡಾಗ, ತಿಂಗಳ ಕಂತನ್ನು ಮರುಪಾವತಿಸಲಾಗದ ದುಸ್ಥಿತಿಯನ್ನು ಎದುರಿಸುವಂತಾಯಿತು. ಆ ಸಂದರ್ಭದಲ್ಲಿ ಈ ಸಾಲಗಳ ಆಧಾರದ ಮೇಲೆ ಪ್ರಗತಿ ಅಥವಾ ಉತ್ಕರ್ಷತೆಯನ್ನು ಬಿಂಬಿಸಿದ ಕಂಪನಿಗಳು ಮತ್ತು ಬ್ಯಾಂಕ್‌ಗಳು, ಸಾಲ ಮರುಪಾವತಿಯಾಗದೆ ಅದು ಕೆಟ್ಟ ಸಾಲ(Bad debt) ಆಗಿ ಪರಿವರ್ತನೆಗೊಂಡು, ಗಂಭೀರ ಬಿಕ್ಕಟ್ಟನ್ನು, ಕಷ್ಟ ನಷ್ಟವನ್ನು ಎದುರಿಸುವಂತಾಯಿತು. ಮತ್ತೊಂದು ಕಡೆ ಈ ಹಣಕಾಸು ಸಂಸ್ಥೆಗಳಿಂದ ಸಾಲ ತೆಗೆದುಕೊಂಡ, ಹಲವು ಬೃಹತ್ ರಿಯಲ್ ಎಸ್ಟೇಟ್ ಕುಳಗಳು ಕಳೆದ ಎರಡು, ಮೂರು ವರ್ಷಗಳಿಂದೀಚೆಗೆ ಸುಮಾರು 2 ಮಿಲಿಯನ್ ಗೃಹ ನಿರ್ಮಾಣ ಮಾಡಿ, ಸಾಮರ್ಥ್ಯವಿಲ್ಲದವರಿಗೆ ಹಾಗೂ ಮರುಪಾವತಿ ಮಾಡಲು ಸಾಧ್ಯವಿಲ್ಲದವರಿಗೆಲ್ಲಾ ಅತಿ ಹೆಚ್ಚು ಮೌಲ್ಯಕ್ಕೆ ಅಪಾರ ಲಾಭದ ದುರಾಸೆಯಿಂದ ನಿರ್ಮಿಸಿದ ಮನೆಗಳನ್ನು ಮಾರಾಟ ಮಾಡಿದರು. ಮನೆ ತೆಗೆದುಕೊಂಡವರು

ಪುಟ 14 ಕ್ಕೆ

ಅಮೆರಿಕಾ ಹಣಕಾಸು ಮಾರುಕಟ್ಟೆ .....

ಪುಟ 13 ರಿಂದ

ಸಾಲ ತೀರಿಸಲಾಗದೆ ಅದರ ಹೊರೆಯಲ್ಲಿ ನರಕಯಾತನೆ ಅನುಭವಿಸುತ್ತಿದ್ದಾರೆ. ಆದರೆ ಈ ರಿಯಲ್ ಎಸ್ಟೇಟ್ ಕುಳಗಳಿಗೆ ಸಾಲ ಕೊಟ್ಟ ಬ್ಯಾಂಕ್‌ಗಳು ನಷ್ಟ ಹೊಂದಿ ದಿವಾಳಿ ಎದ್ದಿವೆ.

ಒಟ್ಟಿನಲ್ಲಿ ಈ ದಿವಾಳಿ ಎದ್ದಿರುವ ಹಲವು ಅಮೆರಿಕನ್ ಹಣಕಾಸು ಸಂಸ್ಥೆಗಳು ನಮ್ಮ ದೇಶದ ಶೇರು ಮಾರುಕಟ್ಟೆಯಲ್ಲಿ ವ್ಯವಹಾರ ನಡೆಸುತ್ತಿವೆ. ಈ ಕಂಪನಿಗಳಲ್ಲಿ ಲಕ್ಷಾಂತರ ಭಾರತೀಯರು ತಮ್ಮ ಶ್ರಮದ ಕ್ರೋಢೀಕೃತ ಉಳಿತಾಯದ ಹಣವನ್ನು ಲಾಭದ ಆಮೀಷಕ್ಕೆ ಬಲಿಬಿದ್ದು, ಲಕ್ಷಾಂತರ ರೂಪಾಯಿಗಳನ್ನು 'ಈ ಕಂಪನಿಗಳ ಶೇರು'ಗಳಲ್ಲಿ ಹೂಡಿದ್ದಾರೆ. ಆದರೆ, ಈ ಕಂಪನಿಗಳು ಹಣವನ್ನು ಅವ್ಯವಹಾರದ ಸಬ್‌ಪ್ರೈಮ್ ಸಾಲದಲ್ಲಿ ಬಳಸಿಕೊಂಡಿದ್ದನ್ನು ಪ್ರತ್ಯೇಕವಾಗಿ ಇತ್ತೀಚಿನ ಬೆಳವಣಿಗೆಗಳಿಂದ ಅರಿತುಕೊಂಡಿದ್ದಾರೆ. ಅಮೆರಿಕಾದ ಬಹುಸಂಖ್ಯಾತ ಶ್ರೀಮಂತರು ಅನುಭವಿಸುತ್ತಿರುವ ಐಷಾರಾಮಿ ಜೀವನಕ್ಕೆ ನಮ್ಮ ದೇಶಿಯ ಜನರ ಕೊಡುಗೆಯು ಸಾಕಷ್ಟಿದೆ ಎಂದು ಇದರಿಂದ ಗೊತ್ತಾಗುತ್ತದೆ ಹೀಗೆ ಸಾಮ್ರಾಜ್ಯಶಾಹಿ ಅಮೆರಿಕವು ನಮ್ಮಂತಹ ದೇಶಗಳ ಹಣದಿಂದಲೇ ಮೆರೆಯುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೆ.

ಯುರೋಪಿಯನ್ ಒಕ್ಕೂಟ ಮತ್ತು ಜಪಾನಿನ ಬ್ಯಾಂಕ್‌ಗಳು ಮತ್ತು ಹಣಕಾಸು ವ್ಯವಸ್ಥೆ ಅಮೆರಿಕಾದ ಆರ್ಥಿಕತೆಯೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿಕೊಂಡಿರುವುದರಿಂದ ಅಮೆರಿಕಾದ ಈ ಸಬ್‌ಪ್ರೈಮ್ ಬಿಕ್ಕಟ್ಟು ಆ ರಾಷ್ಟ್ರಗಳ ಹಣಕಾಸು ವ್ಯವಸ್ಥೆಯ ಮೇಲೆಯೂ ಗಂಭೀರ ಪರಿಣಾಮ ಬೀರುವುದರಲ್ಲಿ ಸಂಶಯವಿಲ್ಲ. ಇಲ್ಲಿ ಅಮೆರಿಕ ಪ್ರಸ್ತುತ ಆರ್ಥಿಕ ಹಿಂಜರಿತದತ್ತ (Recession) ವೇಗವಾಗಿ ತಲುಪುತ್ತಿದೆ. ಮಾತ್ರವಲ್ಲದೆ, ಆರ್ಥಿಕ ಕುಸಿತಕ್ಕೂ (Depression) ಒಳಗಾಗಲಿದೆಯೆನ್ನುವ ಕಳವಳವನ್ನು ಅಲ್ಲಿನ ಆರ್ಥಿಕ ತಜ್ಞರೇ ವ್ಯಕ್ತಪಡಿಸುತ್ತಿದ್ದಾರೆ. ಅಮೆರಿಕದ ಆರ್ಥಿಕತೆಯ ಬೃಹತ್ ಗಾತ್ರ ಮತ್ತು ವಿಶ್ವದ ವಿವಿಧ ದೇಶಗಳ ಆರ್ಥಿಕತೆ ಅಮೆರಿಕದ ಆರ್ಥಿಕತೆಯೊಂದಿಗೆ ತಳಕು ಹಾಕಿಕೊಂಡಿರುವುದರಿಂದ ಇಡೀ ವಿಶ್ವವೇ ಇದರ ದುಷ್ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂಬ ವಿಚಾರ ಆತಂಕಕ್ಕೆ ಗುರಿ ಮಾಡುತ್ತದೆ.

ಇತ್ತೀಚಿನ ದಿನಗಳಲ್ಲಿ ಯುರೋ ಮತ್ತು ಕೆಲವು ಕರನ್ಸಿಗಳೆದುರು (ಭಾರತದ ರೂಪಾಯಿ ಸೇರಿ) ಅಮೆರಿಕಾದ ಡಾಲರ್ ದುರ್ಬಲಗೊಳ್ಳುತ್ತಿದೆ. ಡಾಲರಿನ ಮೌಲ್ಯದಲ್ಲಿ ಆಗಿರುವ ತೀವ್ರ ಪತನವು ಡಾಲರಿನ ಅಧಿಪತ್ಯದ ಮೇಲೆ ನಿಂತಿರುವ, "ವಿಶ್ವ ಹಣಕೊಸು ವ್ಯವಸ್ಥೆ"ಯ ಮೇಲೆ ಅಸ್ಥಿರತೆಯ ಪರಿಣಾಮಗಳನ್ನು ಬೀರಲಿದೆ. ಡಾಲರಿನ ಮೌಲ್ಯಕ್ಕೆ ಬೆದರಿಕೆ ಬಂದು, ಡಾಲರ್‌ನೊಂದಿಗೆ ತಮ್ಮ ನಾಣ್ಯದ ಮೌಲ್ಯವನ್ನು ಲಗತ್ತಿಸಿಕೊಂಡಿರುವ ಹಲವು ದೇಶಗಳಲ್ಲಿ ಕೂಡ ಅಸ್ಥಿರತೆ ಉಂಟಾಗಬಹುದು. ಜಾಗತಿಕ ಆಮದುಗಳಲ್ಲಿ ಸುಮಾರು ಪ್ರತಿಶತ 20ರಷ್ಟು ಅಮೆರಿಕಾದ ಆರ್ಥಿಕತೆಯ ಮೇಲೆ ಅವಲಂಬಿಸಿರುವುದರಿಂದ ಅಥವಾ ಸಂಪರ್ಕದ ಕೊಂಡಿ ಬೆಸೆದುಕೊಂಡಿರುವುದರಿಂದ, ಪ್ರಸ್ತುತ ಅಮೆರಿಕಾದ ಹಣಕಾಸು ಸಂಸ್ಥೆಗಳ ದಿವಾಳಿ-ಯುರೋಪಿಯನ್ ಒಕ್ಕೂಟ ಹಾಗೂ ಜಪಾನಿನಂತಹ ಮುಂದುವರೆದ ಆರ್ಥಿಕತೆಗಳತ್ತ ಹಾಗೂ ಚೀನಾ ಮತ್ತು ಭಾರತದಂತಹ ಅಭಿವೃದ್ಧಿಶೀಲ ದೇಶಗಳತ್ತ ವ್ಯಾಪಿಸದೆ ಇರಲಾರದು ಎಂದು ಐಎಂಎಫ್ ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಯು ಕೂಡಾ, ಆತಂಕ ವ್ಯಕ್ತಪಡಿಸಿದೆ. ಅಮೆರಿಕಾದಂತಹ ಬೃಹತ್ ಆರ್ಥಿಕತೆಯ ಹೆಚ್ಚುತ್ತಿರುವ ಬೇಡಿಕೆ. ಇತರೆ ದೇಶಗಳ ಆರ್ಥಿಕತೆಗೆ ಚಾಲನೆ ನೀಡಿರುವುದು ಸ್ವಾಭಾವಿಕ. ಇಂತಹ ದೇಶಗಳ ಆರ್ಥಿಕತೆಯ ಹೆಚ್ಚು ಕ್ರಿಯಾಶೀಲ ವಲಯಗಳು ಅಮೆರಿಕಾದ ಮಾರುಕಟ್ಟೆಗಳನ್ನು ನಿರ್ಣಾಯಕವಾಗಿ ಅವಲಂಬಿಸಿವೆ. ಆದರೆ ಪ್ರಸ್ತುತ ಅಮೆರಿಕ ದುರ್ಬಲಗೊಂಡಿರುವ ಆರ್ಥಿಕ ಪರಿಸ್ಥಿತಿಯಿಂದಾಗಿ, ಆ ದೇಶಕ್ಕೆ ಆಗುವ ರಫ್ತಿನ ಪ್ರಮಾಣದಲ್ಲಿ ಗಮನಾರ್ಹ ಇಳಿಕೆಯಾಗುವುದರಿಂದ ಒಟ್ಟಾರೆಯ ವಿಶ್ವದ ಉತ್ಪಾದನೆಯ ಹೆಚ್ಚಳಕ್ಕೆ ಹೊಡೆತ ಬೀಳುವುದು ಸಹಜ. ಅದರಲ್ಲೂ ಅಮೆರಿಕಾಕ್ಕೆ ರಫ್ತು ಮಾಡುವ ಮೂಲಕವೇ ತನ್ನ ಆರ್ಥಿಕತೆಯನ್ನು ಬೃಹತ್ ಆಗಿ ಬೆಳೆಸಿಕೊಂಡಿರುವ ಚೀನಾದಂತಹ ರಾಷ್ಟ್ರಗಳಿಗೆ ಅಮೆರಿಕಾದ ಆರ್ಥಿಕ ಹಿಂಜರಿತದ ದುಷ್ಪರಿಣಾಮ ಬಹಳ ತೀವ್ರವಾಗಲಿದೆ. ಈ ಕಾರಣಗಳಿಂದಾಗಿಯೇ ಅಮೆರಿಕಾದ ಆರ್ಥಿಕತೆಯಲ್ಲಿ ನಿಧಾನತೆಯಾದರೆ, ಯುರೋಪಿಯನ್ ಒಕ್ಕೂಟ, ಜಪಾನ್ ಹಾಗೂ ಚೀನಾ ಮುಂತಾದ ದೇಶಗಳಲ್ಲೂ ಆದಾಯ ಹಾಗೂ ಉದ್ಯೋಗದ ಬೆಳವಣಿಗೆಯಲ್ಲಿ ನಿಧಾನತೆ ಅಥವಾ ಹಿಂಜರಿತ ಉಂಟಾಗುತ್ತದೆ.

ಆರ್ಥಿಕ ತಜ್ಞರ ಪ್ರಕಾರ ಅಮೆರಿಕದ ಸಾಲದ ಮೊತ್ತ ಸ್ಫೋಟಕ ಸ್ಥಿತಿಯಲ್ಲಿದೆ. ಅಮೆರಿಕಾದ ಸಾಲ ಪ್ರತಿದಿನ 1.4 ಬಿಲಿಯನ್ ಡಾಲರ್‌ನಷ್ಟು, ಅಂದರೆ ಪ್ರತಿ ನಿಮಿಷಕ್ಕೆ 1 ಮಿಲಿಯನ್ ಡಾಲರ್‌ನಷ್ಟು ಹೆಚ್ಚುತ್ತಿದೆ. ಅಮೆರಿಕಾದ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೆ 30,000 ಡಾಲರ್ ಸಾಲದ ಹೊರೆಯಿದೆ. ಮುಂದಿನ ದಿನಗಳಲ್ಲಿ ಇದು ಹೆಚ್ಚುತ್ತಾ ಹೋಗುತ್ತದೆ. ಅಮೆರಿಕಾದ ರಾಷ್ಟ್ರೀಯ ಸಾಲ ಜನವರಿ 2001ರಲ್ಲಿ ಜಾರ್ಜ್ ಬುಷ್ ಅಧಿಕಾರಕ್ಕೆ ಬಂದಾಗ 5.7 ಟ್ರಿಲಿಯನ್ ಡಾಲರ್ ಇದ್ದದ್ದು, 2008ರಲ್ಲಿ ಅಧಿಕಾರ ತ್ಯಜಿಸುವಾಗ 10 ಟ್ರಿಲಿಯನ್ ಡಾಲರ್ ದಾಟಲಿದೆ . ಕಳೆದ ವರ್ಷ ಅಮೆರಿಕಾದ ಒಟ್ಟು ಸಾಲದ ಮೇಲೆ ನೀಡಲಾದ ಬಡ್ಡಿ 430 ಬಿಲಿಯನ್ ಡಾಲರ್, 1975ರಲ್ಲಿ 'ರೇಗನ್' ಕಾಲದಲ್ಲಿ ಅಮೆರಿಕಾದ ಒಟ್ಟು ಸಾಲ ರಾಷ್ಟ್ರೀಯ ಒಟ್ಟು ಉತ್ಪನ್ನದ (ಜಿಡಿಪಿ) ಪ್ರತಿಶತ 35 ರಷ್ಟಿದ್ದರೆ, ಈಗ ಅದು ಪ್ರತಿಶತ 65 ರಷ್ಟಾಗಿದೆ.

Burieu of Labour Statistics ಪ್ರಕಾರ ಅಮೆರಿಕಾದ ನಿರುದ್ಯೋಗ ಪ್ರತಿಶತ 5ಕ್ಕಿಂತ ಹೆಚ್ಚಾಗಿದೆ. 2008-09ರಲ್ಲಿ ಅಮೆರಿಕಾದ ಗ್ರಾಹಕ ಖರ್ಚು (Comsumer Spending) 360 ಬಿಲಿಯನ್ ಡಾಲರ್‌ನಷ್ಟು ಕಡಿಮೆಯಾಗಲಿದೆ ಎಂಬುದು ಪ್ರಮುಖ ಆರ್ಥಿಕ ತಜ್ಞರ ಅಭಿಪ್ರಾಯವಾಗಿದೆ.

ಒಟ್ಟಾರೆಯಾಗಿ ಅಮೆರಿಕಾದ ಪ್ರಸ್ತುತ ಬಿಕ್ಕಟ್ಟು, ಆರ್ಥಿಕತೆಯು ಸ್ಥಗಿತತೆ ಅಥವಾ ಕುಂಠಿತಗೊಳ್ಳುತ್ತಿರುವ ಉತ್ಪಾದನೆ ಹಾಗೂ ಅದರ ಆದಾಯ ಮತ್ತು ಏರುತ್ತಿರುವ ಬೆಲೆಗಳು-ಬೆಳವಣಿಗೆ ಇಲ್ಲದ ಆರ್ಥಿಕ ಸ್ಥಗಿತತೆಗೆ ತಲುಪಿದೆ. ಇಡೀ ವಿಶ್ವದ ಆರ್ಥಿಕತೆ ಅಮೆರಿಕಾದ ಆರ್ಥಿಕತೆಯೊಂದಿಗೆ ತಳಕು ಹಾಕಿಕೊಂಡಿರುವುದರಿಂದ ಆ ದೇಶದ ಆರ್ಥಿಕ ಬಿಕ್ಕಟ್ಟು ಹಿಂಜರಿಕೆ- ಇಡೀ ವಿಶ್ವದ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿದೆಯೆನ್ನುವುದು ನಿಶ್ಚಿತ ಮತ್ತು ಅತ್ಯಂತ ಕಳವಳಕಾರಿ ವಿಷಯವೂ ಹೌದು.

ನಮ್ಮ ದೇಶದಲ್ಲಿ ಕಳೆದೆರಡು- ಮೂರು ವರ್ಷಗಳಿಂದ ತೀವ್ರ ಪ್ರಗತಿಯನ್ನು ಹೊಂದಿ ಉಚ್ಛ್ರಾಯ ಸ್ಥಿತಿಯಲ್ಲಿರುವ (Flourisring) IT (Information Technology), ಮತ್ತು ಬಿಪಿಓ ಹೊರಗುತ್ತಿಗೆ (Business Processing Outsourcing) ಹಾಗೂ ಕೆಪಿಓ ಜ್ಞಾನದ ಹೊರಗುತ್ತಿಗೆ (knowledge Processing Outsourcing)ಉದ್ಯಮಗಳು, ಅಮೆರಿಕಾದ ಆರ್ಥಿಕತೆಯ ಹಿಂಜರಿತದ ದುಷ್ಪರಿಣಾಮಗಳನ್ನು ತೀವ್ರವಾಗಿ ಎದುರಿಸಬೇಕಾಗುತ್ತದೆ. ಉದಾಹರಣೆಗೆ 2005ರಲ್ಲಿ ಲೆಹ್ಮನ್ ಬ್ರದರ್ಸ್ ಭಾರತದಲ್ಲಿ ಹೊರಗುತ್ತಿಗೆ (ಬಿಪಿಓ) ಕೇಂದ್ರಗಳನ್ನು ತೆರೆದಿದೆ. ಸುಮಾರು 2500ಕ್ಕೂ ಹೆಚ್ಚು ಉದ್ಯೋಗಿಗಳು ಈ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇತ್ತೀಚೆಗಷ್ಟೆ ಬಿಪಿಓ ನೌಕರರನ್ನು ಕಂಪನಿ ತ್ಯಜಿಸುವಂತೆ ನೋಟೀಸ್ ಜಾರಿಗೊಳಿಸಿತ್ತು. ನಮ್ಮ ದೇಶದ ಐಟಿ ಮತ್ತು ಬಿಪಿಓ ಸಂಸ್ಥೆಗಳ ಬಿಕ್ಕಟ್ಟಿನ ಗಾಂಭೀರ್ಯತೆಯನ್ನು ಈಗಲೇ ಊಹಿಸಲಾಗದು, ಆದರೆ, ಲೆಹ್ಮನ್ ಬ್ರದರ್ಸ್ ದಿವಾಳಿ, ಮೆರ್ರಿಲ್ ಲಿಂಚ್‌ನ ನಾಶ ಖಂಡಿತ ಆತಂಕ ಮೂಡಿಸಿದೆ. ಮುಂದಿನ ದಿನಗಳಲ್ಲಿ ಅಮೆರಿಕಾದ ಆರ್ಥಿಕತೆ ಚೇತರಿಸಿಕೊಳ್ಳದಿದ್ದರೆ, ಅದರ ಮೇಲೆ ಅವಲಂಬಿಸಿರುವ ಎಲ್ಲಾ ಐಟಿ ಮತ್ತು ಬಿಪಿಓ ಸಂಸ್ಥೆಗಳು ಈಗಿನ ಉಚ್ಛ್ರಾಯ ಸ್ಥಿತಿಯಿಂದ ಅಧೋಗತಿಗೆ ತಲುಪುವ (moment of death) ಕಾಲ ದೂರವಿರದು.

ನಮ್ಮ ದೇಶದಲ್ಲಿ ನವ ಉದಾರವಾದ ನೀತಿಗಳನ್ನು ಅನುಸರಿಸುತ್ತಿರುವ ಹಾಗೂ ದೇಶದ ಹಣಕಾಸು ವಲಯವನ್ನು ಮತ್ತಷ್ಟು ಸುಧಾರಿಸುವ ನೆಪದಲ್ಲಿ, ವಿದೇಶಿ ಕಂಪನಿಗಳಿಗೆ ಮುಕ್ತವಾಗಿ ತೆರೆಯುತ್ತಿರುವ ಉದಾರೀಕರಣದ ಪ್ರತಿಪಾದಕರು ಇದರಿಂದ ಎಚ್ಚೆತ್ತುಕೊಂಡು ಮುಂದಿನ ದಿನಗಳಲ್ಲಿ ಪಾಠ ಕಲಿಯಬೇಕಾಗಿದೆ. ❍

ಅಣು ಒಪ್ಪಂದ.......

ಪುಟ 7 ರಿಂದ

ನಾಲ್ಕನೆಯದಾಗಿ ಸೆಪ್ಟೆಂಬರ್ 5ರ ವಿದೇಶಾಂಗ ಸಚಿವರ ಹೇಳಿಕೆಯ ಪ್ರಕಾರ ಅಮೇರಿಕಾದ ಹಿತಾಸಕ್ತಿಗೆ ಅನುಗುಣವಾಗಿ ಭಾರತ ನಡೆದುಕೊಳ್ಳುತ್ತದೆ. ಉದಾಹರಣೆಗೆ ಇಂಧನ ಪುನರ್ ಉತ್ಪಾದನೆ(reprocessing)ಗೆ ಬೇಕಾದ ಉಪಕರಣ ಅಥವಾ ತಂತ್ರಜ್ಞಾನವನ್ನು ಇರಾನ್ ಅಭಿವೃದ್ಧಿಪಡಿಸುವುದನ್ನು ಅಮೇರಿಕಾ ತಡೆಯುತ್ತಿದೆ. ಇದಕ್ಕೆ ಭಾರತ ಒಪ್ಪುವಂತೆ ಮಾಡುವುದೇ ಅಮೇರಿಕಾದ ಉದ್ದೇಶ. ಮೇಲೆ ಹೇಳಿದ ಎನ್‌ಎಸ್‌ಜಿ ಸಡಿಲಿಕೆ ನಿರ್ಧಾರದ ಪ್ರಕಾರ ಭಾರತವು ಇರಾನ್ ವಿರುದ್ಧವಾಗಿ ಅಮೇರಿಕಾದ ಹಿತಾಸಕ್ತಿಗೆ ಅನುಗುಣವಾಗಿ ನಡೆದುಕೊಳ್ಳಲು ಒಪ್ಪಿಕೊಂಡಂತಾಗಿದೆ. ಒಂದು ವೇಳೆ ಒಪ್ಪದಿದ್ದರೆ ಭಾರತಕ್ಕೆ ಸರಬರಾಜಾಗುವ ಇಂಧನ ಮತ್ತು ಉಪಕರಣಗಳು ನಿಲ್ಲುತ್ತವೆ. ನಿರಂತರ ಇಂಧನ ಪೂರೈಕೆಗಾಗಲೀ ಅಥವಾ ಪುನರ್ ಉತ್ಪಾದನೆಗೆ ಬೇಕಾದ ತಂತ್ರಜ್ಞಾನವನ್ನು ಒದಗಿಸುವುದಕ್ಕಾಗಲಿ ಭಾರತಕ್ಕೆ ಯಾವುದೆ ಭರವಸೆ ನೀಡಿಲ್ಲ ಎಂದು ಬುಷ್ ಅಲ್ಲಿನ ಕಾಂಗ್ರೆಸ್ಸಿಗೆ ಬರೆದ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ. ಇದು ಹೈಡ್ ಕಾಯಿದೆಯ ಒಂದು ಪ್ರಮುಖ ಅಂಶವೂ ಹೌದು.

ಮಿಲಿಟರಿ ಮಿತ್ರತ್ವ :

ಅಣು ಒಪ್ಪಂದಕ್ಕೆ ಪೂರಕವಾಗಿ ಹಲವು ಮಿಲಿಟರಿ - ಆರ್ಥಿಕ ಒಪ್ಪಂದಗಳು ಇವೆ ಎಂಬುದನ್ನು ಈಗಾಗಲೇ ಹಲವು ಬಾರಿ ಚರ್ಚಿಸಲಾಗಿದೆ. ಎನ್‌ಎಸ್‌ಜಿ 'ಸಡಿಲಿಕೆ' ನಿರ್ಧಾರ ಬಂದ ಕೆಲವೇ ದಿನಗಳಲ್ಲಿ ರಕ್ಷಣಾ ಮಂತ್ರಿ ಎ.ಕೆ. ಆಂತೋನಿಯವರು ಅಮೇರಿಕಾಕ್ಕೆ ತೆರಳಿದಾಗ ಬುಷ್ ಆಡಳಿತವು ಯುದ್ಧ ವಿಮಾನಗಳನ್ನು ಖರೀದಿಸಲು ಭಾರತ ಒಪ್ಪಬೇಕು ಎಂದು ಒತ್ತಾಯಿಸಿದೆ. ಇದಲ್ಲದೆ ಮಿಲಿಟರಿಗೆ ಸಂಬಂಧಿಸಿದ ಇನ್ನೂ ಹಲವಾರು ಒಪ್ಪಂದಗಳು ಬರಲಿವೆ.

'ಮಲಬಾರ್ ಕವಾಯತು' ಎಂದು ಕರೆಸಿಕೊಳ್ಳುವ ಭಾರತ ಅಮೇರಿಕಾ ಜಂಟಿ ಮಿಲಿಟರಿ ಕವಾಯತು ಈ ತಿಂಗಳಲ್ಲಿ ಕೇರಳದ ಸಮುದ್ರ ತೀರದಲ್ಲಿ ನಡೆಯಲಿದೆ.

ಒಟ್ಟಾರೆಯಾಗಿ ದಕ್ಷಿಣ ಏಷ್ಯಾದಲ್ಲಿ ಪಾಕಿಸ್ತಾನದ ಬದಲಾಗಿ ಭಾರತವನ್ನು ಕಿರಿಯ ಪಾಲುದಾರನಾಗಿ ಮಾಡುವ ಅಮೇರಿಕಾದ ಬಯಕೆಗೆ ಕಾಂಗ್ರೆಸ್ ಸರ್ಕಾರ ಶರಣಾಗುತ್ತಿದೆ.

ಎನ್‌ಎಸ್‌ಜಿ ದೇಶಗಳ ನಿಯಮಗಳಿಂದ ವಿನಾಯ್ತಿ ('ವೇವರ್') ಸಿಕ್ಕಿದ ಮರುದಿನವೇ ಕಾಂಗ್ರೆಸ್ ಪಕ್ಷವು ಇದು ಭಾರತದ ವಿಜಯ ಎಂದು ಪಟಾಕಿ ಸಿಡಿಸಿದರೆ ಅತ್ತ ಪರಮಾಣು ವಾಣಿಜ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಆಸ್ಟ್ರೇಲಿಯಾ ತಾನು ಭಾರತಕ್ಕೆ ಪರಮಾಣು ಪೂರೈಕೆ ಮಾಡುವುದಿಲ್ಲ ಎಂದು ಹೇಳಿದೆ.

ಮೇಲಿನ ಎಲ್ಲಾ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಭಾರತದ ಪ್ರಧಾನಿ ಮನಮೋಹನ್‌ಸಿಂಗ್‌ರ ಪರಿಸ್ಥಿತಿ 'ಮುಗ್ಗರಿಸಿಬಿದ್ದರೂ ಮೂಗು ಮೇಲ' ಎಂದು ಬಡಾಯಿ ಕೊಚ್ಚಿಕೊಳ್ಳುವಂತಾಗಿದೆ.

ಮುಂದಿನ ದಿನಗಳಲ್ಲಿ ಈ ಒಪ್ಪಂದದಿಂದ ಭಾರತದ ಮೇಲೆ ದುಷ್ಪರಿಣಾಮ ಬೀರುವ ಹಲವಾರು ಅಂಶಗಳು ಬೆಳಕಿಗೆ ಬರಲಿವೆ. ಕರ್ನಾಟಕದ ಜನತೆ ಇದನ್ನೆಲ್ಲ ಅರಿತು ದುಷ್ಪರಿಣಾಮಗಳ ವಿರುದ್ಧ ಸತತ ಪ್ರಚಾರ ಹಾಗೂ ಹೋರಾಟಗಳ ಮೂಲಕ ಅಮೇರಿಕಾದ ಅಧ್ಯಕ್ಷ ಬುಷ್ ಮತ್ತು ಅವರ ಹಿಂಬಾಲಕರ ಕುತಂತ್ರವನ್ನು ಬಯಲಿಗೆಳೆಯಬೇಕು. ಭಾರತದಲ್ಲೂ ತಳವೂರಿರುವ ಅವರ ಏಜೆಂಟರ ಬಗ್ಗೆ ಜಾಗ್ರತರಾಗಿರಬೇಕು.

ಕರಾವಳಿಯಲ್ಲಿ ಕೋಮುರಾಜಕಾರಣ....

9 ರಿಂದ

ಿಚಾರ್ಜ್ ನಡೆಸಿತು. ಆಕ್ರೋಶಗೊಂಡ ಕೆಲ ಭಟನಾಕಾರರು ಪೋಲೀಸರ ಮೇಲೆ ಯಾಗಿ ಕಲ್ಲು ತೂರಿದರು. ಇದನ್ನೆ ವಾಗಿಟ್ಟುಕೊಂಡು ಪೋಲಿಸರು ಸಿಕ್ಕವರ ಲೆ ಮಾರಕ ದಾಳಿ ನಡೆಸಿದರು.

ರಂಗಿಗಳೇ ನಾಚುವಂತೆ ಪೋಲೀಸರು ಭಟನಾಕಾರರ ಮೇಲೆ ಕಲ್ಲು ತೂರಾಟ ಸಿದರು. ಕ್ರೈಸ್ತರಿಗೆ ಸೇರಿದ ಬೈಕ್‌ಗಳನ್ನು ನೆಲಕ್ಕೆ ದಿದರು, ಕಾರುಗಳ ಗಾಜುಗಳನ್ನು ಪುಡಿ ದರು. ಮಹಿಳೆಯರ ಮೇಲೂ ದೌರ್ಜನ್ಯ ಸಿದರು.

ಇಷ್ಟೆಲ್ಲಾ ನಡೆಯುತ್ತಿರುವಾಗ ಂಗಳೂರಿನಲ್ಲಿಯೇ ಇದ್ದ ಮುಖ್ಯಮಂತ್ರಿ ಗೀಡಾದ ಒಂದು ಚರ್ಚಿಗೂ ಭೇಟಿ ನೀಡದೆ, ಾಂತರ ಖಂಡನೀಯ, ಕ್ರೈಸ್ತರು ಕಾನೂನು ತ್ತಿಕೊಳ್ಳಬಾರದು, ಚರ್ಚ್‌ಗಳ ಮೇಲಿನ ದಾಳಿ ೋಧ ಪಕ್ಷಗಳ ಪಿತೂರಿ ಎಂದು ರಂಗಿಗಳ, ಪೋಲೀಸರ ನೆರವಿಗೆ ನಿಂತರು. ದೆಡೆ ದಾಳಿ ನಡೆಸಿದ್ದು ನಾವೇ ಇನ್ನೂ ಸುತ್ತೇವೆ ಎಂದು ಭಜರಂಗಿಗಳು ಧ್ಯಮಗಳಿಗೆ ಹೇಳಿಕೆ ನೀಡುತ್ತಿದ್ದರೆ, ಖ್ಯಮಂತ್ರಿ ವಿರೋಧ ಪಕ್ಷಗಳ ಮೇಲೆ ಹೊಣೆ ರಿದ ತೊಡಗಿದರು. ಮತಾಂತರ ನಿಲ್ಲಿಸಿ, ಭಟನೆ ಹತ್ತಿಕ್ಕಿ ಎಂದು ಪೋಲೀಸರಿಗೆ ಚನೆ ನೀಡಿ ಹೋದರು.

ಇತ್ತ ಸಾಯಂಕಾಲವಾಗುತ್ತಲೇ ಪರಿಸ್ಥಿತಿ ಡಾಯಿಸತೊಡಗಿತು. ಸ್ಟೇಟ್ ಬ್ಯಾಂಕ್ ಬಳಿ ದುಸೇನೆಯ ಕಾರ್ಯಕರ್ತನಿಗೆ ಅಪರಿಚಿತರು ನಡೆಸಿದರು. ಇದನ್ನೇ ನೆಪವಾಗಿಟ್ಟು ತಾಲಿಕ್‌ನ ಶಿಷ್ಯರು ಮರುದಿವಸ ಂಗಳೂರು ಬಂದ್‌ಗೆ ಕರೆ ನೀಡಿದರು. ಹಲ್ಲೆಯ ಣೆಯನ್ನು ಮುಸ್ಲಿಮರ ಮೇಲೆ ಹೊರಿಸಿ ದೂ- ಮುಸ್ಲಿಂ ಗಲಭೆಗೆ ಯತ್ನಿಸಲಾಯಿತು. ರ ಭಾಗವಾಗಿಯೇ ನಾಲ್ಕೈದು ಕಡೆ ಮುಸ್ಲಿಂ ವಕರ ಮೇಲೆ ಮರಣಾಂತಿಕ ಹಲ್ಲೆ ಸಲಾಯಿತು. ಈ ಸರಣಿ ಹಲ್ಲೆಗಳಿಂದ ರಿದ ಜನತೆ ಮರು ದಿವಸವೂ ದಿಗಿಳಿಯಲಿಲ್ಲ. ಅಲ್ಲಲ್ಲಿ ಬಸ್‌ಗಳಿಗೆ ಕಲ್ಲು ರಿ ಸಾರಿಗೆ ಸಂಚಾರವನ್ನು ತಡೆ ಯಲಾಯಿತು. ಒಟ್ಟಾರೆ ಸತತ ಮೂರನೇ ವೂ ಕರಾವಳಿಯಲ್ಲಿ ಜನ ಜೀವನ ತಗೊಂಡು ಜನತೆ ಪರದಾಡುವಂತಾಯಿತು. ರೂ ತೃಪ್ತರಾಗದ ಮತೀಯ ಸೈತಾನರು ಭೆಯನ್ನು ಮುಂದುವರಿಸಲು ತ್ನಿಸುತ್ತಿದ್ದಾರೆ. ಚರ್ಚುಗಳ ಮೇಲಿನ ಸರಣಿ ಿ ಮುಂದುವರಿದಿದೆ. ಉಜಿರೆ, ನೆಲ್ಯಾಡಿ ರ್ಚುಗಳ ಮೇಲೆ ಮತ್ತೆ ದಾಳಿಯಾಗಿದೆ.

ನಿಜವಾದ ಶಾಂತಿ ಯಾವಾಗ?

ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟನೆಗೆ ದ ಕ್ರಿಶ್ಚಿಯನ್ ಯುವಕರು ನೂರಾರು ಖ್ಯೆಯಲ್ಲಿ ಮಡಿಕೇರಿ ಜೈಲು ಸೇರಿದ್ದಾರೆ. ಷ್ಟು ಯುವಕರು ಬಂಧನದ ಭೀತಿಯಿಂದ ರು ತೊರೆದಿದ್ದಾರೆ. ಇತ್ತ ದಾಳಿ ಕೋರ ಭಯೋತ್ಪಾದಕ ಭಜರಂಗಿಗಳು ರಾಜಾರೋಷದಿಂದ ಗೃಹ ಸಚಿವ, ಉಸ್ತುವಾರಿ ಸಚಿವರ ಹಿಂದೆ ಮೀಸೆ ತಿರುವುತ್ತಾ ತಿರುಗಾಡುತ್ತಿದ್ದಾರೆ. ಲೆಕ್ಕ ಭರ್ತಿಗೆ ಕೆಲವು ನಿರುದ್ಯೋಗಿ ಯುವಕರನ್ನು ದಿನದ ಸಂಬಳದ ಆಧಾರದಲ್ಲಿ ಚರ್ಚ್ ಮೇಲಿನ ದಾಳಿ ಕೇಸ್‌ಗೆ ಫಿಕ್ಸ್ ಮಾಡಿ ರಾಜ ಮರ್ಯಾದೆಯೊಂದಿಗೆ ಜೈಲಿಗೆ ಕಳಿಸಲಾಗಿದೆ.

ಕರಾವಳಿಯಲ್ಲಿ ಬಿಜೆಪಿ ಬೆಳವಣಿಗೆಗೆ ತಮ್ಮ ಕೈಲಾದ ಕೊಡುಗೆ ನೀಡುತ್ತಲೇ ಬಂದ ಕಾಂಗ್ರೆಸ್ಸಿಗರು ಈಗ ನಿತ್ರಾಣಗೊಂಡ ಕೀರಲು ಧ್ವನಿಯಲ್ಲಿ ಸಂಘ ಪರಿವಾರದ ವಿರುದ್ಧ ಬೊಬ್ಬೆ ಹೊಡೆಯತೊಡಗಿದ್ದಾರೆ. ಮಂಗಳೂರಿನ ಪ್ರತಿ



ಚರ್ಚು, ಬೀದಿ ಆಸ್ಪತ್ರೆ ಸುತ್ತುತ್ತಿದ್ದಾರೆ. ಅಲ್ಪಸಂಖ್ಯಾತರಿಗೆ ಇವರ ಬಗ್ಗೆ ಯಾವುದೇ ನಂಬಿಕೆ ಹುಟ್ಟುತ್ತಿಲ್ಲ. ನೋಡುಗರಿಗೆ ಕಾಂಗ್ರೆಸ್ಸಿಗರ ಕರುಣಾಜನಕ ಸ್ಥಿತಿ ಮರುಕಹುಟ್ಟಿಸುತ್ತಿದೆ.

ಇಷ್ಟೆಲ್ಲದರ ನಂತರ ಈಗ ಶಾಂತಿ ಸಭೆಯ ನೆಪದಲ್ಲಿ ಕ್ರೈಸ್ತರನ್ನು ಹೆದರಿಸಿ ಬಾಯಿ ಮುಚ್ಚಿಸುವ ಕೆಲಸ ನಡೆಯುತ್ತಿದೆ. ಉಸ್ತುವಾರಿ ಪಾಲೆಮಾರ್ ನೇತೃತ್ವದಲ್ಲಿ ಕ್ರೈಸ್ತ ಮುಖಂಡರು, ಪಾದ್ರಿಗಳನ್ನು ಗುಪ್ತ ಸ್ಥಳದಲ್ಲಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಭಟ್ಟನ ಎದುರು ಕುಳ್ಳಿರಿಸಿ ಮತಾಂತರದ ಹೆಸರಿನಲ್ಲಿ ಧರ್ಮ ಬೋಧನೆ ನಡೆಸಲಾಗಿದೆ. ಇದಕ್ಕೆ ಶಾಂತಿ ಸಭೆಯ ಸುಂದರ ಹೆಸರಿಡಲಾಗಿದೆ. ಸಭೆಯ ತೀರ್ಮಾನದ ಭಾಗವಾಗಿ ಕ್ರೈಸ್ತ ಮುಖಂಡರನ್ನು ವಿಹೆಚ್‌ಪಿ ಮುಖಂಡರ ಜೊತೆ ಕುಳ್ಳಿರಿಸಿ ಸೌಹಾರ್ದ ಪತ್ರಿಕಾಗೋಷ್ಠಿ ನಡೆಸಲಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಮಿಂಚಿದ್ದು ಚರ್ಚ್ ಮೇಲಿನ ದಾಳಿಯನ್ನು ಮಹೇಂದ್ರ ಕುಮಾರ ನೊಂದಿಗೆ ಸೇರಿ ಹೊಣೆ ಹೊತ್ತುಕೊಂಡಿದ್ದ ಮಂಗಳೂರಿನ ಚೆಡ್ಡಿ ಟೆರರಿಸ್ಟ್ ಎಂ.ಬಿ.ಪುರಾಣಿಕ್ ಪತ್ರಿಕಾಗೋಷ್ಠಿಯಲ್ಲಿ ಬಲವಂತವಾಗಿ ಹಾಜರಿದ್ದ ಕ್ರೈಸ್ತ ಪಾದ್ರಿಗಳು, ಮುಖಂಡರು ಹರಕೆಯ ಕುರಿಗಳ ರೀತಿ ಕಾಣಿಸುತ್ತಿದ್ದರು. ಪುರಾಣಿಕ್ ಮಾತ್ರ ಇನ್ನು ಮೇಲೆ ಮತಾಂತರಗಳು ನಡೆಯುವುದಿಲ್ಲ ಎಂದು ಪಾದ್ರಿಗಳು ಹೇಳಿದ್ದಾರೆ ಎಂದು ಮಿಂಚುತ್ತಿದ್ದ.

ಇಷ್ಟರ ನಂತರ ಈಗ ಮೇಲ್ನೋಟದ ಶಾಂತಿ ಗೋಚರಿಸುತ್ತಿದ್ದರೂ ಯಾವುದೇ ಕ್ಷಣದಲ್ಲೂ ಗಲಭೆಗಳನ್ನು ಸಂಘ ಪರಿವಾರ ಹುಟ್ಟು ಹಾಕುವ ಸಾಧ್ಯತೆ ಇದೆ. ಮುಂದಿನ ಲೋಕಸಭಾ ಚುನಾವಣೆಯವರೆಗೂ ಕರಾವಳಿಯ ಜನತೆಗೆ ಮುಕ್ತಿ ಇಲ್ಲ. ಕರಾವಳಿಯನ್ನು ರಕ್ಷಿಸುವವರು ಯಾರು?

- ಸಂಜಯ

ಯಾರ ಪಿತೂರಿ- ಯಾವ ಪಿತೂರಿ

ಕ್ರಿಶ್ಚಿಯನ್ನರ ಮೇಲಿನ ಧಾಳಿಗಳು ಮೊದಲು ಓರಿಸ್ಸಾ ರಾಜ್ಯದಲ್ಲಿ ಆರಂಭವಾಗಿ ನಂತರ ಕರ್ನಾಟಕಕ್ಕೆ ಬಂತು. ಓರಿಸ್ಸಾ ರಾಜ್ಯದ ಬಿಜೆಪಿಯು ಮಿತ್ರಪಕ್ಷ ಬಿಜು ಜನತಾದಳದೊಂದಿಗೆ ಅಧಿಕಾರ ಹಂಚಿಕೊಂಡಿದೆ. ಕರ್ನಾಟಕದಲ್ಲಿ ಬಿಜೆಪಿಯು ತಾನೇ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಇದೀಗ ಧಾಳಿಗಳು ಮಧ್ಯ ಪ್ರದೇಶದ ಭೋಪಾಲ್‌ನಲ್ಲಿ ಆರಂಭವಾಗಿದೆ. ಭೋಪಾಲ್‌ನ ಜಬಲ್‌ಪುರದಲ್ಲಿ ಶತಮಾನಗಳಷ್ಟು ಹಳೆಯದಾದ ಸೇಂಟ್ ಪೀಟರ್ ಚರ್ಚ್‌ನ, ಸೇಂಟ್ ಪಾಲ್ ಕ್ಯಾಥೇಡ್ರಲ್‌ಗೆ ನುಗ್ಗಿ ಮೂರ್ತಿಗಳನ್ನು ಧ್ವಂಸಮಾಡಿ ನೆಲಹಾಸು ಇತ್ಯಾದಿಗಳಿಗೆ ಬೆಂಕಿ ಹಚ್ಚಲಾಗಿದೆ.

ತಮ್ಮ ಸರಕಾರಕ್ಕೆ ಕೆಟ್ಟ ಹೆಸರು ತರುವ ತಮ್ಮ ವಿರೋಧಿಗಳ ಪಿತೂರಿ ಇದು ಅಂತ ಯಡಿಯೂರಪ್ಪ ರಾಗಾಲಾಪ ಮಾಡುತ್ತಾರೆ.

ಒಂದಲ್ಲ ಒಂದು ರೀತಿ ಬಿಜೆಪಿ ಅಧಿಕಾರದಲ್ಲಿರುವ ಕಡೆ ಮಾತ್ರವೇ ಈ ರೀತಿ ಧಾಳಿ ನಡೆಯುತ್ತಿದೆ. ಭಜರಂಗ ದಳದ ರಾಜ್ಯ ಸಂಚಾಲಕ ನಾವೇ ದಾಳಿ ಮಾಡಿದ್ದು ಅಂತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇದಕ್ಕೆಲ್ಲಾ ಯಡಿಯೂರಪ್ಪ ಉತ್ತರ ಕೊಡುತ್ತಾರೆಯೇ? ಇದು ಯಾರ ಪಿತೂರಿ? ಯಾರ ಪಿತೂರಿ!

ಅವ್ಯಾಹತ ದಾಳಿಗಳು, ನಿಷ್ಕ್ರಿಯ ಸರ್ಕಾರ...........

ಪುಟ 7 ರಿಂದ

ಫಾಸ್ಟರ್ ಮೇಲೆ ಹಲ್ಲೆ ನಡೆಸಿ ಧ್ವಂಸ ಕಾರ್ಯ ನಡೆಸಿದ್ದಾರೆ.

ಬಂಟ್ವಾಳದ ಬೊಳಂಗಡಿ ಸಮೀಪದ ಚರ್ಚ್‌ನ ವೆಲಂಕಣಿ ಮಾತೆಯ ಪ್ರತಿಮೆಯನ್ನು ಪುಡಿ-ಪುಡಿ ಮಾಡಲಾಗಿದೆ.

ಚಿಕ್ಕಬಳ್ಳಾಪುರದಲ್ಲಿ ಚರ್ಚ್‌ನ ಛಾವಣಿ, ಕಿಟಕಿಗಾಜು ಒಡೆದು ಪುಡಿ ಮಾಡಿ ಕಂಬಗಳಿಗೆ ಹಾನಿ ಮಾಡಲಾಗಿದೆ. ಶಿಲುಬೆಯನ್ನು ಹೊರಗೆಸೆದು ಬೇಲಿ ನಾಶ ಮಾಡಲಾಗಿದೆ. ಇದೇ ಜಿಲ್ಲೆಯ ಗೌರಿ ಬಿದನೂರಿನ ಮಂಚೇನಹಳ್ಳಿ ಹೋಬಳಿಯ ಬಂಡಿರಾಮನಹಳ್ಳಿಯಲ್ಲಿ ಚರ್ಚ್ ಮೇಲೆ ಕಲ್ಲು ತೂರಾಟ ನಡೆದಿದೆ.

ಚಿಕ್ಕಮಂಗಳೂರು ಜಿಲ್ಲೆಯ ಕುದುರೆಮುಖದ ರೋಮನ್ ಕ್ಯಾಥೋಲಿಕ್ ಸಂಪ್ರದಾಯಕ್ಕೆ ಸೇರಿದ ಮೌಂಟ್ ಕಾರ್ಮೆಲ್ ಚರ್ಚ್ ಮೇಲೆ ಧಾಳಿ ಮಾಡಲಾಗಿದೆ. ಚಿಕ್ಕಮಗಳೂರು ತಾಲ್ಲೂಕಿನ ಮಾಗೋಡು ಗ್ರಾಮದಲ್ಲಿ 'ಯವನ ಸ್ವಾಮಿ ಧೇವಾಲಯದ ಫಾಸ್ಟರ್ ಸಮೀವುಲ್ಲಾ ಅವರ ಮೇಲೆ ಧಾಳಿ ಮಾಡಿ, ಪೀಠೋಪಕರಣ ಧ್ವಂಸ ಮಾಡಿದ್ದಾರೆ. ಕಡೂರು ತಾಲ್ಲೂಕಿನ ಸಿಂಗಟಗೆರೆ ಗ್ರಾಮದಲ್ಲಿ ಮನೆಯಲ್ಲಿ ಪ್ರಾರ್ಥನೆ ನಡೆಸುತ್ತಿದ್ದ ಕಲ್ಲೇಶಪ್ಪ-ಸಾವಿತ್ರಿ ಎಂಬ ದಂಪತಿಗಳ ಮೇಲೆ ಅವರು ಕ್ರಿಶ್ಚಿಯನ್ ಪ್ರಾರ್ಥನೆ ಮಾಡುತ್ತಿದ್ದ ಕಾರಣಕ್ಕಾಗಿ ಹಲ್ಲೆ ಮಾಡಲಾಗಿದೆ. ಆಶ್ಚರ್ಯ ಮತ್ತು ಆಘಾತದ ವಿಷಯ ಎಂದರೆ ಹಲ್ಲೆಗೊಳಗಾದ ಕಲ್ಲೇಶಪ್ಪ - ಸಾವಿತ್ರಿಯವರನ್ನೇ ಪೊಲೀಸರು ಬಂಧಿಸಿರುವುದು. ಕಲ್ಲೇಶಪ್ಪ ಅವರ ಮೇಲೆ ದನಗಳ ಮೂತ್ರ ಸುರಿದ ಭಜರಂಗಿಗಳು ಅವರನ್ನು ಸಂಪೂರ್ಣ ಬೆತ್ತಲೆ ಮಾಡಿ ಥಳಿಸಿದ್ದಾರೆ. ಕೊಪ್ಪ ತಾಲ್ಲೂಕಿನ ಜಯಪುರದ ಟೈಂ ಎಂಡ್ ಪುಲ್ ಗೋಸ್ಪಾಲ್ ಹಾರ್‌ವೆಸ್ಟರ್ ಪ್ರರ್ಥನಾ ಮಂದಿರಕ್ಕೆ ನುಗ್ಗಿದ 15-20 ಜನರ ಗುಂಪು ಪ್ರಾರ್ಥನಾ ಮಂದಿರ ಗಾಜುಗಳನ್ನು ಗುಡಿಗುಟ್ಟಿ ಹೂಕುಂಡಗಳನ್ನು ಒಡೆದು ಹಾಕಿದೆ. ಪ್ರಾರ್ಥನೆ ಮಾಡುತ್ತಿದ್ದವರ ಮೇಲೆ ಮಹಿಳೆಯರೂ ಪುರುಷರೆನ್ನದೇ ಹಲ್ಲೆ ಮಾಡಿದ್ದಾರೆ.

ಗರ್ಭಿಣಿ ಮಹಿಳೆಯರನ್ನು ಬಿಡದೆ ಹಲ್ಲೆಗೆ ಮುಂದಾದ ಈ ಗುಂಪಿನ ನೀಚತನ ತಡೆಯಲು ಮುಂದಾದ ಪಾದ್ರಿಗಳ ಮೇಲೆ ಕೂಡ ಹಲ್ಲೆ ನಡೆಸಲಾಗಿದೆ. ಕೋಲಾರ ಪ್ರಸಿದ್ಧ ಚರ್ಚ್ ಮೇಲೆ ದಾಳಿ ಮಾಡಿದ ಭಜರಂಗಿಗಳು ಇಂಥ ಮತ್ತೊಂದು ಪ್ರತಿಮೆ ಇಟಲಿಯ ರೋಮ್ ಮಾತ್ರ ಇದೆ ಎನ್ನಲಾದ ಅಪೂರ್ವ ಕ್ರಿಸ್ತನ ಪ್ರತಿಮೆಯನ್ನು ಒಡೆದು ನಾಶ ಮಾಡಿದೆ. ಧಾರವಾಡ ಚರ್ಚ್ ಮೇಲೆ ದಾಳಿ ನಡೆಸಲಾಗಿದೆ.

ಒಲಂಪಿಕ್ಸ್‌ನಲ್ಲಿ ಚೀನಾದ ಚಿನ್ನದ ಸೂರೆ

ಬಂಡವಾಳಶಾಹಿ ಮಾಧ್ಯಮಗಳಲ್ಲಿ ಅಪಪ್ರಚಾರ

ಜಿ.ಎನ್.ನಾಗರಾಜ್

"ಭಲಾರೇ! ಬೀಜಿಂಗ್"!!, "ಕ್ರೀಡಾ ಜಗತ್ತಿನ ಹೊಸ ಸೂಪರ್‌ಪವರ್‌ನ ಉದಯ!"
"ನಮ್ಮಲ್ಲೂ ಮೂಡಲಿ ಚೀನೀಯರ ಛಲ"

ಹೀಗೆ ಬಗೆ ಬಗೆಯ ಬೆಡಗಿನ ಉದ್ಗಾರಗಳು ಪತ್ರಿಕೆಗಳ ಮುಖಪುಟ, ಕ್ರೀಡಾಪುಟಗಳನ್ನು ಅಲಂಕರಿಸಿದವು. ಮಾಧ್ಯಮಗಳಿಗಂತೂ ಬೀಜಿಂಗ್ ಒಲಂಪಿಕ್ಸ್ ಬಣ್ಣಗಳ, ಹಾಗೂ ಬಣ್ಣನೆಯ ಮಾತುಗಳ ಸುಗ್ಗಿಯಾಯಿತು.

ಒಂದು ಕಡೆ ಚೀನಾ ಒಲಂಪಿಕ್ಸ್‌ನ್ನು ಸಂಘಟಿಸಿದ ಆಶ್ಚರ್ಯಕರ ರೀತಿ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭಗಳ ಬೆರಗು ಮೂಡಿಸುವ ಸಾಂಸ್ಕೃತಿಕ ವೈಭವ ಜಗತ್ತಿನ ಕಣ್ಮನಗಳ ಸೂರೆಗೊಂಡರೆ ಮತ್ತೊಂದು ಕಡೆ ಇತ್ತೀಚಿಗೆ 1984ರಲ್ಲಿ ಒಲಂಪಿಕ್ಸ್‌ನಿಂದ ಆರಂಭಿಸಿ ಕೇವಲ 6 ಒಲಂಪಿಕ್ಸ್‌ಗಳಲ್ಲಿ ಮಾತ್ರ ಭಾಗವಹಿಸಿರುವ ಚೀನಾ 51 ಚಿನ್ನದ ಪದಕಗಳು, ಒಟ್ಟು ನೂರು ಪದಕಗಳೊಂದಿಗೆ ಕ್ರೀಡಾ ಜಗತ್ತಿನ ಸಾರ್ವಭೌಮ ರಾಷ್ಟ್ರವಾಗಿ ರೂಪುಗೊಂಡಿರುವ ಬಗೆ, ಅಮೇರಿಕಾವನ್ನು ಯುರೋಪಿನ ದೇಶಗಳನ್ನು ಹಿಂದೂಡಿರುವ ಸಾಧನೆಯ ಬಗ್ಗೆ ಜಗತ್ತಿನಾದ್ಯಂತ ಆಶ್ಚರ್ಯ ವ್ಯಕ್ತವಾಗಿದೆ. ಜನಸಾಮಾನ್ಯರಿಗೆ ಆಶ್ಚರ್ಯದ ಜೊತೆಗೆ ಸಂತೋಷವನ್ನು ತಂದಿದೆ. ಚೀನಾದ ಬಗ್ಗೆ ಹಲವಾರು ದಶಕಗಳ ಕಾಲ, ಅದರಲ್ಲಿಯೂ ಒಲಂಪಿಕ್‌ಗೆ ಮೊದಲು ಟಿಬೆಟ್‌ನ ವಿದ್ರೋಹಿಗಳ ಕುಕೃತ್ಯಗಳ ಸಂದರ್ಭದಲ್ಲಿ, 1989ರಲ್ಲಿ ತಿಯಾನ್‌ಮನ್ ಚೌಕದಲ್ಲಿ ನಡೆದ ವಿದ್ಯಾರ್ಥಿಗಳ ಚಳುವಳಿಯ ಸಮಯದಲ್ಲಿ ಇನ್ನೂ ಹಲವಾರು ಸಣ್ಣ ದೊಡ್ಡ ಘಟನೆಗಳ ಬಗ್ಗೆ ಸಾಮ್ರಾಜ್ಯಶಾಹಿಗಳ ನಿಯಂತ್ರಣದ ಜಾಗತಿಕ ಮಾಧ್ಯಮ ಲೋಕ ಬಿತ್ತಿದ ಅನೇಕ ಸುಳ್ಳುಗಳು, ಮಹಾ ಸುಳ್ಳುಗಳು ಧೂಳಿಪಟವಾಗಿವೆ. ಚೀನಾದ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಜನ ಆಸಕ್ತರಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಚೀನಾದ ಆರ್ಥಿಕ ಬೆಳವಣಿಗೆಯ ಬಗ್ಗೆ ಜನ ಆಕರ್ಷಿತರಾಗಿದ್ದಾರೆ.

ಇದು ಜಗತ್ತಿನ ಸಾಮ್ರಾಜ್ಯಶಾಹಿಗಳಿಗೆ ಬಂಡವಾಳಶಾಹಿಗಳಿಗೆ ಗಾಬರಿಯನ್ನು ಮೂಡಿಸಿದೆ. ಚೀನಾದ ಜನಪ್ರಿಯತೆ ಹೆಚ್ಚುವುದನ್ನು ತಡೆಯಲು ಅನೇಕ ರೀತಿಯ ಅಪಪ್ರಚಾರಗಳ ಸುರಿಮಳೆಯೂ ನಡೆದಿದೆ. ಉದ್ಘಾಟನಾ ಸಮಾರಂಭದಲ್ಲಿ ಆಕರ್ಷಿಸಿದ ಬಾಲಕಿಯ ಕಂಠ ಬೇರೆ ಬಾಲಕಿಯದು, ಜಿಮ್ನಾಸ್ಟಿಕ್ಸ್‌ನ ಕ್ರೀಡಾಳುವಿನ ವಯಸ್ಸು ಸುಳ್ಳು ಹೇಳಲಾಗಿದೆ.....ಇತ್ಯಾದಿ ಇತ್ಯಾದಿ..

ಇವೆಲ್ಲದರ ನಡುವೆ ಒಲಂಪಿಕ್ಸ್‌ನ ಸೂಪರ್‌ಪವರ್‌ಆಗಿ ಚೀನಾ ಉದಯಿಸಿದ್ದು ಪಾಶ್ಚಿಮಾತ್ಯ ಮಾಧ್ಯಮಗಳಿಗೆ ನುಂಗಲಾರದ ತುತ್ತಾಗಿದೆ. ಇಷ್ಟೊಂದು ಕ್ರೀಡೆಗಳಲ್ಲಿ, ಚೀನಾ ಬಹಳ ಹಿಂದುಳಿದಿದ್ದ ಕ್ರೀಡೆಗಳಲ್ಲಿಯೂ ಹಲವಾರು ಒಲಿಂಪಿಕ್ಸ್‌ಗಳಲ್ಲಿ ಚಿನ್ನದ ಪದಕಗಳನ್ನು ಗಳಿಸಿದ ದೇಶಗಳನ್ನು ಮೀರುವಂತೆ ಕೆಲವೇ ವರ್ಷಗಳಲ್ಲಿ ಹೇಗೆ ಸಾಧನೆ ಮಾಡಿತು? ಇನ್ನೂ ಅಭಿವೃದ್ಧಿಶೀಲ ದೇಶವಾಗಿರುವ, ತಲಾ ಆದಾಯ, ತಲಾ ಭೂಮಿ ಮೊದಲಾದ ಸಂಪತ್ತು ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಬಹಳ ಕಡಿಮೆ ಪ್ರಮಾಣದಲ್ಲಿರುವ ಚೀನಾ ಅಮೇರಿಕಾದಂತಹ ಸಂಪದ್ಭರಿತ ದೇಶವನ್ನು ಹೇಗೆ ಹಿಂದೆ ಹಾಕಿತು ಎಂಬ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕಂಡುಕೊಳ್ಳಲು ವಿಫಲರಾಗಿದ್ದಾರೆ.

ಇನ್ನು ಭಾರತದಲ್ಲಂತೂ ಈ ಪ್ರಶ್ನೆಗಳೂ ಇನ್ನೂ ಗಂಭೀರ ಸ್ವರೂಪವನ್ನು ಪಡೆಯುತ್ತವೆ. ಭಾರತದಲ್ಲಿ ಜನಸಂಖ್ಯೆ ಜಾಸ್ತಿ ಅದರಿಂದಾಗಿ ಬಡತನ ಮೊದಲಾದ ಸಮಸ್ಯೆಗಳು. ಅಮೇರಿಕಾದಂತೆ ಶ್ರೀಮಂತ ದೇಶವಲ್ಲಾ ಎಂದು ಪೊಳ್ಳು ಪರಿಹಾರಗಳನ್ನು ಇನ್ನು ಮುಂದುಡುವಂತಿಲ್ಲ. ಭಾರತಕ್ಕಿಂತ ಹೆಚ್ಚು ಜನಸಂಖ್ಯೆ,-ಕಡಿಮೆ ಭೂ ಸಂಪತ್ತು ಇರುವ ಚೀನಾ ನೂರು ಪದಕ ಈ ಸಾಧನೆ ಮಾಡಬಹುದಾದರೆ ಭಾರತ ಏಕೆ ಕೇವಲ ಮೂರು (ಹಿಂದಿನ ಒಲಿಂಪಿಕ್ಸ್‌ಗಳಲ್ಲಿ ಕೇವಲ ಒಂದು ಕಂಚು ಅಥವಾ ಬೆಳ್ಳಿ) ಈ ಪ್ರಶ್ನೆ ಮತ್ತೆ ಮತ್ತೆ ಏಳುತ್ತಿದೆ? ಇದಕ್ಕೆ ಮಾಧ್ಯಮಗಳು, ಪತ್ರಿಕೆಗಳು ಅವುಗಳಲ್ಲಿ ಚರ್ಚೆ ಮಾಡುವ ಲೇಖನ ಬರೆಯುವ ಪರಿಣತರು ಉತ್ತರ ನೀಡಿಲ್ಲ. ಕೇವಲ ಒಂದು ಇಂಗ್ಲೀಷ್ ಪತ್ರಿಕೆ ಮಾತ್ರ ಚೀನಾ ಕ್ರೀಡಾ ಸೌಲಭ್ಯಗಳು, ಕ್ರೀಡೆಗಳಲ್ಲಿ ಜನ ಸಮುದಾಯದ ಬೃಹತ್ ಭಾಗವಹಿಸುವಿಕೆ ಬಗ್ಗೆ ಮಾಹಿತಿ ನೀಡಿತು. ಆದರೆ ಅನೇಕ ಪತ್ರಿಕೆಗಳು, ಮಾಧ್ಯಮಗಳು ಕಂಡುಕೊಂಡ ಉತ್ತರ ಅವರ ಬೌದ್ಧಿಕ ದಿವಾಳಿ ಕೋರತನವನ್ನು ಬಯಲಿಗಿಡುವಂತಿತ್ತು.

ಚೀನಾ ಆರ್ಥಿಕವಾಗಿ ಭಾರತಕ್ಕಿಂತ ವೇಗವಾಗಿ ಬೆಳೆಯುತ್ತಿದೆ ಏಕೆ? ಚೀನಾ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಬಡತನ ನಿರ್ಮೂಲನೆಯಲ್ಲಿ ಒಟ್ಟಾರೆ ಮಾನವ ಅಭಿವೃದ್ಧಿಯಲ್ಲಿ ಭಾರತಕ್ಕಿಂತ ಮುಂದಿದೆ ಏಕೆ? ಚೀನಾ ಮೂಲಭೂತ ಸೌಕರ್ಯಗಳಲ್ಲಿ, ರಫ್ತಿನಲ್ಲಿ ಮುಂದಿದೆ ಏಕೆ? ವಿಜ್ಞಾನ, ಸಂಶೋಧನೆ, ತಂತ್ರಜ್ಞಾನದಲ್ಲಿ ಮುಂದಿದೆ ಏಕೆ? ಇವೆಲ್ಲ ಪ್ರಶ್ನೆಗಳಿಗೂ ಭಾರತದ ಪತ್ರಿಕೆಗಳು ಇಲ್ಲಿಯವರೆಗೂ ಕಂಡುಕೊಂಡ ಸುಲಭ ಉತ್ತರ ಭಾರತ ಒಂದು ಪ್ರಜಾಪ್ರಭುತ್ವ, ಚೀನಾ ಒಂದು ಸರ್ವಾಧಿಕಾರಿ ದೇಶ. ಆದ್ದರಿಂದಲೇ ಭಾರತ ಚೀನಾವನ್ನು ಈ ಯಾವುದೇ ರಂಗದಲ್ಲಿಯೂ ಹಿಂದೆ ಹಾಕಲಾಗಿಲ್ಲ. ಈ ಮೇಲೆ ನಮೂದಿಸಿದ ಎಲ್ಲಾ ರಂಗಗಳ ಅಭಿವೃದ್ಧಿಗಿಂತಲೂ ಪ್ರಜಾಪ್ರಭುತ್ವವೇ ಮೌಲಿಕವಾದದ್ದು. ಆದ್ದರಿಂದ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ಈ ಎಲ್ಲಾ ರಂಗಗಳಲ್ಲಿ ಹಿಂದುಳಿದರೂ ಚಿಂತೆಯಿಲ್ಲ! ಇದು ಭಾರತದ ಪತ್ರಿಕೆ, ಮಾಧ್ಯಮಗಳು, ಅನೇಕ ಬುದ್ಧಿ ಜೀವಿಗಳು ಸಂಶೋಧನಾ ಸಂಸ್ಥೆಗಳು ಪದೇ ಪದೇ ಪುನರುಚ್ಚರಿಸುತ್ತಿರುವ ವಾದ.

ಚೀನಾದ ಒಲಿಂಪಿಕ್ಸ್ ಸಾಧನೆಯ ಸಂದರ್ಭದಲ್ಲಿಯೂ, ಭಾರತದ ಮಾಧ್ಯಮ ಪತ್ರಿಕೆಗಳು ಇದೇ ವಾದವನ್ನು ಮುಂದಿಡುತ್ತಿವೆ. ಅಮೆರಿಕಾ, ಯುರೋಪಿನ ಮಾಧ್ಯಮಗಳು ಪತ್ರಿಕೆಗಳಲ್ಲಿ, ಚೀನಾದಲ್ಲಿನ ಸರ್ವಾಧಿಕಾರಿ ವ್ಯವಸ್ಥೆಯೇ ಚೀನಾ ಒಲಿಂಪಿಕ್ಸ್‌ನ್ನು ಅತ್ಯಂತ ಯಶಸ್ವಿಯಾಗಿ ಸಂಘಟಿಸಲು ಕಾರಣ, ಚೀನಾದಲ್ಲಿ



ಆಟಗಾರರನ್ನು ಮಿಲಿಟರಿ ರೀತಿಯಲ್ಲಿ ದಂಡಿಸಿ ಒತ್ತಡ ಹೇರಿ ತಯಾರು ಮಾಡಲಾಗುತ್ತಿದೆ.ಸಣ್ಣ ವಯಸ್ಸಿನಲ್ಲಿಯೇ ಅವರನ್ನು ಬಾಲ್ಯದ ಸಂತೋಷಗಳಿಂದ ವಂಚಿಸಿ ದೇಹ ದಂಡನೆಗೆ ಗುರಿ ಮಾಡುತ್ತಾರೆ, ಕಾರ್ಖಾನೆಗಳಲ್ಲಿ ವಸ್ತುಗಳ ಸಾಮೂಹಿಕ ಉತ್ಪಾದನೆ ಮಾಡುವ ರೀತಿಯಲ್ಲಿ ಕ್ರೀಡಾಳುಗಳನ್ನು ಉತ್ಪಾದಿಸುತ್ತಾರೆ ಎಂದೆಲ್ಲಾ ದ್ವೇಷಪೂರಿತ ಆಪಾದನೆಗಳನ್ನು ಹೇರಲಾಗಿದೆ. ಹಿಂದೆ ಸೋವಿಯತ್ ಒಕ್ಕೂಟ ಮತ್ತು ಇತರ ಪೂರ್ವ ಯೂರೋಪಿನ ಸಮಾಜವಾದಿ ದೇಶಗಳು ಒಲಿಂಪಿಕ್ಸ್‌ನಲ್ಲಿ ಮೇಲುಗೈ ಸಾಧಿಸಿದ್ದಾಗ ಮಾಡಿದ್ದ ಆರೋಪಗಳನ್ನೇ ಚರ್ವಿತಚರ್ವಣ ಎಂಬಂತೆ ಪುನರುಚ್ಚರಿಸಲಾಗುತ್ತಿದೆ.

ಚೀನಾದಲ್ಲಿ, ಕ್ಯೂಬಾದಲ್ಲಿ ಅಥವಾ ಹಿಂದಿನ ಸಮಾಜವಾದಿ ದೇಶಗಳಲ್ಲಿ ಸಾಹಿತ್ಯ, ಕಲೆ, ವಿಜ್ಞಾನ, ಕೈಗಾರಿಕೆ, ಕೃಷಿಗಳಲ್ಲಿ ವೇಗದ ಬೆಳವಣಿಗೆ ಅವುಗಳ ಜೊತೆಗೆ ಕ್ರೀಡೆಯಲ್ಲಿಯೂ ಮೇಲುಗೈ, ಈ ಎಲ್ಲಾ ಸಂಗತಿಗಳ ಹಿಂದಿನ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವುದನ್ನು ಮತ್ತು ಆ ಮೂಲಕ ಆರೋಗ್ಯಕರ, ವಸ್ತು ನಿಷ್ಠ ವಿಶ್ಲೇಷಣೆ ಮಾಡುವುದನ್ನು ತಪ್ಪಿಸಿಕೊಳ್ಳುವುದೇ ಈ ಆಪಾದನೆಗಳ ಮುಖ್ಯ ಉದ್ದೇಶ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ಚೀನಾದ ಕ್ರೀಡಾ ಸಾಧನೆಯ ಹಿಂದಿನ ವಾಸ್ತವವನ್ನು ಅರ್ಥ ಮಾಡಿಕೊಳ್ಳುವುದೆಂದರೆ ಸಮಾಜವಾದಿ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಸಮಾಜವಾದಿ ವ್ಯವಸ್ಥೆಯೇ ಉತ್ತಮ ಎಂದು ಜನರಿಗೆ ತಿಳಿಸುವುದು ಎಂದೇ ಅರ್ಥವಾಗುತ್ತದೆ. ಇದನ್ನು ಬಂಡವಾಳಶಾಹಿ ಮಾಲೀಕತ್ವದ ಬಹುರಾಷ್ಟ್ರೀಯ ಕಂಪನಿಗಳ ಜಾಹೀರಾತಿನ ಮೇಲೆ ಅವಲಂಬಿಸಿದ ಮಾಧ್ಯಮಗಳು ಮಾಡಲು ಸಾಧ್ಯವೇ? ತಮ್ಮ ಕಾಲನ್ನು ತಾವೇ ಕತ್ತರಿಸಿಕೊಳ್ಳುವುದು ಸಾಧ್ಯವೇ? ○

ಕವನ ನಿದ್ದೆಗೆಟ್ಟ ರಾತ್ರಿಗಳು

ನಾನು
ರಾತ್ರಿ ಮಲಗಿದ್ದೆ
ಬ್ಯಾಡ್ (ಬಿ-ಎ-ಡಿ) ಕನಸು ಬಿದ್ದು
ಮೆಟ್ಟಬಿದ್ದು, ಎದ್ದುಕುಳಿತೆ
ಮೌನವಾಗಿ ನಿದ್ರಿಸುವ
ರಾತ್ರಿಗಳು ಸಹ
ಎದ್ದುಕುಳಿತಿದ್ದವು, ನಿದ್ದೆಗೆಟ್ಟು.
ಮತ್ಸರದ ಹೊಗೆಯಲ್ಲಿ
ಉಸಿರುಗಟ್ಟಿ
ಕೆಮ್ಮುತ್ತಿದ್ದವು ರಾತ್ರಿಗಳು.
ಭಯದ ಕರಿನೆರಳ
ಭೂತಗಳು ಕುಣಿಯುತ್ತಿದ್ದವು
ನಗ್ನವಾಗಿ
ಇರುಳ ಕಂಬಳಿ ಹೊದ್ದು
ಬೆಚ್ಚಗೆ ಮಲಗಿದ್ದ
ರಾತ್ರಿಗಳು, ಬೆಚ್ಚಿಬಿದ್ದು
ಉಚ್ಚೆ ಹೊಯ್ದುಕೊಂಡಿದ್ದವು
ಸಿಡಿದ ಬಾಂಬಿನ ಸದ್ದು
ಕಿವಿಗಳಲ್ಲಿ ಗುಂಯ್ ಗುಡುತ್ತಿತ್ತು.
ಹರಿದ ನೆತ್ತರು
ಮಾನವ ದೇಹದ
ಮೂಳೆ, ತುಕಡಿಗಳು
ಮಾಂಸದ ತುಣುಕುಗಳ ಕಂಡು
ಬಿಕ್ಕುತ್ತಿದ್ದವು ಚುಕ್ಕಿಗಳು
ಚಂದಿರನ ಕಣ್ಣಲ್ಲಿ
ನೀರು ಹರಿಯುತ್ತಿತ್ತು.
ನೋವಿನಿಂದ ನರಳುತ್ತಿದ್ದವು
ರಾತ್ರಿಗಳು, ಗಾಯಗೊಂಡು
ಅಜ್ಜಿ ಹೇಳಿದ ಕಥೆ
ನೆನಪಾಯಿತು
ಗವ್ವೆನ್ನುವ ರಾತ್ರಿಯಲ್ಲಿ
ದೆವ್ವ, ಭೂತಗಳು
ಕುಣಿಯುತ್ತವೆ ಸ್ಮಶಾನದಲ್ಲಿ
ಹೌದು!
ಕುಣಿಯುತ್ತಿದ್ದವು
ದೆವ್ವ, ಭೂತಗಳು
ಸ್ಮಶಾನದಲ್ಲಲ್ಲ
ಮಂಧಿರ, ಮಸೀದಿಗಳಲ್ಲಿ

■ ಹುಲಿಕಟ್ಟಿ ಚನ್ನಬಸಪ್ಪ
ಸಿರುಗುಪ್ಪ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH